ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 26 ಗುರುವಾರ 2022

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 40 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಫಾರಂಗಳ ಕೊರತೆ: ಮೈಸೂರು ಪಾಲಿಕೆಯಲ್ಲಿ ಜನನ-ಮರಣ ಪ್ರಮಾಣ ಪತ್ರಕ್ಕೂ ಅಭಾವ!

ವಲಯ ಕಚೇರಿಗಳಲ್ಲಿ ದಿನಕ್ಕೆ ಒಬ್ಬರಿಗೆ ಒಂದೇ ಪ್ರಮಾಣಪತ್ರ ಲಭ್ಯ

ಮೈಸೂರು, ಮೇ 25(ಆರ್‌ಕೆ)- ಫಾರಂಗಳ(ನಮೂನೆ ಪ್ರತಿ) ಕೊರತೆಯಿಂದಾಗಿ ಮೈಸೂರು ನಗರಪಾಲಿಕೆಯ ವಲಯ ಕಚೇರಿಗಳಲ್ಲಿ ದಿನಕ್ಕೆ ಒಬ್ಬರಿಗೆ ಒಂದು ಜನನ-ಮರಣ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ.

ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿ ಹಾಗೂ ಪ್ರಧಾನ ಕಚೇರಿಗಳಲ್ಲಿ ಕಳೆದ ಒಂದು ತಿಂಗಳಿಂದ ಇದಕ್ಕೆ ನಿಗದಿತ ಫಾರಂಗಳ ಕೊರತೆಯಿಂದಾಗಿ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬೇರೆ ಬೇರೆ ಉದ್ದೇಶಕ್ಕೆ ಈ ಪ್ರಮಾಣ ಪತ್ರ ಅಗತ್ಯವಿರುವುದರಿಂದ ಒಂದಕ್ಕಿಂತ ಹೆಚ್ಚು ಒರಿಜಿನಲ್ ಜನನ-ಮರಣ ಪ್ರಮಾಣಪತ್ರಗಳನ್ನು ನಾಗರಿಕರು ಕೇಳುತ್ತಿದ್ದರೂ, ಪಾಲಿಕೆ ಮಾತ್ರ ಒಂದೇ ಒಂದನ್ನು ಕೊಡುತ್ತಿರುವುದರಿಂದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಒಂದು ಪ್ರತಿಗೆ 5 ರೂ. ನಂತೆ ಶುಲ್ಕ ಪಾವತಿಸಲು ಮುಂದಾದರೂ, ಒಂದಕ್ಕಿಂತ ಹೆಚ್ಚು ಪ್ರಮಾಣ ಪತ್ರ ನೀಡುತ್ತಿಲ್ಲ ಎಂದು ವಲಯ ಕಚೇರಿ-1ರಲ್ಲಿ ತಮ್ಮ ಮಕ್ಕಳ ಜನನ ಪ್ರಮಾಣ ಪತ್ರ ಪಡೆಯಲು ಬಂದಿದ್ದ ಮಹಿಳೆಯರು ದೂರುತ್ತಿದ್ದರೆ, ಪ್ರಧಾನ ಕಚೇರಿಯಿಂದಲೇ ನಮಗೆ ಮಿತ ಪ್ರಮಾಣದಲ್ಲಿ ಫಾರಂಗಳ ಸರಬರಾಜು ಮಾಡುತ್ತಿದ್ದಾರೆ, ನಾವು ಜನರ ಕೆಂಗಣ್ಣಿಗೆ ಗುರಿಯಾಗಬೇಕಾಗಿದೆ. ನಿತ್ಯ ಗಲಾಟೆ ಮಾಡುತ್ತಿದ್ದಾರೆ ಎಂದು ನಗರ ಪಾಲಿಕೆ ಸಿಬ್ಬಂದಿ ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಪಾಲಿಕೆ ಸಾಂಖ್ಯಿಕ ಅಧಿಕಾರಿ ಅನಿಲ್ ಕ್ರಿಸ್ಟಿ, ವಲಯ ಕಚೇರಿ-6 ಅನ್ನು ಹೊರತುಪಡಿಸಿ ಉಳಿದ 8 ವಲಯ ಕಚೇರಿಗಳಿಂದ ಜನನ-ಮರಣ ಪ್ರಮಾಣ ಪತ್ರಗಳನ್ನು ವಿತರಿಸಿರುವ ಬಗ್ಗೆ ಲೆಕ್ಕವನ್ನೇ ಕೊಟ್ಟಿಲ್ಲ, ಸರಿಯಾದ ಮಾಹಿತಿ ಇಲ್ಲದೇ ನಮೂನೆ ಪ್ರತಿಗಳನ್ನು ಕೊಡಲಾಗದು ಎಂದರು.

ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಪ್ರತಿಕ್ರಿಯೆ ನೀಡಿ, ಸರ್ಕಾರದಿಂದ ನಮಗೆ ಅಗತ್ಯವಿರುವಷ್ಟು ಜನನ-ಮರಣ ಪ್ರಮಾಣ ಪತ್ರದ ಫಾರಂ ಪ್ರತಿಗಳು ಸರಬರಾಜಾಗದಿರುವುದರಿಂದ ಒಬ್ಬರಿಗೆ ಒಂದು ಅಥವಾ ಎರಡು ಪ್ರಮಾಣ ಪತ್ರ ನೀಡುವಂತೆ ಹೇಳಿದ್ದೇನೆ. ಒಂದು ವೇಳೆ ತುರ್ತಾಗಿ ಬೇಕಾಗಿದೆ ಎಂಬುದು ಮನವರಿಕೆ ಆದರೆ ಮಾತ್ರ ನಾಲ್ಕು ಪ್ರತಿಗಳವರೆಗೆ ಕೊಡಿ ಎಂದು ನಿರ್ದೇಶನ ನೀಡಿದ್ದೇನೆ ಎಂದರು.

ಕೆಲವರು 50ರಿಂದ 100 ಪ್ರತಿಗಳನ್ನು ಕೇಳುತ್ತಾರೆ. ಆದ್ದರಿಂದ ಮಿತಗೊಳಿಸಲಾಗಿದೆ. ಒಂದು ವೇಳೆ ಸರ್ಕಾರದಿಂದ ಹೆಚ್ಚು ಫಾರಂಗಳು ಪೂರೈಕೆ ಆದಲ್ಲಿ ಈ ಸಮಸ್ಯೆ ನಿವಾರಣೆಯಾಗಲಿದೆ. ಜನರೂ ಸಹ ಅಗತ್ಯವಿರುವಷ್ಟು ಪ್ರತಿಗಳನ್ನು ಮಾತ್ರ ಪಡೆಯಬೇಕೆ ಹೊರತು, ಒಬ್ಬೊಬ್ಬರೇ ಹೆಚ್ಚಿನ ಸಂಖ್ಯೆಯ ಪ್ರಮಾಣಪತ್ರ ಪಡೆಯಬಾರದು ಎಂದು ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು.



ಮಕ್ಕಳನ್ನು ಶಾಲೆಗೆ ಸೇರಿಸುವುದು, ಇನ್ಶೂರೆನ್ಸ್ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ಜನನ ಪ್ರಮಾಣ ಪತ್ರ ಸಲ್ಲಿಸಬೇಕಾಗಿದೆ. ಅದೇ ರೀತಿ ಆಸ್ತಿಗಳ ಖಾತಾ ವರ್ಗಾವಣೆ, ಇನ್ನಿತರ ಉದ್ದೇಶಗಳಿಗೆ ಮರಣ ಪ್ರಮಾಣಪತ್ರ ಅಗತ್ಯವಿರುವುದರಿಂದ ನಾಗರಿಕರು ಒಂದಕ್ಕಿಂತ ಹೆಚ್ಚು ಜನನ-ಮರಣ ಪ್ರಮಾಣ ಪತ್ರಗಳನ್ನು ಕೇಳುತ್ತಿದ್ದರಾದರೂ ಪಾಲಿಕೆಯಿಂದ ಒಬ್ಬರಿಗೆ ಒಂದು ಪ್ರಮಾಣ ಪತ್ರವನ್ನು ಮಾತ್ರ ನೀಡಲಾಗುತ್ತಿದೆ.

ಮಿತಿ ಮೀರಿದ ಸಂಚಾರ ನಿಯಮ ಉಲ್ಲಂಘನೆ

ಮೈಸೂರಲ್ಲಿ ಸಂಚಾರ ಪೊಲೀಸರಿಂದ ತೀವ್ರ ತಪಾಸಣೆ

ತ್ರಿಬಲ್ ರೈಡಿಂಗ್, ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದೆ ವಾಹನ ಚಾಲನೆ, ಡ್ರೈವಿಂಗ್ ವೇಳೆ ಮೊಬೈಲ್ ಬಳಕೆ ವಿರುದ್ಧ ಕಾರ್ಯಾಚರಣೆ

ಮೈಸೂರು, ಮೇ 25(ಆರ್‌ಕೆ)- ಮೈಸೂರು ನಗರದಾದ್ಯಂತ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಪೊಲೀಸರು ವಿಶೇಷ ತಪಾಸಣಾ ಕಾರ್ಯಾಚರಣೆ ಆರಂಭಿಸಿದ್ದಾರೆ. ತ್ರಿಬಲ್ ರೈಡಿಂಗ್, ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದೇ ಇರುವುದು, ವಾಹನ ಚಾಲನೆ ವೇಳೆ ಮೊಬೈಲ್ ಬಳಸುವುದೂ ಸೇರಿದಂತೆ ಸಂಚಾರ ನಿಯಮ ಉಲ್ಲಂಘಿಸುವುದು ಮಿತಿ ಮೀರಿರುವ ಹಿನ್ನೆಲೆಯಲ್ಲಿ ಮೈಸೂರಿನ ಎಲ್ಲಾ ಸಂಚಾರ ಠಾಣೆಗಳ ಪೊಲೀಸರು ಇಂದಿನಿಂದ ವಿಶೇಷ ಕಾರ್ಯಾಚರಣೆ ಆರಂಭಿಸಿದ್ದು, ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡುತ್ತಿದ್ದಾರೆ.

ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರ ನಿರ್ದೇಶನದಂತೆ, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಗೀತಾ ಪ್ರಸನ್ನ ಅವರ ಮಾರ್ಗದರ್ಶನ ಹಾಗೂ ಸಂಚಾರ ಎಸಿಪಿ ಎಸ್.ಇ.ಗಂಗಾಧರಸ್ವಾಮಿ ಅವರ ಮೇಲ್ವಿಚಾರಣೆಯಲ್ಲಿ ದೇವರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ, ಕೆ.ಆರ್. ಸಂಚಾರ ಠಾಣೆಯ ಮಂಜುನಾಥ್, ಸಿದ್ಧಾರ್ಥನಗರ ಸಂಚಾರ ಠಾಣೆಯ ಸುರೇಶ್ ಕುಮಾರ್, ವಿವಿಪುರಂ ಸಂಚಾರ ಠಾಣೆಯ ಪ್ರಸನ್ನ ಕುಮಾರ್ ತಮ್ಮ ತಮ್ಮ ಸರಹದ್ದಿನ ಪ್ರಮುಖ ಸರ್ಕಲ್, ಜಂಕ್ಷನ್, ರಸ್ತೆಗಳಲ್ಲಿ ಇಂದು ಬೆಳಗ್ಗೆಯಿಂದ ಸಂಜೆವರೆಗೂ ತಪಾಸಣೆ ನಡೆಸಿ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸುತ್ತಿದ್ದಾರೆ.

ಏಕ ಕಾಲದಲ್ಲಿ ನಗರದಾದ್ಯಂತ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸುತ್ತಿರುವುದರಿಂದ ಅಲ್ಲಲ್ಲಿ ಕೆಲವರು ಪೊಲೀಸರಿಂದ ತಪ್ಪಿಸಿಕೊಳ್ಳಲು ಯು-ಟರ್ನ್ ತೆಗೆದುಕೊಂಡು ಪರ್ಯಾಯ ರಸ್ತೆಗಳಲ್ಲಿ ಓಡಾಡುತ್ತಿದ್ದುದು ಕಂಡುಬಂತು. ದ್ವಿಚಕ್ರ ವಾಹನಗಳಲ್ಲಿ 3 ಮಂದಿ ಸವಾರಿ, ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದಿರುವುದು, ವಾಹನ ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡುವುದು, ಮದ್ಯಪಾನ ಮಾಡಿ ಡ್ರೈವಿಂಗ್, ಸಿಗ್ನಲ್ ಜಂಪ್, ಅತೀ ವೇಗ ಚಾಲನೆಯಂತಹ ಸಂಚಾರ ನಿಯಮಗಳ ಉಲ್ಲಂಘನೆ ಮಾಡುವವರ ವಿರುದ್ಧ ಪೊಲೀಸರು ದಂಡ ವಸೂಲಿ ಮಾಡುತ್ತಿದ್ದಾರೆ. ಕೆ.ಆರ್.ಸರ್ಕಲ್, ಆಯುರ್ವೇದ ಕಾಲೇಜು ಸರ್ಕಲ್, ಗನ್‌ಹೌಸ್ ಸರ್ಕಲ್, ಫೌಂಟನ್ ಸರ್ಕಲ್, ಮಾತೃಮಂಡಳಿ ಸರ್ಕಲ್, ಕೆಆರ್‌ಎಸ್ ರಸ್ತೆ ಸೇರಿದಂತೆ ನಗರದಾದ್ಯಂತ ತಪಾಸಣೆ ತೀವ್ರಗೊಳಿಸಲಾಗಿದ್ದು, ಸಂಚಾರ ಕುರಿತ ನಿಯಮ ಉಲ್ಲಂಘನೆ ಪ್ರಕರಣ ತಪ್ಪಿಸಲು ಮುಂದಾಗಿದ್ದಾರೆ. ಇಂದು ಒಂದೇ ದಿನ ನೂರಾರು ಪ್ರಕರಣ ದಾಖಲಿಸಲಾಗಿದ್ದು, ತಪಾಸಣೆ ಮುಂದುವರಿಯಲಿದೆ. ಅಪಘಾತಗಳನ್ನು ತಪ್ಪಿಸಿ ಅಮೂಲ್ಯ ಪ್ರಾಣ ರಕ್ಷಣೆ ಮಾಡುವುದೇ ಇದರ ಉದ್ದೇಶ ಹೊರತು, ದಂಡ ವಸೂಲಿ ಮಾಡಿ ಸಾರ್ವಜನಿಕರಿಗೆ ತೊಂದರೆ ಕೊಡುವುದಲ್ಲ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.



ಮೈಸೂರಿನ ಗನ್‌ಹೌಸ್ ಸರ್ಕಲ್‌ನಲ್ಲಿ ಬುಧವಾರ ತಪಾಸಣೆ ನಡೆಸುತ್ತಿರುವ ಸಂಚಾರ ಪೊಲೀಸರು.



ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರದ ಶಾಸಕ ಜಿ.ಟಿ.ದೇವೇಗೌಡರ ನಿವಾಸಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಮೊಮ್ಮಗಳ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ದುಃಖತಪ್ತ ಜಿಟಿಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಜಿಟಿಡಿ ಪತ್ನಿ ಲಲಿತಾ ಜಿ.ಟಿ.ದೇವೇಗೌಡ, ಪುತ್ರ ಜಿ.ಡಿ.ಹರೀಶ್‌ಗೌಡ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಹುಣಸೂರು ಶಾಸಕ ಹೆಚ್.ಪಿ.ಮಂಜುನಾಥ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಗೆ ನಿಮ್ಮ ಕೊಡುಗೆ ಏನು?

ಸಿದ್ದರಾಮಯ್ಯರಿಗೆ ಹೆಚ್‌ಡಿಕೆ ಪ್ರಶ್ನೆ

ಮೈಸೂರು,ಮೇ 25(ಆರ್‌ಕೆ)-ಮಂಡ್ಯ ಜಿಲ್ಲೆಗೆ ನಿಮ್ಮ ಕೊಡುಗೆ ಏನು? ಇದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನೆ.



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಮಂಡ್ಯಕ್ಕೆ ಕುಮಾರಸ್ವಾಮಿಯ ಕೊಡುಗೆ ಏನು ಎಂದು ನಿನ್ನೆ ಸಿದ್ದರಾಮಯ್ಯ ಕೇಳಿದ್ದಾರೆ. ಈಗ ನಾನು ಕೇಳುತ್ತಿದ್ದೇನೆ ನಿಮ್ಮ ಕೊಡುಗೆ ಏನು? ಅನೇಕ ರೈತರು ಆತ್ಮಹತ್ಯೆ ಮಾಡಿಕೊಂಡರು. ಅವರ 200 ಕುಟುಂಬಗಳನ್ನು ಅನಾಥವಾಗಿ ಮಾಡಿದ್ದೇ ನಿಮ್ಮ ಕೊಡುಗೆಯೇ? ನಮ್ಮ ಕೊಡುಗೆ ಏನೆಂಬುದು ಮಂಡ್ಯ ಜನರಿಗೆ ಗೊತ್ತಿದೆ. ನಾನು ಆ ಜಿಲ್ಲೆಯನ್ನು ಮತ್ತಷ್ಟು ಅಭಿವೃದ್ಧಿ ಮಾಡುತ್ತಿದ್ದೆ. ಅಷ್ಟರಲ್ಲಿ ನೀವು ಸರ್ಕಾರ ಬೀಳಿಸಿದ್ದಿರಿ. ಜೆಡಿಎಸ್ ಹಿತಶತ್ರುಗಳಿಂದ ತಮಗೆ ಲಾಭ ಆಗುತ್ತದೆ ಎಂಬ ಭ್ರಮೆಯಲ್ಲಿರುವ ಕಾಂಗ್ರೆಸ್‌ಗೆ ನಿರಾಶೆ ಕಾದಿದೆ. ಪಕ್ಷದಲ್ಲಿರುವ ಹಿತಶತ್ರುಗಳೇ ನಮ್ಮ ಶತ್ರುಗಳಾಗಿರುವುದು ನಮ್ಮ ಕಾರ್ಯಕರ್ತರಿಗೆ ಅರಿವಾಗಿದೆ ಎಂದರು.

ಟಿಪ್ಪು ಕೊಟ್ಟ ಭೂಮಿ ವಾಪಸ್ ಕೊಡ್ತೀರಾ?: ಶ್ರೀರಂಗಪಟ್ಟಣ ಜಾಮಿಯಾ ಮಸೀದಿ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ದೇವರು ಕನಸಿನಲ್ಲಿ ಬಂದು ನನ್ನ ಮೂಲ ಸ್ಥಾನ ಇಲ್ಲಿದೆ ಎಂದು ಹೇಳಿದ್ದರೆ? ಇದನ್ನು ನೋಡಿದರೆ ರಾಜ್ಯದಲ್ಲಿ ಮತ್ತೊಂದು ವಿವಾದ ಶುರುವಾಗುವ ಲಕ್ಷಣವಿದೆ. ಹಲವು ದೇವಾಲಯಗಳಿಗೆ ಟಿಪ್ಪು ಭೂಮಿ ನೀಡಿದ ಉದಾಹರಣೆಗಳಿವೆ. ಹಾಗಾದರೆ ಅವರು ಈಗ ಕೇಳಿದ್ರೆ ವಾಪಸ್ ಕೊಡ್ತೀರಾ? ಎಂದು ಪ್ರಶ್ನಿಸಿದರು.

ಮಂಗಳೂರಿನಲ್ಲಿ ನಡೆಯುತ್ತಿರುವ ಅಷ್ಟಮಂಗಲ ಪ್ರಶ್ನೆಗಿಂತ ಎಲ್ಲಾ ತೀರ್ಮಾನ ಆಗೋದು ಕೇಶವಕೃಪಾದಲ್ಲಿ. ಅಲ್ಲಿಂದ ಬರುವ ಸಂದೇಶಗಳನ್ನು ಇವರು ಪಾಲಿಸುತ್ತಾರಷ್ಟೇ. ಈ ರೀತಿಯ ವಾತಾವರಣದಿಂದ ದೇಶಕ್ಕೆ ಮುಂದೆ ಉತ್ತಮ ಭವಿಷ್ಯ ವಿಲ್ಲ. ಇನ್ನು ಒಂದು ವರ್ಷ ಕಾಲ ಈ ತರಹದ ಬೆಳವಣಿಗೆಗಳು ನಡೆಯುತ್ತಿರುತ್ತವೆ. ದೇಶದ ಶಾಂತಿ, ಸಾಮರಸ್ಯ ಮತ್ತಷ್ಟು ಹದಗೆಡುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಬಿಜೆಪಿಗೆ ತಿರುಗುಬಾಣ: ಬಿಎಸ್‌ವೈ ಪುತ್ರನಿಗೆ ಮೇಲ್ಮನೆ ಟಿಕೆಟ್ ತಪ್ಪಿಸಿರುವುದು ಬಿಜೆಪಿಗೆ ತಿರುಗುಬಾಣವಾಗುವ ಲಕ್ಷಣ ಕಾಣುತ್ತಿದೆ. ಸರ್ಕಾರದ ಮೇಲೂ ಗಂಭೀರ ಪರಿಣಾಮ ಬೀರಬಹುದು. ಗುಂಪುಗಾರಿಕೆಗೂ ಅವಕಾಶವಾಗುವ ಸಾಧ್ಯತೆ ಇದೆ ಎಂದರು.

ನಾಳೆ 'ಸರಿಗಮ' ವೈದ್ಯರ ಸಂಗೀತ ಕಾರ್ಯಕ್ರಮ

ಮೈಸೂರು, ಮೇ 25- ಮೈಸೂರಿನ 'ಸ್ವರಸಂಜೀವಿನಿ' ಗಾಯಕ ವೈದ್ಯರ ತಂಡದಿಂದ 'ಸ ರಿ ಗ ಮ' ಸಂಗೀತ ರಸ ಸಂಜೆ ಕಾರ್ಯಕ್ರಮವನ್ನು ಮೇ 27 ರಂದು ಸಂಜೆ 5.30ಕ್ಕೆ ನಂಜುಮಳಿಗೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಹಳೆಯ ಕನ್ನಡ ಹಿಂದಿ, ತಮಿಳು ಹಾಗೂ ಮಳಯಾಳಂ ಭಾಷೆಯ ಆಯ್ದ ಚಿತ್ರಗೀತೆಗಳನ್ನು ವೈದ್ಯರ ತಂಡದವರು ಹಾಡಲಿದ್ದಾರೆ. ಸ್ವರಸಂಜೀವಿನಿ ಎಂಬುದು 15 ಪ್ರತಿಭಾನ್ವಿತ ವೈದ್ಯರು ಹಾಗೂ ಆರೋಗ್ಯ ಅಧಿಕಾರಿಗಳ ತಂಡವಾಗಿದ್ದು, ನಗರದ ವಿವಿಧ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಹವ್ಯಾಸಿ ಗಾಯಕರಾಗಿದ್ದಾರೆ. ಮೈಸೂರಿನ ಜನತೆಯ ಮುಂದೆ ಇದು ಪ್ರಥಮ ಕಾರ್ಯಕ್ರಮವಾಗಿದೆ. ಸಂಗೀತ ಸಂಜೆಯಲ್ಲಿ ಪಾಲ್ಗೊಳ್ಳುವ ವೈದ್ಯ ಗಾಯಕರು ಡಾ॥ ಅನೂಪ್, ಡಾ॥ ಭಾರತಿ, ಶ್ರೀಮತಿ ದರ್ಶಿಕಾ ಜೀವನ್‌ಕುಮಾರ್, ಡಾ॥ ರಮ್ಯ, ಡಾ॥ ಕುಲದೀಪ್, ಡಾ॥ ಮಂಜುನಾಥ್, ನಿಖಿಲ್‌ಪ್ರಭು, ಡಾ॥ ರಘುವೀರ್, ಡಾ॥ ಸೀತಾಲಕ್ಷ್ಮಿ, ಡಾ॥ ಸುನೀತಾ ಹಾಗೂ ಡಾ॥ ಸೋಮನಾಥ್ ವಾಸುದೇವ್.

ಸಿದ್ದರಾಮನಹುಂಡಿ ಶಾಲೆಗೆ ಶೇ.92.43 ಫಲಿತಾಂಶ

ಮೈಸೂರು, ಮೇ 25- ಮೈಸೂರು ತಾಲೂಕು ಸಿದ್ದರಾಮನಹುಂಡಿ ಕರ್ನಾಟಕ ಪಬ್ಲಿಕ್ ಶಾಲೆಗೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.92.43ರಷ್ಟು ಫಲಿತಾಂಶ ಬಂದಿದೆ.



ಒಟ್ಟು 119 ವಿದ್ಯಾರ್ಥಿಗಳಲ್ಲಿ 110 ಮಂದಿ ತೇರ್ಗಡೆಯಾಗಿದ್ದಾರೆ. ಶಾಲೆಯ ವಿದ್ಯಾರ್ಥಿನಿ ಮೇಘನ 594 (95.04%) ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನಗಳಿಸಿದ್ದಾಳೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 25- ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಭವಾನಿ ಅರಸ್ 616 ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಪ್ರೌಢಶಾಲೆಯ ವಿದ್ಯಾರ್ಥಿನಿ ಹಾಗೂ ಎಂ. ಬಸವರಾಜ ಅರಸ್ ಮತ್ತು ಆರತಿ ಅರಸ್ ಪುತ್ರಿ.



ಬೆಲೆ ಏರಿಕೆ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಆಗ್ರಹಿಸಿ

ಜೂ.20, ದೇಶವ್ಯಾಪಿ ಎಸ್‌ಯುಸಿಐಸಿ ಪ್ರತಿಭಟನೆ

ಮೈಸೂರು, ಮೇ 25(ಆರ್‌ಕೆಬಿ)- ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲವಾಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೀವ್ರ ಭ್ರಷ್ಟಾಚಾರದಲ್ಲಿ ತೊಡಗಿವೆ ಎಂದು ಆರೋಪಿಸಿ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿ, ಎಸ್‌ಯುಸಿಐಸಿ ವತಿಯಿಂದ ಜೂ.20ರಂದು ದೇಶವ್ಯಾಪಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾರ್ಯದರ್ಶಿ ಬಿ.ರವಿ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳ ಆಡಳಿತದ ವೇಳೆ ಬೆಲೆಯೇರಿಕೆಗೆ ಕಡಿವಾಣವೇ ಇಲ್ಲದಂತಾಗಿದೆ. ಭ್ರಷ್ಟಾಚಾರದ ಪಿಡುಗಿನಿಂದ ಜನತೆ ಕಂಗೆಟ್ಟಿದ್ದಾರೆ. ಹೀಗಾಗಿ ಜನರ ಗಮನ ಸೆಳೆಯಲು ಹಾಗೂ ಸರ್ಕಾರಗಳ ಮೇಲೆ ಒತ್ತಡ ಹೇರಲು ದೇಶವ್ಯಾಪಿ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಭ್ರಷ್ಟಾಚಾರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಎಲ್ಲ ಅಗತ್ಯ ವಸ್ತುಗಳ ಬೆಲೆಯೇರಿಕೆ ಮತ್ತು ಹಣದುಬ್ಬರ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು. ನೇಮಕಾತಿ ಪ್ರಕ್ರಿಯೆ ಪಾರದರ್ಶಕವಾಗಬೇಕು. ಕೋಮು-ಜಾತಿ ಹೆಸರಿನಲ್ಲಿ ಪ್ರಚೋದಿಸಿ ಒಗ್ಗಟ್ಟು ಮುರಿಯುವ ಶಕ್ತಿಗಳನ್ನು ನಿಯಂತ್ರಿಸಿ, ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಪ್ರತಿಭಟನೆ ವೇಳೆ ಸರ್ಕಾರವನ್ನು ಆಗ್ರಹಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಮಿಕ ಮುಖಂಡರಾದ ಎಂ.ಉಮಾದೇವಿ, ಚಂದ್ರಶೇಖರ ಮೇಟಿ, ಪಿ.ಎಸ್.ಸಂಧ್ಯಾ ಉಪಸ್ಥಿತರಿದ್ದರು.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 80ನೇ ವರ್ಧಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬುಧವಾರ ಮೈಸೂರಿಗೆ ಆಗಮಿಸಿದ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಉದ್ಯಮಿ ಶಿವು ಮಾದೇಗೌಡ, ಬಿಜೆಪಿ ಮುಖಂಡರಾದ ಕೇಬಲ್ ಮಹೇಶ್, ರಮೇಶ್, ಕಣ್ಣನ್, ವಿಕ್ರಂ ಅಯ್ಯಂಗಾರ್, ವಕೀಲರಾದ ವಿವೇಕ್ ಹೂಗುಚ್ಛ ನೀಡಿ, ಆತ್ಮೀಯವಾಗಿ ಸ್ವಾಗತಿಸಿದರು.

ಇಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ನಾಮಪತ್ರ ಸಲ್ಲಿಕೆ

ಮೈಸೂರು, ಮೇ 25(ಆರ್‌ಕೆಬಿ)- ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರು ನಾಳೆ (ಮೇ 26) ಬೆಳಗ್ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಮತ್ತೊಂದು ಸೆಟ್ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಜೆಡಿಎಸ್ ಮೈಸೂರು ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10.30ಕ್ಕೆ ಆಲಮ್ಮನವರ ಛತ್ರದಲ್ಲಿ ಜೆಡಿಎಸ್ ನಾಯಕರ ಸಮ್ಮುಖದಲ್ಲಿ ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮುಖಂಡರು, ಕಾರ್ಯಕರ್ತರ ಸಭೆ ನಡೆಯಲಿದೆ. ಸಭೆಯಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ, ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್ರು, ಸಿ.ಎಸ್. ಪುಟ್ಟರಾಜು ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸಭೆಯ ನಂತರ ಬೆಳಗ್ಗೆ 11.30ಕ್ಕೆ ಆಲಮ್ಮನವರ ಛತ್ರದ ಮುಂಭಾಗದಿಂದ ಪ್ರಾದೇಶಿಕ ಆಯುಕ್ತರ ಕಚೇರಿವರೆಗೆ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸಲಾಗುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ನಗರ ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಮುಖಂಡರಾದ ರಾಜಶೇಖರ ಮೂರ್ತಿ, ಬೃಂದಾ ಕೃಷ್ಣೇಗೌಡ ಇನ್ನಿತರರು ಉಪಸ್ಥಿತರಿದ್ದರು.



ನಾಮಪತ್ರ ಸಲ್ಲಿಕೆಗೂ ಮುನ್ನ ಪಕ್ಷದ ಮುಖಂಡರ ಸಭೆ

ಕ್ಲಿಷ್ಟಕರ ಅಯೋರ್ಟಾ ಸಮಸ್ಯೆಗೆ ಯಶಸ್ವಿ ಶಸ್ತ್ರಚಿಕಿತ್ಸೆ: ಇಬ್ಬರು ರೋಗಿಗಳ ಜೀವ ರಕ್ಷಣೆ

ಮೈಸೂರಿನ ಮಣಿಪಾಲ್ ಆಸ್ಪತ್ರೆ ವೈದ್ಯರ ಹೇಳಿಕೆ



ಮೈಸೂರು, ಮೇ 25(ಆರ್‌ಕೆಬಿ)- ಮೈಸೂರು-ಬೆಂಗಳೂರು ರಿಂಗ್ ರಸ್ತೆ ಜಂಕ್ಷನ್‌ನ ಬಳಿಯಿರುವ ತಮ್ಮ ಮಣಿಪಾಲ್ ಆಸ್ಪತ್ರೆಯಲ್ಲಿ ಇಬ್ಬರು ರೋಗಿಗಳಿಗೆ ಯಶಸ್ವಿಯಾಗಿ ಅಯೋರ್ಟಾ ಸಮಸ್ಯೆಗೆ ಶಸ್ತ್ರಚಿಕಿತ್ಸೆ ನಡೆಸಿ ಅವರ ಜೀವ ಉಳಿಸಲಾಗಿದೆ ಎಂದು ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ಉಪೇಂದ್ರ ಶೆಣೈ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 25 ವರ್ಷಗಳಿಗೂ ಮೀರಿದ ಅನುಭವವುಳ್ಳ ಇಡೀ ತಂಡದ ಪ್ರಯತ್ನದಿಂದ 38ರಿಂದ 77 ವರ್ಷದವರೆಗಿನ ವಿವಿಧ ವಯೋಮಾನದವರಿಗೆ ಅತ್ಯಂತ ಕ್ಲಿಷ್ಟಕರವಾಗಿದ್ದರೂ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದರು. ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದ 38 ವರ್ಷದ ಗೃಹಿಣಿಯೊಬ್ಬರಿಗೆ ತಕ್ಷಣ ಹತ್ತಿರದ ಆಸ್ಪತ್ರೆಯಲ್ಲಿ ಪ್ರಾಥಮಿಕ ಹಂತದ ಚಿಕಿತ್ಸೆ ನೀಡಲಾಯಿತು. ನಂತರ ಇತರ ಪರೀಕ್ಷೆಗಳನ್ನು ಮಾಡಿದಾಗ ಅಯೋರ್ಟಾ ಒಡೆದಿರುವುದು ಕಂಡು ಬಂತು. ಇದರಿಂದಾಗಿ ಸೋರಿಕೆಯಾಗಿ ಹೃದಯದ ಸುತ್ತಲೂ ರಕ್ತಸ್ರಾವವಾಗಿತ್ತು. ತಕ್ಷಣ ಚಿಕಿತ್ಸೆ ಕೊಡಿಸದಿದ್ದರೆ ರೋಗಿಯ ಜೀವಕ್ಕೆ ಅಪಾಯವಾಗುತ್ತಿತ್ತು. ರಕ್ತದೊತ್ತಡ ಕಡಿಮೆಯಾಗಿ, ಪದೇ ಪದೆ ಹೃದಯ ಸ್ತಂಭನವಾಗಿ ಪರಿಸ್ಥಿತಿ ಗಂಭೀರವಾದಾಗ ಆಕೆಯನ್ನು ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು ಎಂದರು.

ಮತ್ತೊಂದು ಪ್ರಕರಣದಲ್ಲಿ 77 ವರ್ಷ ವಯಸ್ಸಿನ ರೈತರೊಬ್ಬರಿಗೆ ಇದ್ದಕ್ಕಿದ್ದಂತೆ ಕೈ-ಕಾಲು ಸೋತಂತಾಗಿ ಎದೆನೋವು ಕಾಣಿಸಿಕೊಳ್ಳುತ್ತಿತ್ತು. ಪರೀಕ್ಷಿಸಿದಾಗ ಅಯೋರ್ಟಾದಿಂದ ಮೆದುಳಿಗೆ ರಕ್ತ ಸರಬರಾಜು ಮಾಡುವ ರಕ್ತನಾಳದಲ್ಲಿ ಸಮಸ್ಯೆಯಾಗಿರುವುದು ಕಂಡುಬಂತು. ನಂತರ ಆ ರೋಗಿಗೆ ಮೆದುಳಿಗೆ ರಕ್ತ ಸರಬರಾಜು ಮಾಡುವ ನಾಳಕ್ಕೆ ಬೈಪಾಸ್ ಸರ್ಜರಿ ಮಾಡಿ ಅಯೋರ್ಟಾಗೆ ಸ್ಟಂಟ್ ಅಳವಡಿಸಲಾಯಿತು. ಈ ರೀತಿ ಎರಡೂ ಶಸ್ತ್ರಚಿಕಿತ್ಸೆಗಳನ್ನು ಒಟ್ಟಿಗೆ ಮಾಡಿದ್ದು ಮೈಸೂರಲ್ಲಿ ಇದೇ ಮೊದಲು. ನಂತರ ಚೇತರಿಸಿಕೊಂಡಿರುವ ರೋಗಿಯು ಯಾವ ಸಮಸ್ಯೆಯೂ ಇಲ್ಲದೆ ಆರೋಗ್ಯವಾಗಿದ್ದಾರೆ ಎಂದರು. ಗೋಷ್ಠಿಯಲ್ಲಿ ತಜ್ಞ ವೈದ್ಯರಾದ ಡಾ.ಕೇಶವಮೂರ್ತಿ, ಪ್ರಮೋದ್ ಉಪಸ್ಥಿತರಿದ್ದರು.

ನಾಳೆಯಿಂದ ಮೇ29ರವರೆಗೆ ಮಾವು ಮೇಳ



ಮೈಸೂರು, ಮೇ 25- ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ, ಲಾಲ್‌ಬಾಗ್, ಬೆಂಗಳೂರು ಹಾಗೂ ತೋಟಗಾರಿಕೆ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಮೇ 27ರಿಂದ 29ರವರೆಗೆ ಹಾರ್ಡಿಂಜ್ ಸರ್ಕಲ್ ಬಳಿ ಇರುವ ಕುಪ್ಪಣ್ಣ ಪಾರ್ಕ್‌ನಲ್ಲಿ ಮಾವು ಮೇಳ-2022 ಆಯೋಜಿಸಲಾಗಿದೆ. ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಮಾವು ಮಳಿಗೆ ಉದ್ಘಾಟನೆ ನೆರವೇರಿಸುವರು. ಮಾವು ತಳಿಗಳ ಪ್ರದರ್ಶನವನ್ನು ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್. ಪೂರ್ಣಿಮಾ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜು ವಹಿಸುವರು. ಕಾರ್ಯಕ್ರಮದಲ್ಲಿ ಬೆಂಗಳೂರು ಲಾಲ್‌ಬಾಗ್ ತೋಟಗಾರಿಕೆ ಅಪರ ನಿರ್ದೇಶಕ ಹಾಗೂ ಜಿಲ್ಲಾ ಮೇಲುಸ್ತುವಾರಿ ಅಧಿಕಾರಿ ಪ್ರಕಾಶ್ ಎಂ.ಸೊಬರದ್, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಜೆ.ವಿ.ನಾಗರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಪ್ರಕಾಶ್ ಉಪಸ್ಥಿತರಿರುವರು.

ವ್ಯಂಗ್ಯ ಚಿತ್ರಕಾರ ನಾಗೇಂದ್ರ ಬಾಬುಗೆ ಮಾತೃವಿಯೋಗ



ಮೈಸೂರು ಮೇ 25- ಖ್ಯಾತ ವ್ಯಂಗ್ಯಚಿತ್ರಕಾರ ಫುಲ್ ಬ್ರೈಟರ್ ಎಂ.ವಿ. ನಾಗೇಂದ್ರ ಬಾಬು ಅವರ ತಾಯಿ ಎಂ.ಎನ್. ವಿಜಯಕುಮಾರಿ (74) ಬುಧವಾರ (ಮೇ 25) ಮಧ್ಯಾಹ್ನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು. ಲೇಟ್ ಎಸ್.ಎನ್.ವಾಸುದೇವರಾವ್ ಅವರ ಧರ್ಮಪತ್ನಿಯಾದ ಇವರು ಮಕ್ಕಳಾದ ಎಂ.ವಿ.ನಾಗೇಂದ್ರ ಬಾಬು ಸೇರಿದಂತೆ ಎಂ.ವಿ.ಗುರುದತ್ ಹಾಗೂ ಎಂ.ವಿ.ಅನಿತಾ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ನಾಳೆ (ಮೇ 26) ಬೆಳಗ್ಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಇವರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.05.2022 ಗುರುವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 07.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ರೇವತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರಪೂಜೆ, ಆಯುಷ್ಯಹೋಮ, ಬೆಳಗ್ಗೆ 10ಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಪ್ರತ್ಯಕ್ಷ ಪಾದಪೂಜೆ-ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ, ಆವಿಷ್ಕರಣೆಗಳು: 'ಗೀತಾ ಸ್ವರಪರಸ್ಥಾರ' ಗ್ರಂಥ (ಭಗವದ್ಗೀತೆಗೆ ಶ್ರೀ ಸ್ವಾಮೀಜಿಯವರ ಸವಿಸ್ತಾರ ವ್ಯಾಖ್ಯಾನ), ಶ್ರೀಮದ್ಭಗವದ್ಗೀತ (ಭಗವದ್ಗೀತೆಗೆ ಶ್ರೀ ಸ್ವಾಮೀಜಿಯವರ ಸರಳಾನುವಾದ), 'ಕೀರ್ತನಚಂದ್ರಿಕ' (ಶ್ರೀ ಸ್ವಾಮೀಜಿಯವರ ಕಂಠಸಿರಿಯ 80 ಭಜನೆಗಳ ಸಂಪುಟ), ಬೆಳಗ್ಗೆ 11ಕ್ಕೆ ಶ್ರೀ ಸ್ವಾಮೀಜಿಯವರಿಂದ ಅನುಗ್ರಹ ಭಾಷಣ, ಸಂಜೆ 6.30 ರಿಂದ ಭಕ್ತಾದಿಗಳಿಂದ ಸಾಮೂಹಿಕ ಗುರುಗೀತಾ ಪಾರಾಯಣ, ಶ್ರೀ ನಿತೀಶ್ ಭಾರತಿ ಅವರಿಂದ ಸೈಕತ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಮಹಾಕುಂಭಾಭಿಷೇಕ ಕಾರ್ಯಕ್ರಮ, ಬೆಳಿಗ್ಗೆ ಪುಣ್ಯಾಹ, ದ್ವಾರಾರಾಧನೆ, ಮೂರ್ತಿ ಹೋಮ, ಪ್ರಾಣ ಪ್ರತಿಷ್ಠಾಪನಾ ಹೋಮ, ಮಹಾಪೂರ್ಣಹುತಿ, ಬೆಳಗ್ಗೆ 11.45 ರಿಂದ ಮಹಾಕುಂಭ ಸಂಪ್ರೋಕ್ಷಣೆ ನೈವೇದ್ಯ, ಮಹಾಮಂಗಳಾರತಿ, ಶಾತ್ತುಮುರೈ ಅಶೀರ್ವಚನ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ಒಂಟಿಕೊಪ್ಪಲು.

■ **ನೀಲಗಂಗಾ ಮಹಿಳಾ ಬಳಗ:** ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಈಶ್ವರೀಯ ವಿವಿ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ ಅವರಿಂದ ಆಚಾರ-ವಿಚಾರ ಕುರಿತು ಉಪನ್ಯಾಸ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಸ್ವರಾಮೃತ ಮೆಲೋಡಿಸ್ :** 'ದಿಗ್ಗಜರು' ಸಂಗೀತ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಗಾನ ಸಭಾ, ನಂಜುಮಳಿಗೆ, ಲಕ್ಷ್ಮೀಪುರಂ, ಸಂಜೆ 5.30ಕ್ಕೆ.

■ **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ- ಬಾನುಲಿ ಸರಣಿ, ಪ್ರಸ್ತುತಿ-ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ-ಆಕಾಶವಾಣಿಯೊಂದಿಗೆ', 10.00 ಡಾ.ಸಿ.ಎ.ಶ್ರೀಧರ್-ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ-ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ, 3.00 ರಾಗಲಹರಿ-ರಾಗ "ಹಂಸಾನಾದ", ಪ್ರಸ್ತುತಿ-ಜಿ.ಪುಷ್ಪಲತಾ, 4.00 ಹಳ್ಳಿ ಹಾಡು-ಮೈಸೂರು ಯರಗನಹಳ್ಳಿಯ ಸಣ್ಣಮ್ಮ ಮತ್ತು ತಂಡ, 6.50 ಕೃಷಿರಂಗ-ಕಿಸಾನ್ ವಾಣಿ, ಪೌಷ್ಟಿಕ ಕೈ ತೋಟದ ಪ್ರಾಮುಖ್ಯತೆ ಕುರಿತು ನೇತ್ರಾವತಿ ಎತ್ತಿನಮನಿ ಅವರೊಡನೆ ಸಂದರ್ಶನ, 9.00 ಹಲೋ ಯುವವಾಣಿ, ಮೈಸೂರಿನ ವಿಜಯ ವಿಠ್ಠಲ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 9.30 ಕನ್ನಡ ಭಾರತಿ, 10.00 ನಾಟಕ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 26 ಗುರುವಾರ 2022

ಸಂಪುಟ: 43 | ಸಂಚಿಕೆ: 40 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರೈತರ ಉಚಿತ ವಿದ್ಯುತ್‌ಗೂ ಕುತ್ತು?

● ಮೀಟರ್ ಅಳವಡಿಸಲು ನಿರ್ಧಾರ ● ಸಮರ್ಪಕ ವಿದ್ಯುತ್ ಪೂರೈಕೆ ನೆಪದಲ್ಲಿ ಸದ್ಯದಲ್ಲೇ ಅನ್ನದಾತರಿಗೆ ಶಾಕ್





ಬೆಂಗಳೂರು, ಮೇ 25(ಕೆಎಂಶಿ) –ರಾಜ್ಯದ ಕೃಷಿ ಪಂಪ್‌ಸೆಟ್‌ಗಳಿಗೆ ಒದಗಿಸುತ್ತಿರುವ ಉಚಿತ ವಿದ್ಯುತ್ ಬಂದ್ ಮಾಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಆದರೆ ರೈತರ ಕೋರಿಕೆಯಂತೆ ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ವೇಳೆ ಮೂರು ಪೇಸ್ ವಿದ್ಯುತ್ ಪೂರೈಕೆ ಮಾಡುವ ತೀರ್ಮಾನಕ್ಕೆ ಬರಲಾಗಿದೆ. ಉಚಿತ ವಿದ್ಯುತ್ ಬಂದ್ ಮಾಡುವ ಮುನ್ನ ಸಮರ್ಪಕ ವಿದ್ಯುತ್ ಸರಬರಾಜಿಗೆ ಅಗತ್ಯವಿರುವ ಟ್ರಾನ್ಸ್‌ಫಾರ್ಮರ್ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಲಾಗುತ್ತದೆ. ಬಳಿಕ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಮಾಡಲು ಇಂಧನ ಸಚಿವ ವಿ.ಸುನಿಲ್ ಕುಮಾರ್ ನಿರ್ಧರಿಸಿದ್ದಾರೆ.



ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದ ವಿದ್ಯುತ್ ಉತ್ಪಾದನೆ ಆಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಇನ್ನು ಮುಂದೆ ಹಗಲು ವಿದ್ಯುತ್ ನೀಡಲು ಯಾವ ತೊಂದರೆಯೂ ಇಲ್ಲ. ಮೀಟರ್ ಅಳವಡಿಸಿದ ನಂತರ ಅತೀ ಕಡಿಮೆ ದರದಲ್ಲಿ ರೈತರಿಗೆ ವಿದ್ಯುತ್ ಕಲ್ಪಿಸಲಾಗುತ್ತದೆ. ಇದಕ್ಕೂ ಮುನ್ನ ಕೆಇಆರ್‌ಸಿ ಒಪ್ಪಿಗೆಯನ್ನು ವಿದ್ಯುತ್ ಸರಬರಾಜು ಕಂಪನಿಗಳು ಪಡೆಯಲಿವೆ. ಅಲ್ಲದೆ, ಮೀಟರ್ ಅಳವಡಿಕೆ ಹಾಗೂ ಶುಲ್ಕ ವಿಧಿಸುವ ಬಗ್ಗೆ ರೈತರು ಹಾಗೂ ತಜ್ಞರೊಂದಿಗೆ ಚರ್ಚೆ ನಡೆಸಿ, ತೀರ್ಮಾನಕ್ಕೆ ಬರಲಾಗುತ್ತದೆ. ರಾಜ್ಯದಲ್ಲಿ 36 ಲಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುತ್ತಿರುವುದರಿಂದ ವಾರ್ಷಿಕ 26 ಸಾವಿರ ಕೋಟಿ ರೂ. ಸರ್ಕಾರಕ್ಕೆ ಹೊರೆಯಾಗುತ್ತಿದೆ. ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ಉಚಿತ ವಿದ್ಯುತ್ ಪೂರೈಕೆ ಪ್ರಾರಂಭಿಸಲಾಯಿತು. ಆಗ 10 ಲಕ್ಷ ಕೃಷಿ ಪಂಪ್ ಸೆಟ್‌ಗಳಿದ್ದವು. ಈಗ 36 ಲಕ್ಷಕ್ಕೇರಿದ್ದು, ಹತ್ತು ಹೆಚ್‌ಪಿವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇದಕ್ಕಿಂತ ಮೇಲ್ಪಟ್ಟ ವಿದ್ಯುತ್ ಬಳಸುವ ಕಾಫಿ ತೋಟಗಳಿಗೆ ಶುಲ್ಕ ವಿಧಿಸಲಾಗುತ್ತಿದೆ. ಹಲವು ಬಾರಿ ಕೆಇಆರ್‌ಸಿಯೂ ಶುಲ್ಕ ವಿಧಿಸುವಂತೆ ಸೂಚಿಸಿದ್ದರೂ, ರೈತರಿಗೆ ನೆರವಾಗುವ ಉದ್ದೇಶದಿಂದ ಸಬ್ಸಿಡಿ ನೀಡುವುದಾಗಿ ಸರ್ಕಾರ ಹೇಳುತ್ತಾ ಬರುತ್ತಿದೆ. ಈಗಾಗಲೇ ರಾಜ್ಯದ ಹಲವು ಕಡೆ ಪ್ರತಿ ಪಂಪ್‌ಸೆಟ್‌ಗೆ ಒಂದು ಟಿ.ಸಿ. ಅಳವಡಿಸಲಾಗಿದೆ. ಚುನಾವಣಾ ವರ್ಷವಾಗಿರುವ ಹಿನ್ನೆಲೆಯಲ್ಲಿ ಈ ವರ್ಷ ಅಗತ್ಯ ಮೂಲಸೌಲಭ್ಯ ಕಲ್ಪಿಸಿ ಮೀಟರ್ ಅಳವಡಿಸುವ ಕಾರ್ಯ ನಡೆಯಲಿದೆ. ಮುಂದಿನ ದಿನಗಳಲ್ಲಿ ಬಳಕೆ ಆಧಾರದಲ್ಲಿ ವಿದ್ಯುತ್ ಶುಲ್ಕ ವಿಧಿಸುವ ಲೆಕ್ಕಾಚಾರವೂ ಸರ್ಕಾರದ್ದಾಗಿದೆ. ಈ ಕ್ರಮದಿಂದ ರೈತರಿಗೆ ಹಗಲು ವಿದ್ಯುತ್ ಪೂರೈಕೆ ಆಗುವುದಲ್ಲದೆ, ಅನಗತ್ಯ ಬಳಕೆ ತಪ್ಪಿಸಲು ಸಹಕಾರಿಯಾಗಲಿದೆ. ನೀರಿನ ಮಿತ ಬಳಕೆಯು ಆಗಲಿದೆ. ಕೃಷಿ ಪಂಪ್‌ಸೆಟ್ ಹೆಸರಲ್ಲಿ ವಿದ್ಯುತ್ ಸಂಪರ್ಕ ಪಡೆದು ನಗರ ಪ್ರದೇಶಗಳ ಹೊರವಲಯದಲ್ಲಿ ಬೋರ್‌ವೆಲ್ ಕೊರೆಸಿ, ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ ಮಾಡಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮೀಟರ್ ಅಳವಡಿಕೆಯಿಂದ ಇದನ್ನು ತಡೆಯಲು ಸಾಧ್ಯವಾಗಲಿದೆ ಎಂದು ಚಿಂತನೆ ನಡೆಸಲಾಗಿದೆ.

ವಿಧಾನಸಭೆಯಿಂದ ಪರಿಷತ್‌ಗೆ ಚುನಾವಣೆ

ನಾಮಪತ್ರ ಸ್ವೀಕೃತ; ನಾಳೆ ಅಧಿಕೃತ ಆಯ್ಕೆ ಘೋಷಣೆ

ಬೆಂಗಳೂರು, ಮೇ25(ಕೆಎಂಶಿ) – ವಿಧಾನಸಭೆಯಿಂದ ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ನಡೆಯಬೇಕಿರುವ ಚುನಾವಣೆಗೆ ಸ್ಪರ್ಧಿಸಿದ್ದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ.

ನಿವೃತ್ತಿಯಿಂದ ತೆರವಾಗುವ 7 ಸ್ಥಾನಗಳಿಗೆ ಈಗ ಅಷ್ಟೇ ಪ್ರಮಾಣದ ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಅಧಿಕೃತ ಆಯ್ಕೆ ಘೋಷಣೆ ಮಾತ್ರ ಬಾಕಿ ಉಳಿದಿದೆ. ಬಿಜೆಪಿ ಅಭ್ಯರ್ಥಿಗಳಾದ ಲಕ್ಷ್ಮಣ ಸವದಿ, ಎಸ್.ಕೇಶವ ಪ್ರಸಾದ್, ನಾರಾಯಣಸ್ವಾಮಿ, ಹೇಮಲತಾ, ಕಾಂಗ್ರೆಸ್ ಅಭ್ಯರ್ಥಿಗಳಾದ ಕೆ.ಅಬ್ದುಲ್ ಜಬ್ಬಾರ್, ನಾಗರಾಜ್ ಯಾದವ್ ಹಾಗೂ ಜೆಡಿಎಸ್ ಅಭ್ಯರ್ಥಿ ಟಿ.ಎ.ಶರವಣ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ನಾಮಪತ್ರ ಹಿಂದಕ್ಕೆ ಪಡೆಯಲು ಮೇ 27 ಕಡೇ ದಿನವಾಗಿದ್ದು, ಅಂದು ಅಧಿಕೃತವಾಗಿ ಅವಿರೋಧ ಆಯ್ಕೆಯನ್ನು ಘೋಷಿಸಲಾಗುತ್ತದೆ.

ದೌರ್ಜನ್ಯದಿಂದ ಮೃತಪಟ್ಟ ಎಸ್ಸಿ–ಎಸ್ಟಿ ಕುಟುಂಬ ಸದಸ್ಯರಿಗೂ ಸರ್ಕಾರಿ ನೌಕರಿ

ಬೆಂಗಳೂರು: ಇನ್ಮುಂದೆ ದೌರ್ಜನ್ಯದಿಂದ ಮೃತಪಟ್ಟ ಎಸ್ಸಿ–ಎಸ್ಟಿಗೆ ಸೇರಿದ ಕುಟುಂಬ ಸದಸ್ಯರಿಗೂ ಸರ್ಕಾರಿ ನೌಕರಿ ನೀಡುವಂತೆ ರಾಜ್ಯ ಸರ್ಕಾರ ಮಹತ್ವದ ಆದೇಶ ನೀಡಿದೆ. ಇತ್ತೀಚೆಗಷ್ಟೇ ಕ್ಯಾಬಿನೆಟ್‌ನಲ್ಲಿ ಅನುಮೋದನೆ ಪಡೆದಿದ್ದ ನಿಯಮವನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ. ಮೃತರ ಕುಟುಂಬದ ಸದಸ್ಯರೊಬ್ಬರಿಗೆ ಅನುಕಂಪ ಆಧಾರದಲ್ಲಿ ಉದ್ಯೋಗ ನೀಡುವಂತೆ ಸರ್ಕಾರ ಆದೇಶ ಹೊರಡಿಸಿದೆ.

ಉಗ್ರರಿಗೆ ಆರ್ಥಿಕ ನೆರವು

ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ

ನವದೆಹಲಿ: ಭಯೋತ್ಪಾದನೆಗೆ ಆರ್ಥಿಕ ನೆರವು ನೀಡಿದ ಪ್ರಕರಣದಲ್ಲಿ ಕಾಶ್ಮೀರಿ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್‌ಗೆ ಎನ್‌ಐಎ ಕೋರ್ಟ್ ಜೀವಾವಧಿ ಶಿಕ್ಷೆ ಹಾಗೂ 10 ಲಕ್ಷ ರೂ. ದಂಡ ವಿಧಿಸಿ ಬುಧವಾರ ತೀರ್ಪು ನೀಡಿದೆ ಪ್ರಕರಣದ ವಿಚಾರಣೆ ನಡೆಸಿದ ದೆಹಲಿಯ ಎನ್‌ಐಎ ಕೋರ್ಟ್



▶ 8ನೇ ಪುಟಕ್ಕೆ

ರಾಜ್ಯಸಭೆಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಇಂದು ಫೈನಲ್

ಬೆಂಗಳೂರು,ಮೇ 25–ರಾಜ್ಯಸಭೆಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ನಾಳೆ (ಮೇ 26) ಬಹುತೇಕ ಅಂತಿಮಗೊಳ್ಳುವ ನಿರೀಕ್ಷೆ ಇದೆ. ಈ ಸಂಬಂಧ ನವದೆಹಲಿಯಲ್ಲಿ ಗುರುವಾರ ಬಿಜೆಪಿ ವರಿಷ್ಠರ ಮಹತ್ವದ ಸಮಾಲೋಚನಾ ಸಭೆ ನಡೆಯಲಿದೆ.



ಕರ್ನಾಟಕದ 4 ಸ್ಥಾನಗಳ ಪೈಕಿ ಎರಡು ಸ್ಥಾನಗಳನ್ನು ಬಿಜೆಪಿ ಸುಲಭವಾಗಿ ಗೆಲ್ಲಬಹುದಾಗಿದ್ದು, ಕಣಕ್ಕಿಳಿಯುವ ಇಬ್ಬರು ಅಭ್ಯರ್ಥಿಗಳ ಆಯ್ಕೆ ನಡೆಯಬೇಕಿದೆ. ಹಾಲಿ ಸದಸ್ಯೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಡಜನ್ ಆಕಾಂಕ್ಷಿಗಳ ಪಟ್ಟಿಯನ್ನು ರಾಜ್ಯ ಬಿಜೆಪಿ ಕೋರ್ ಕಮಿಟಿ ವರಿಷ್ಠರಿಗೆ ರವಾನಿಸಿದೆ.

ಮತ್ತೋರ್ವ ಹಾಲಿ ಸದಸ್ಯ ಕೆ.ಸಿ.ರಾಮಮೂರ್ತಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲ್ ಸುರಾನಾ, ಮಾಜಿ ಶಾಸಕ ಲೆಹರ್‌ಸಿಂಗ್, ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಗೀತಾ ವಿವೇಕಾನಂದ, ಉದ್ಯಮಿ ಪ್ರಕಾಶ್ ಶೆಟ್ಟಿ ಸೇರಿದಂತೆ ಹಲವು ಪ್ರಮುಖರು ಆಕಾಂಕ್ಷಿತರ ಪಟ್ಟಿಯಲ್ಲಿದ್ದಾರೆ. 3ನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕುರಿತಾಗಿಯೂ ರಾಷ್ಟ್ರೀಯ ನಾಯಕರು ಸಮಾಲೋಚನೆ ನಡೆಸಲಿದ್ದಾರೆ. 3ನೇ ಅಭ್ಯರ್ಥಿಯ ಆಯ್ಕೆಗೆ 15 ಶಾಸಕರ ಕೊರತೆಯಿದ್ದು, ▶ 8ನೇ ಪುಟಕ್ಕೆ

ಮತ್ತೊಮ್ಮೆ ಪ್ರಾದೇಶಿಕ ಪಕ್ಷಗಳ ಒಗ್ಗೂಡಿಕೆ ಯತ್ನ

ತೆಲಂಗಾಣ ಸಿಎಂ ಚಂದ್ರಶೇಖರರಾವ್ ದೇವೇಗೌಡರೊಂದಿಗೆ ಇಂದು ಮಾತುಕತೆ


ಬೆಂಗಳೂರು,ಮೇ 25(ಕೆಎಂಶಿ) –ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಪ್ರಾದೇಶಿಕ ಪಕ್ಷಗಳನ್ನು ಒಗ್ಗೂಡಿಸಲು ತೆಲಂಗಾಣ ಮುಖ್ಯಮಂತ್ರಿ ಕೆ.ಸಿ.ಚಂದ್ರಶೇಖರ ರಾವ್ ನಾಳೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಜತೆ ಮಾತುಕತೆ ನಡೆಸಲಿದ್ದಾರೆ.



ಕೆ.ಸಿ.ಚಂದ್ರಶೇಖರರಾವ್ ನಾಳೆ ಮಧ್ಯಾಹ್ನ ಪದ್ಮನಾಭನಗರದ ದೇವೇಗೌಡರ ನಿವಾಸಕ್ಕೆ ಆಗಮಿಸಿ, ಮಾತುಕತೆ ನಡೆಸಲಿದ್ದಾರೆ. ಪ್ರಸಕ್ತ ರಾಜಕಾರಣ, ಕರ್ನಾಟಕದಲ್ಲಿ ಮುಂಬರುವ ವಿಧಾನಸಭಾ ಚುನಾವಣೆ ಬಗ್ಗೆಯೂ ಚರ್ಚೆ ನಡೆಸಲಿದ್ದಾರೆ. ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳ ಒಗ್ಗೂಡಿಸಲು ಕೆ.ಸಿ.ಚಂದ್ರಶೇಖರರಾವ್, ಡಿಎಂಕೆ, ಎಎಪಿ, ತೃಣಮೂಲ, ಸಮಾಜವಾದಿ, ಆರ್‌ಜೆಡಿ ಸೇರಿದಂತೆ ಸಮಾನಮನಸ್ಕ ಪಕ್ಷಗಳ ▶ 8ನೇ ಪುಟಕ್ಕೆ

ವರಿಷ್ಠರು ಪುತ್ರನ ಕೈಬಿಡಲ್ಲ

ಬೆಂಗಳೂರು, ಮೇ 25(ಕೆಎಂಶಿ)– ತಮ್ಮ ಪುತ್ರ ವಿಜಯೇಂದ್ರನನ್ನು ವರಿಷ್ಠರು ಕೈಬಿಡುವುದಿಲ್ಲ ಎಂಬ ವಿಶ್ವಾಸವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವ್ಯಕ್ತಪಡಿಸಿದರು. ಪರಿಷತ್ ಸದಸ್ಯ ಸ್ಥಾನಕ್ಕೆ ಟಿಕೆಟ್ ಕೈ ತಪ್ಪಿದ ನಂತರ ಮೊದಲ ಪ್ರತಿಕ್ರಿಯೆ ನೀಡಿರುವ ಯಡಿಯೂರಪ್ಪ, ಅವರಿಗೆ ಟಿಕೆಟ್ ತಪ್ಪಿರುವ ಬಗ್ಗೆ ವಿಶೇಷ ಅರ್ಥ ಕಲ್ಪಿಸಬೇಕಾಗಿಲ್ಲ ಎಂದು ಸ್ಪಷ್ಟಪಡಿಸಿದರು.



ವಿಧಾನಸೌಧದಲ್ಲಿ ಮಾತನಾಡಿದ ಅವರು, ಮುಂದೆ ಬೇರೆ ಬೇರೆ ಅವಕಾಶಗಳು ದೊರೆಯುವ ವಿಶ್ವಾಸವಿದೆ. ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಟಿಕೆಟ್ ತಪ್ಪಿಸಿದರೆ ಎಂಬ ಪ್ರಶ್ನೆಗೆ ಆ ಹೇಳಿಕೆಗಳಲ್ಲಿ ಅರ್ಥವಿಲ್ಲ ಎಂದು ಚುಟುಕಾಗಿ ಉತ್ತರಿಸಿದರು. ವಿಜಯೇಂದ್ರ ಹಾಲಿ ಬಿಜೆಪಿ ಉಪಾಧ್ಯಕ್ಷರಾಗಿದ್ದಾರೆ. ಮುಂದೆ ಅವರಿಗೆ ಬೇರೆ ಬೇರೆ ಅವಕಾಶವನ್ನು ವರಿಷ್ಠರು ಮಾಡಿಕೊಡುತ್ತಾರೆ. ಸಾಮರ್ಥ್ಯ ಮತ್ತು ನಿಷ್ಠೆ ಇರುವವರಿಗೆ ಪಕ್ಷ ಯಾವತ್ತೂ ಕೈಬಿಡುವುದಿಲ್ಲ. ಭವಿಷ್ಯದಲ್ಲಿ ಅವರಿಗೆ ದೊಡ್ಡ ಅವಕಾಶ ನೀಡುವ ಭರವಸೆ ದೊರೆತಿದೆ. 2023ಕ್ಕೆ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಬೇಕು ಎಂಬ ಗುರಿ ಇದ್ದು, ಆ ದಿಕ್ಕಿನಲ್ಲಿ ಏನೆಲ್ಲಾ ಪ್ರಯತ್ನ ಮಾಡಬೇಕು. ಅದನ್ನು ಈಗಿನಿಂದಲೇ ಮಾಡುತ್ತೇವೆ. ಮುಂಬರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಪಕ್ಷದಲ್ಲಿ ಮಹತ್ತರ ಬದಲಾವಣೆ ಆಗುತ್ತದೆ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸಿ, ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವ ಸಂಕಲ್ಪ ಮಾಡಲಾಗಿದೆ ಎಂದರು.

ಸಿಇಟಿ ಪರೀಕ್ಷೆಗೂ ಹಿಜಾಬ್ ನಿಷೇಧ

ಬೆಂಗಳೂರು, ಮೇ 25– ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಬಳಿಕ ಸಿಇಟಿ ಪರೀಕ್ಷೆಗೂ ಹಿಜಾಬ್‌ಗೆ ರಾಜ್ಯ ಸರ್ಕಾರ ನಿಷೇಧ ಹೇರಿದೆ. ಈ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದ್ದು, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಗೆ ಅನ್ವಯವಾಗುವ ನಿಯಮಗಳೇ ಸಿಇಟಿ ಪರೀಕ್ಷೆಗೂ ಅನ್ವಯವಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಜೂನ್ 16, 17 ಹಾಗೂ 18ರಂದು ಈ ವರ್ಷದ ಸಿಇಟಿ ಪರೀಕ್ಷೆಗಳು ನಡೆಯಲಿವೆ. ಪರೀಕ್ಷೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ. ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ಆದೇಶ ಪಾಲನೆ ಮಾಡುವಂತೆ ಶಿಕ್ಷಣ ಇಲಾಖೆ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಸಿಇಟಿ ಪರೀಕ್ಷೆಗೆ ವಿದ್ಯಾರ್ಥಿಗಳು ಹಿಜಾಬ್ ಸೇರಿದಂತೆ ಧಾರ್ಮಿಕ ಭಾವನೆಗಳ ಉಡುಪುಗಳನ್ನು ಧರಿಸದಂತೆ ಕರ್ನಾಟಕ ▶ 8ನೇ ಪುಟಕ್ಕೆ

ರಾಜ್ಯ ಸರ್ಕಾರಿ ನೌಕರರಿಗೆ ಎಸ್‌ಎಂಎಸ್ ಮೂಲಕ ವೇತನ–ಭತ್ಯೆ ಮಾಹಿತಿ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ 40 ವರ್ಷಗಳ ಬೇಡಿಕೆಯನ್ನು ಕೊನೆಗೂ ರಾಜ್ಯ ಸರ್ಕಾರ ಈಡೇರಿಸಿದೆ. ಮೇ 30ರಂದು KGID ಆನ್‌ಲೈನ್ ಸೇವೆಯನ್ನು ಲೋಕಾರ್ಪಣೆಗೊಳಿಸಲಾಗುತ್ತಿದೆ. ಈ ಮೂಲಕ ನೌಕರರಿಗೆ ಪ್ರತಿ ತಿಂಗಳ ವೇತನ–ಭತ್ಯೆಗಳ ಮಾಹಿತಿಯು ಎಸ್‌ಎಂಎಸ್ ಮೂಲಕ ಮೊಬೈಲ್‌ನಲ್ಲಿ ಲಭ್ಯವಾಗಲಿದೆ. ಈ ಕುರಿತು ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಮಾಹಿತಿ ಬಿಡುಗಡೆ ಮಾಡಲಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇ 30ರ ಸೋಮವಾರದಂದು KGID ಆನ್‌ಲೈನ್ ಸೇವೆಯನ್ನು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು ತಿಳಿಸಿದೆ.

ಇನ್ನೂ ಕೆಜಿಐಡಿ ಆನ್‌ಲೈನ್ ಸೇವೆ ಲೋಕಾರ್ಪಣೆಗೊಂಡರೆ, ನೌಕರರ ಪ್ರತಿ ತಿಂಗಳ ವೇತನ–ಭತ್ಯೆಗಳ ಮಾಹಿತಿಯು ಎಸ್‌ಎಂಎಸ್ ಮೂಲಕ ನೌಕರರ ಮೊಬೈಲ್‌ಗೆ ಬರಲಿದೆ. ಈ ಮೂಲಕ ಸರ್ಕಾರಿ ನೌಕರರಿಗೆ ಭರ್ಜರಿ ಸಿಹಿಸುದ್ದಿಯನ್ನು ಸರ್ಕಾರ ನೀಡಿದೆ.

ಅಧಿಕಾರದಿಂದ ಬಿಜೆಪಿ ತೊಲಗಿಸದಿದ್ದರೆ ಭಾರತಕ್ಕೂ ಶ್ರೀಲಂಕಾ ಸ್ಥಿತಿ

ಮೈಸೂರು ಕಾಂಗ್ರೆಸ್ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ ಅಂಗವಾಗಿ ಹಮ್ಮಿಕೊಂಡಿದ್ದ ಪಕ್ಷದ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಮೈಸೂರು,ಮೇ 25(ಪಿಎಂ)– ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸದಿದ್ದರೆ ನೆರೆ ರಾಷ್ಟ್ರ ಶ್ರೀಲಂಕಾ ದುಸ್ಥಿತಿ ಭಾರತಕ್ಕೂ ಬರಲಿದೆ. ನಾವು ಅದಕ್ಕೆ ಅವಕಾಶ ನೀಡಬಾರದು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ನಾಮಪತ್ರ ಸಲ್ಲಿಕೆಗೂ ಮುನ್ನ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಯಾವುದೇ ದೇಶವಾದರೂ ಅಲ್ಲಿ ಕಾನೂನು–ಸುವ್ಯವಸ್ಥೆ ಮತ್ತು ಶಾಂತಿ–ನೆಮ್ಮದಿ ಇರಬೇಕು. ಆದರೆ ಇಂದು ಬಿಜೆಪಿ ಆಡಳಿತದಲ್ಲಿ ದೇಶದಲ್ಲಿ ಸಾಮರಸ್ಯ ಹಾಳಾಗಿದೆ. ಬಿಜೆಪಿ ಆಡಳಿತ ಮುಂದುವರೆದರೆ ಶ್ರೀಲಂಕಾ ಪರಿಸ್ಥಿತಿ ನಮ್ಮ ದೇಶಕ್ಕೂ ಬರಲಿದೆ. ನಾವು ಅದಕ್ಕೆ ಅವಕಾಶ ನೀಡಬಾರದು. ಬಿಜೆಪಿಯನ್ನು ಆದಷ್ಟು ಬೇಗ ಅಧಿಕಾರದಿಂದ ತೊಲಗಿಸಬೇಕು ಎಂದರು. ದೇಶ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಕಾಂಗ್ರೆಸ್ ಕಾರಣವೇ ಹೊರತು ಬಿಜೆಪಿಯಲ್ಲ. ಈ ಬಿಜೆಪಿಯವರ ಸುಳ್ಳು ಭರವಸೆ ನಂಬಿ ಜನತೆ ಮತ ಹಾಕಿದರು. ಆದರೆ ಇವರ ಆಡಳಿತದಲ್ಲಿಂದು ದೇಶದ ಎಲ್ಲೆಡೆ ಅಶಾಂತಿ ಉಂಟಾಗಿದೆ. ಬಡತನ, ನಿರುದ್ಯೋಗ ಹೆಚ್ಚಾಗಿದೆ. ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ▶ 8ನೇ ಪುಟಕ್ಕೆ

> ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆಯಲ್ಲಿ ನಾವು ಗೆಲ್ಲುವುದಿಲ್ಲ ಎಂಬುದು ಜೆಡಿಎಸ್‌ನವರಿಗೆ ಈಗಾಗಲೇ ಗೊತ್ತಾಗಿದೆ. ಗೆಲ್ಲುವಂತಿದ್ದರೆ, ಕ್ಷೇತ್ರದ ಹಾಲಿ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ತಾವೇ ಮತ್ತೆ ಸ್ಪರ್ಧೆ ಮಾಡುತ್ತಿದ್ದರೇ ಹೊರತು ಹೆಚ್.ಕೆ.ರಾಮು ಅವರಿಗೆ ಅವಕಾಶ ನೀಡುತ್ತಿರಲಿಲ್ಲ. ಗೆಲ್ಲುವುದಿಲ್ಲ ಎಂಬುದು ಗೊತ್ತಾಗಿ ಶ್ರೀಕಂಠೇಗೌಡ ಸ್ಪರ್ಧೆ ಮಾಡಿಲ್ಲ. ಹಾಗಾಗಿ ನಮ್ಮ ಕಾರ್ಯಕರ್ತರು ಈ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಬೇಕು.
> –ಮಾಜಿ ಸಿಎಂ ಸಿದ್ದರಾಮಯ್ಯ

ನಕ್ಕರೆ ಅದೇ ಸ್ವರ್ಗ

ತಂದೆ : "ಅದೇನೋ ನೋಡ್ತಿರೋದು?"

ಮಗ : "ಫೇಸ್‌ಬುಕ್ ನೋಡ್ತಾ ಇದ್ದೀನಿ"

ತಂದೆ : "ನೀನು ಹೀಗೆ ದಿನವಿಡೀ ಫೇಸ್‌ಬುಕ್‌ನಲ್ಲೇ ಇದ್ರೆ ನಾಡಿದ್ದು, ನಿನ್ನ ಪಾಸ್‌ಬುಕ್‌ನಲ್ಲಿ ಏನೂ ಇರೋದಿಲ್ಲ ತಿಳ್ಕೋ!'

ಮೈಸೂರು ಮಿತ್ರ

ಗುರುವಾರ, 26 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜಗತ್ತಿನಲ್ಲಿ ಮಹತ್ಕಾರ್ಯಗಳಾಗಬೇಕಾದರೆ ಸ್ಫೂರ್ತಿಯೇ ಒಂದು ಸಾಧನ

– ರ್‍ಯಾಂಡಿಪಾಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೇಡವೆಂದು ಬಿಸಾಕಿದ್ದ ಹಳೇ ಕಂಬಳಿ ಚಳಿಗಾಲಕ್ಕೆ ಬೇಕಾಯ್ತು

ನಿಮ್ಮ ಪತ್ರಗಳು

ರಾಜ್ಯ ಸರ್ಕಾರಗಳೂ ತೈಲದ ಮೇಲಿನ ತೆರಿಗೆ ಕಡಿತಗೊಳಿಸಲಿ

ಮಾನ್ಯರೆ,

ಹಣದುಬ್ಬರ ನಿಯಂತ್ರಿಸಲು ಮತ್ತು ಅಗತ್ಯ ವಸ್ತುಗಳ ದರ ಏರಿಕೆ ತಡೆಯುವ ಉದ್ದೇಶದಿಂದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಪ್ರತಿ ಲೀಟರಿಗೆ ಕ್ರಮವಾಗಿ 8 ರೂ. ಮತ್ತು 6 ರೂ. ಕಡಿತಗೊಳಿಸುವುದರೊಂದಿಗೆ ಮತ್ತು ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಪ್ರತಿ ಸಿಲಿಂಡರ್‌ಗೆ ರೂ.200 ಸಬ್ಸಿಡಿಯನ್ನು ನೀಡಲು ನಿರ್ಧರಿಸುವ ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳು.

ಒಂದೆಡೆ ರಷ್ಯಾ–ಉಕ್ರೇನ್ ಯುದ್ಧ, ಇನ್ನೊಂದೆಡೆ ಶ್ರೀಲಂಕಾ ಮತ್ತು ಪಾಕಿಸ್ತಾನದಲ್ಲಾದ ಆರ್ಥಿಕ ಮುಗ್ಗಟ್ಟು ಸಾಮಾನ್ಯ ವರ್ಗದ ಜನರನ್ನು ಆತಂಕಕ್ಕೀಡು ಮಾಡಿತ್ತು. ಆದರೆ ಈ ಜಾಗತಿಕ ಸವಾಲಿನ ಪರಿಸ್ಥಿತಿಯ ನಡುವೆಯೂ ನರೇಂದ್ರ ಮೋದಿ ಸರ್ಕಾರ ಜನರಿಗೆ ದೊಡ್ಡ ನಿರಾಳತೆ ಒದಗಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಪ್ರತಿಯೊಂದು ವರ್ಗದ ಬಗ್ಗೆ ಕಾಳಜಿ ವಹಿಸುತ್ತಾರೆ ಮತ್ತು ಅವರೊಬ್ಬ ಸಂವೇದನಾಶೀಲ ನಾಯಕ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಕೆಯು ಅನೇಕ ಕ್ಷೇತ್ರಗಳ ಮೇಲೆ ಪರಿಣಾಮ ಬೀರಲಿದೆ. ಮಧ್ಯಮ ವರ್ಗದ ಕುಟುಂಬಗಳಿಗೆ ಜೀವನ ನಿರ್ವಹಣೆ ಸುಗಮವಾಗಲಿದೆ. ಉಜ್ವಲ ಯೋಜನೆಯಿಂದ ಕೋಟ್ಯಾಂತರ ಕುಟುಂಬಗಳಿಗೆ ವಿಶೇಷವಾಗಿ ಮಹಿಳೆಯರಿಗೆ ನೆರವಾಗಲಿದೆ. ಕೊರೊನಾ ಆರ್ಭಟದ ನಂತರ ಬದುಕು ಕಟ್ಟಿಕೊಳ್ಳಲು ಹೆಣಗಾಡುತ್ತಿರುವ ಜನಸಾಮಾನ್ಯರಿಗೆ ಈ ತೆರಿಗೆ ಕಡಿತ ಕೊಂಚ ನಿರಾಳತೆ ಉಂಟು ಮಾಡಿದೆ. ಬಿಜೆಪಿ ಆಡಳಿತದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೂಡ 2021 ರ ನವೆಂಬರ್‌ನಲ್ಲೇ ಜನಹಿತ ದೃಷ್ಟಿಯಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿತ ಮಾಡಿವೆ. ಆದರೆ ಪ್ರತಿಪಕ್ಷಗಳ ಆಡಳಿತದ ವಿವಿಧ ರಾಜ್ಯಗಳಲ್ಲಿ ಅದರಲ್ಲೂ ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ಕಿಂಚಿತ್ತೂ ದರ ಕಡಿಮೆ ಮಾಡುವ ಕ್ರಮ ಕೈಗೊಂಡಿಲ್ಲ. ಎಲ್ಲಾ ರಾಜ್ಯ ಸರ್ಕಾರಗಳೂ ಅದರಲ್ಲಿಯೂ ವಿಶೇಷವಾಗಿ 2021 ರ ನವೆಂಬರ್‌ನಲ್ಲಿ ತೆರಿಗೆ ಕಡಿತ ಮಾಡಿದ ರಾಜ್ಯಗಳು, ಕೇಂದ್ರ ಸರ್ಕಾರದ ರೀತಿಯಲ್ಲಿಯೇ ತೆರಿಗೆ ಕಡಿತ ಮಾಡಿ, ಸಾಮಾನ್ಯ ಜನರಿಗೆ ಬೆಲೆ ಏರಿಕೆಯಿಂದ ತುಸು ನೆಮ್ಮದಿ ನೀಡಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳೂ ಸಹ ಬೆಲೆ ಇಳಿಸುವ ಕ್ರಮವನ್ನು ಕೂಡಲೇ ಪ್ರಕಟಿಸುವರೆಂದು ನಿರೀಕ್ಷಿಸೋಣವೇ?

–ಬೇ.ನ. ಶ್ರೀನಿವಾಸಮೂರ್ತಿ, ಹಿರಿಯ ನಾಗರಿಕರು, ತುಮಕೂರು.

ರಾವಂದೂರು ಸಂಪರ್ಕ ರಸ್ತೆಗೆ ಕಾಯಕಲ್ಪ ಅಗತ್ಯ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಗ್ರಾಮದಿಂದ ರಾವಂದೂರಿಗೆ ಸಂಪರ್ಕದ ಈ ರಸ್ತೆಯು ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರ ತಾಲೂಕುಗಳಿಗೂ ಸಂಪರ್ಕವಿರುವ ಮುಖ್ಯರಸ್ತೆಯೂ ಆಗಿದೆ.

ಈ ಚಿತ್ರದಲ್ಲಿ ಕಾಣುವಂತೆ ರಸ್ತೆಯ ಇಕ್ಕೆಲಗಳಲ್ಲಿ ಕೋಳಿ, ಸಿಮೆಂಟ್ ಹಾಗೂ ರಾಸಾಯನಿಕ ಗೊಬ್ಬರ, ಕೃಷಿಗೆ ಸಂಬಂಧಿಸಿದ ರಸಗೊಬ್ಬರ, ರಸಾಯನಿಕ ಔಷಧೀಯ ಅಂಗಡಿಗಳಿವೆ. ವ್ಯಾಪಾರ ಕೇಂದ್ರ ಭಾಗವಾಗಿರುವ ಇಲ್ಲಿ ಹೊಗೆಸೊಪ್ಪು ಉತ್ಪಾದನೆಗೆ ಬೇಕಾಗುವ ಕಾಫಿಬೂಸದ ಜತೆಗೆ ಸೌದೆ ಲೋಡ್ ತುಂಬಿರುವ ವಾಹನಗಳ ವಾಸ ಸ್ಥಾನವಾಗಿದೆ. ಪಕ್ಕದಲ್ಲೇ ಒಂದು ಮದುವೆ ಛತ್ರವಿದೆ, ಅಲ್ಲೇ ತೂಕದ ಸೇತುವೆ ಇದೆ. ಇಲ್ಲಿ ವ್ಯಾಪಾರದ ಉದ್ದೇಶದಿಂದ ನಿರ್ಮಾಣ ಮಾಡಿರುವ ಹಲವಾರು ವಾಣಿಜ್ಯ ಮಳಿಗೆಗಳಿವೆ.

ಮಳೆಗಾಲದ ಸಂದರ್ಭದಲ್ಲಿ ಸೌದೆಯ ಲೋಡ್ ತುಂಬಿದ ವಾಹನಗಳಿಂದ ರಸ್ತೆಯು ಅಗತ್ಯ ಸಾಮರ್ಥ್ಯಕ್ಕೂ ಹೆಚ್ಚಿನ ಭಾರದ ವಾಹನ ಸಂಚಾರದಿಂದ ಕಿತ್ತು ಬರುತ್ತದೆ. ಅಲ್ಲಲ್ಲಿ ದೊಡ್ಡ ದೊಡ್ಡ ಗುಂಡಿಗಳು ಏರ್ಪಡುವುದರಿಂದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ. ತಂಬಾಕಿನ ಋತುವಿನಲ್ಲಂತೂ ಸಾರ್ವಜನಿಕರು ಓಡಾಡುವುದೇ ಕಷ್ಟವಾಗುತ್ತದೆ. ಇಲ್ಲಿ ಬಸ್, ಲಾರಿ, ಟಿಪ್ಪರ್ ವಾಹನಗಳ ನಿರಂತರ ಸಂಚಾರವಿರುತ್ತದೆ. ಇಷ್ಟೆಲ್ಲಾ ಆದರೂ ಇಲ್ಲಿನ ಪಂಚಾಯಿತಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಜಾಣ ಕುರುಡರಂತೆ ನಡೆದುಕೊಳ್ಳುತ್ತಿದ್ದಾರೆ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಹೇಗಿದೆ ನೋಡಿ ನಮ್ಮ ಐತಿಹಾಸಿಕ ಕೆ.ಆರ್.ವೃತ್ತ



ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರು ಹೃದಯ ಭಾಗ ಕೆಆರ್ ವೃತ್ತದ ಚಿತ್ರಣವಿದು. ರಾಜಮಾರ್ಗ, ನಾಡನ್ನಾಳಿದ ದೊರೆಗಳ ಪ್ರತಿಮೆ ಇರುವ ಈ ಸ್ಥಳವೇ ಅಚ್ಚುಕಟ್ಟಿಲ್ಲ ಎಂದ ಮೇಲೆ ನಗರವನ್ನೆಲ್ಲಾ ಇನ್ನೆಷ್ಟು ಸ್ವಚ್ಛವಾಗಿಟ್ಟಿದ್ದಾರೆ ನಮ್ಮ ನಗರ ಪಾಲಿಕೆ ಅಧಿಕಾರಿ ವರ್ಗ ಹೇಳಿ. ಬಿಡಾಡಿ ದನಗಳು ಸದಾ ವಿಶ್ರಾಂತಿ ಪಡೆಯುವ ಸ್ಥಳವಿದು. ಅವುಗಳು ತೊಪ್ಪೆ ಹಾಕಿ, ಅದು ಮಳೆ ನೀರಲ್ಲಿ ಸುತ್ತಮುತ್ತ ಹರಡಿ ವಾಸನೆ ಜೊತೆಗೆ ಕಾಲಿಟ್ಟರೆ ಜಾರುವ ಅಪಾಯವಿದೆ. ಕಸದ ತೊಟ್ಟಿಯನ್ನೇನೋ ಇಟ್ಟಿದ್ದಾರೆ. ಆದರೆ ಅದು ತುಂಬಿ ಪಕ್ಕದಲ್ಲೇ ಕಸದ ರಾಶಿ ಬಿದ್ದಿದೆ. ನಮ್ಮ ಮಹಾಜನ ಅದರ ಮೇಲೆ ನಮ್ಮದೊಂದು ಎಂಬಂತೆ ಕಸ ಹಾಕುತ್ತಿದ್ದಾರೆ. ಇದೆಲ್ಲಾ ಅನತಿ ದೂರದಲ್ಲಿರುವ ನಗರಪಾಲಿಕೆ ಅಧಿಕಾರಿ ವರ್ಗಕ್ಕೆ ಕಾಣದೆ? ಸಾರ್ವಜನಿಕರು, ಪ್ರವಾಸಿಗರು ಇಲ್ಲಿ ಮೂಗು ಮುಚ್ಚಿಕೊಂಡು, ಭಯದಲ್ಲೇ ಸಂಚರಿಸಬೇಕಾಗಿದೆ.

– ಹೊಸಟ್ಟಿ ಶಿವಮೂರ್ತಿ, ಕೆ.ಆರ್. ಮೊಹಲ್ಲಾ, ಮೈಸೂರು.

ಕೇರಳ ಸರ್ಕಾರದ ಮಾದರಿ ನಡೆ

ಮಾನ್ಯರೆ,

ಇತೀಚಿನ ದಿನಗಳಲ್ಲಿ ಮಾನವ ಮತ್ತು ಕಾಡುಪ್ರಾಣಿ ಸಂಘರ್ಷಗಳು ಹೆಚ್ಚುತ್ತಿವೆ. ಇದಕ್ಕೆ ಅರಣ್ಯ ಪ್ರದೇಶ ನಾಶ ಮತ್ತು ಕಾಡುಪ್ರಾಣಿಗಳಿಗೆ ಆಹಾರದ ಕೊರತೆ ಪ್ರಮುಖ ಕಾರಣವಾಗಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಕೇರಳ ಸರ್ಕಾರ ಆನೆ, ಮಂಗ ಇತ್ಯಾದಿ ಪ್ರಾಣಿಗಳಿಗೆ ಆಹಾರ ನೀಡುವ ಸಲುವಾಗಿ ಹಲಸಿನಹಣ್ಣು ಮತ್ತು ಮಾವಿನಹಣ್ಣು ಸೇರಿದಂತೆ ವಿವಿಧ ಜಾತಿಯ ಹಣ್ಣಿನ ಮರಗಳನ್ನು ಕಾಡುಗಳಲ್ಲಿ ಬೆಳೆಸಲು ಮುಂದಾಗಿರುವುದು ಇತರೆ ರಾಜ್ಯಗಳಿಗೆ ಮಾದರಿಯಾಗಿದೆ. ಈ ಮೂಲಕ ಕಾಡುಗಳಲ್ಲಿ ಪ್ರಾಣಿಗಳಿಗೆ ಸಮೃದ್ಧವಾಗಿ ಆಹಾರ ದೊರೆಯುವಂತೆ ಮಾಡಿ ಪ್ರಾಣಿಗಳು ಆಹಾರ ಅರಸಿ ನಾಡಿನ ಕಡೆ ಬರುವುದನ್ನು ತಪ್ಪಿಸಬೇಕಿದೆ.

–ಚನ್ನಕೇಶವ ಜಿ. ಕೆ, ತರೀಕೆರೆ



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮಹಿಳೆಯರ ಮೇಲೆ ಹೆಚ್ಚುತ್ತಿರುವ ಕೌಟುಂಬಿಕ ದೌರ್ಜನ್ಯ: ಕರ್ನಾಟಕವೇ ದೇಶದಲ್ಲಿ ಮುಂದು!

ಇತ್ತೀಚೆಗಷ್ಟೇ ಬಿಡುಗಡೆಯಾದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 (2019–2021) ರ ವರದಿ ಭಾರತದಲ್ಲಿ 18–49 ರ ವಯೋ ಗುಂಪಿನಲ್ಲಿರುವ ಪ್ರತಿ ಮೂವರು ಮಹಿಳೆಯರಲ್ಲಿ ಒಬ್ಬರು ಕುಟುಂಬದಲ್ಲಿ ಸಂಗಾತಿಯಿಂದ ದೈಹಿಕ, ಮಾನಸಿಕ ಅಥವಾ ಭಾವನಾತ್ಮಕ ದೌರ್ಜನ್ಯವನ್ನು ಎದುರಿಸುತ್ತಾರೆ ಎಂದು ತಿಳಿಸಿದೆ.

2014–15ರಲ್ಲಿ ನಾಲ್ಕನೇ ಸಮೀಕ್ಷಾ ವರದಿ ಕೂಡಾ ಶೇಕಡಾ 33ರಷ್ಟು ಮಹಿಳೆಯರು ಸಂಗಾತಿಯಿಂದ ಹಿಂಸೆಗೆ ಒಳಗಾಗಿದ್ದರು ಎಂಬ ಮಾಹಿತಿಯನ್ನು ನೀಡಿತ್ತು. ಹಾಗೆಂದರೆ ಕುಟುಂಬದ ಒಳಗೆ ಮಹಿಳೆಯರು ಎದುರಿಸುತ್ತಿರುವ ವೈವಾಹಿಕ ಹಿಂಸೆಯ ಪ್ರಮಾಣ ಇಳಿಮುಖ ಆಗುತ್ತಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ. ಈ ವರದಿ ನಮ್ಮ ಮುಂದೆ ಇಟ್ಟಿರುವ ಮತ್ತೊಂದು ಆಘಾತಕಾರಿ ಸಂಗತಿಯೆಂದರೆ ದೇಶದಲ್ಲಿ ಸಂಗಾತಿ ಪ್ರೇರಿತ ದೌರ್ಜನ್ಯ ಅತೀ ಹೆಚ್ಚಿನ ಪ್ರಮಾಣದಲ್ಲಿರುವುದು ಕರ್ನಾಟಕದಲ್ಲೇ ಎಂಬುದು. ಇಲ್ಲಿ ನೀಡಿರುವ ಅಂಕಿ–ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಮಹಿಳೆಯರು, ಎಂದರೆ ಶೇಕಡಾ 48.4 ರಷ್ಟು ಸಂಗಾತಿಯಿಂದ ದೌರ್ಜನ್ಯವನ್ನು ಎದುರಿಸುತ್ತಿದ್ದಾರೆ. ಬಿಹಾರ (43%), ತೆಲಂಗಾಣ (41%) ಹಾಗೂ ಮಣಿಪುರ ಮತ್ತು ತಮಿಳುನಾಡು (40%) ಎರಡನೇ, ಮೂರನೇ ಮತ್ತು ನಾಲ್ಕನೇ ಸ್ಥಾನಗಳಲ್ಲಿವೆ.

ಈ ವರದಿ ಕರ್ನಾಟಕದ ಹೆಚ್ಚು–ಕಡಿಮೆ ಅರ್ಧದಷ್ಟು ವಿವಾಹಿತ ಮಹಿಳೆಯರು ದೌರ್ಜನ್ಯವನ್ನು ಎದುರಿಸುತ್ತಾರೆ ಎಂಬ ಕರಾಳ ಸತ್ಯವನ್ನು ನಮ್ಮ ಮುಂದೆ ಇಟ್ಟಿದೆ. ಇದಕ್ಕೆ ಕಾರಣಗಳಾದರೂ ಏನು? ನಮ್ಮದು ಐಟಿ–ಬಿಟಿ ರಾಜ್ಯ. ನಾವು ಆಧುನಿಕತೆಯತ್ತ ಬಹು ವೇಗದಿಂದ ಸಾಗುತ್ತಿದ್ದೇವೆ. ದೇಶದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದಲ್ಲಿ ದಾಖಲಾಗಿರುವುದು ನಮ್ಮ ಕರ್ನಾಟಕದಲ್ಲೇ ಎಂದು ಹೆಮ್ಮೆಯಿಂದ ಬೀಗುತ್ತಿರುವ ಈ ರಾಜ್ಯದಲ್ಲೇ ಸುಮಾರು ಅರ್ಧದಷ್ಟು ವಿವಾಹಿತ ಸ್ತ್ರೀಯರು ದೌರ್ಜನ್ಯದ ನೆರಳಿನಲ್ಲಿ ಬದುಕಿದ್ದಾರೆ ಎಂದರೆ ಏನಿದು ವಿಪರ್ಯಾಸ?

ಕರ್ನಾಟಕವೇ ಆಗಲಿ ಪ್ರಪಂಚದ ಯಾವ ಪ್ರದೇಶವೇ ಆಗಲಿ, ಕೌಟುಂಬಿಕ ಹಿಂಸೆಯನ್ನು, ಹೆಣ್ಣಿನ ಪರಾಧೀನತೆಯನ್ನೂ ಎತ್ತಿ ಹಿಡಿಯುವ ಮೌಲ್ಯಾಚರಣೆಗಳಿಗೆ ಸಾರ್ವತ್ರಿಕವಾದ ಸ್ವೀಕೃತಿಯಿರುವುದೇ ಮಹಿಳೆಯರ ಮೇಲೆ ದೌರ್ಜನ್ಯವನ್ನು ಸಮರ್ಥಿಸುವ ಸಂಸ್ಕೃತಿ ಇಷ್ಟೆಲ್ಲಾ ಆಧುನೀಕರಣದ ನಡುವೆಯೂ ಮೆರೆಯುತ್ತಿರುವುದಕ್ಕೆ ಮುಖ್ಯ ಕಾರಣ. ಕುಟುಂಬದಲ್ಲಿ ಸ್ತ್ರೀ ವಿರೋಧಿ ದೌರ್ಜನ್ಯ ಹೆಣ್ಣು ಶಿಶು ಜನಿಸುವ ಮುನ್ನವೇ ಆರಂಭವಾಗುತ್ತದೆ. ಹೆಣ್ಣು ಮಗುವಿನ ಬದುಕನ್ನು ಲೆಕ್ಕಾಚಾರಗಳ ಚೌಕಟ್ಟಿನಲ್ಲಿ ಅಳೆಯುವ ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ದೇಹದ ಮೇಲೆ ಅಧಿಕಾರವನ್ನು ಸಾಧಿಸುವುದು ಪುರುಷನ ಹಕ್ಕು ಎಂಬ ಮೌಲ್ಯಾಚರಣೆ ಎಲ್ಲಾ ವರ್ಗಗಳಲ್ಲಿ ಚಾಲ್ತಿಯಲ್ಲಿದೆ. ಹೆಣ್ಣು ಶಿಶು ಜನನ ತಾಳಬೇಕೋ–ಬೇಡವೋ ? ಆಕೆ ಶಾಲೆಗೆ ಹೋಗಬೇಕೇ ಇಲ್ಲ ಗೃಹ ಬಂಧಿಯಾಗಿರಬೇಕೇ? ಹೆಣ್ಣು ಯಾವ ಬಟ್ಟೆಯನ್ನು ಧರಿಸಬಹುದು ಅಥವಾ ಧರಿಸಬಾರದು? ಯಾರನ್ನು– ಯಾವಾಗ ಮದುವೆಯಾಗಬೇಕು? ಆಕೆಗೆ ಎಷ್ಟು ಮಕ್ಕಳಿರಬೇಕು? ಇವೇ ಮುಂತಾದ ಅನೇಕ ಪ್ರಶ್ನೆಗಳಿಗೆ ಉತ್ತರಗಳನ್ನು ನಿರ್ಧರಿಸುವುದು ಪುರುಷ ಸಂಸ್ಕೃತಿಯಿಂದ ಪ್ರೇರಿತವಾದ ಸಮಾಜೀಕರಣ ಪ್ರಕ್ರಿಯೆ. ಹೆಣ್ಣಿನ ಬದುಕಿನಲ್ಲಿ ವಿವಾಹಕ್ಕೆ ಅತೀ ಪ್ರಾಶಸ್ತ್ಯ ನೀಡುವ ಸಂಸ್ಕೃತಿ ದೌರ್ಜನ್ಯವನ್ನು ಹೆಣ್ಣು ಸಹಿಸಿಕೊಳ್ಳಬೇಕೆಂಬ ಪಾಠವನ್ನೂ ಕಲಿಸುತ್ತದೆ. ಕೌಟುಂಬಿಕ ದೌರ್ಜನ್ಯವನ್ನು ತಡೆಗಟ್ಟುವ ಕಾಯಿದೆಗೆ ಸಂಸತ್ತಿನಲ್ಲೇ ಕೆಲವರು ವಿರೋಧ ವ್ಯಕ್ತಪಡಿಸಿದ್ದು ಹೆಣ್ಣು ತನ್ನ ಕುಟುಂಬದಲ್ಲೇ ಸುರಕ್ಷಿತ ಬದುಕನ್ನು ನಡೆಸಲು ಎಷ್ಟು ದೀರ್ಘ ಹೋರಾಟವನ್ನು ನಡೆಸಬೇಕಾಯ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಒಟ್ಟಿನಲ್ಲಿ ಕುಟುಂಬ 'ಸಾಂಸ್ಕೃತಿಕ ಆರಕ್ಷತೆಯ' ಪ್ರಥಮ ತಾಣವಾಗಿ ಕಾರ್ಯಪ್ರವೃತ್ತವಾಗಿರುತ್ತದೆ.

"ನಮ್ಮ ಹೆಣ್ಣು ಮಕ್ಕಳು ಹೆಚ್ಚು–ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣದ ಮೇಲು–ಮೇಲಿನ ಹಂತಗಳನ್ನು ಏರುತ್ತಿದ್ದಾರೆ. ಅವರಿಗೆ ಉದ್ಯೋಗಾವಕಾಶಗಳು ಹೆಚ್ಚಿವೆ, ಮಹಿಳಾ ಹಕ್ಕುಗಳನ್ನು ರಕ್ಷಿಸುವ ಅನೇಕ ಕಾಯಿದೆಗಳು ಜಾರಿಯಾಗಿವೆ. ಅವರ ಸ್ವಾಭಿಮಾನ–ಸ್ವಾತಂತ್ರ್ಯಗಳನ್ನು ಎತ್ತಿ ಹಿಡಿಯುವ ಸ್ವಾಯತ್ತ ಮಹಿಳಾ ಚಳವಳಿ ಅತ್ಯಂತ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದ್ದ ಸ್ಥಾನವಿದು. ಕೌಟುಂಬಿಕ ದೌರ್ಜನ್ಯದ ವಿರುದ್ಧ ಹೋರಾಟಗಳನ್ನೂ ರೂಪಿಸಿ ಲಿಂಗ ಸಮಾನತೆಯ ಸಂಘರ್ಷಕ್ಕೆ ಒಂದು ಹೊಸ ಅರ್ಥವನ್ನೇ ನೀಡಿದ ರಾಜ್ಯವಿದು– ಆದಾಗ್ಯೂ ಏಕೆ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಮಹಿಳೆಯರು ಕೌಟುಂಬಿಕ ಹಿಂಸೆಗೆ ಒಳಗಾಗುತ್ತಿದ್ದಾರೆ?



ಪುರುಷ ಪ್ರಾಧಾನ್ಯತೆಯ ಪರಿಸರ ಸ್ತ್ರೀ ವಿರೋಧಿ ಹಿಂಸೆಗೆ ಎಲ್ಲೆಡೆ ಒಂದು ನೆಲೆಯನ್ನು ಒದಗಿಸಿದೆ ನಿಜ. ಆದರೆ ಮಹಿಳಾ ಹೋರಾಟಗಳ ಇತಿಹಾಸದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದ ಕರ್ನಾಟಕವೇಕೆ ಈ ಸ್ಥಿತಿಯನ್ನು ತಲುಪಿತು ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಬೇಕಾದ್ದು ಅಗತ್ಯವಿದೆ. ಈ ಹೊತ್ತು ನಮ್ಮ ರಾಜ್ಯದಲ್ಲಿ ನಾವು ಕಾಣುತ್ತಿರುವುದು ಒಂದು ರೀತಿಯ ವೈರುಧ್ಯ ಪರಿಸ್ಥಿತಿ. ನಮ್ಮ ಹೆಣ್ಣು ಮಕ್ಕಳು ಹೆಚ್ಚು–ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣದ ಮೇಲು–ಮೇಲಿನ ಹಂತಗಳನ್ನು ಏರುತ್ತಿದ್ದಾರೆ. ಅವರಿಗೆ ಉದ್ಯೋಗಾವಕಾಶಗಳು ಹೆಚ್ಚಿವೆ, ಮಹಿಳಾ ಹಕ್ಕುಗಳನ್ನು ರಕ್ಷಿಸುವ ಅನೇಕ ಕಾಯಿದೆಗಳು ಜಾರಿಯಾಗಿವೆ. ಅವರ ಸ್ವಾಭಿಮಾನ–ಸ್ವಾತಂತ್ರ್ಯಗಳನ್ನು ಎತ್ತಿ ಹಿಡಿಯುವ ಸ್ವಾಯತ್ತ ಮಹಿಳಾ ಚಳವಳಿ ಅತ್ಯಂತ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದ್ದ ಸ್ಥಾನವಿದು. ಕೌಟುಂಬಿಕ ದೌರ್ಜನ್ಯದ ವಿರುದ್ಧ ಹೋರಾಟಗಳನ್ನೂ ರೂಪಿಸಿ ಲಿಂಗ ಸಮಾನತೆಯ ಸಂಘರ್ಷಕ್ಕೆ ಒಂದು ಹೊಸ ಅರ್ಥವನ್ನೇ ನೀಡಿದ ರಾಜ್ಯವಿದು– ಆದಾಗ್ಯೂ ಏಕೆ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಮಹಿಳೆಯರು ಕೌಟುಂಬಿಕ ಹಿಂಸೆಗೆ ಒಳಗಾಗುತ್ತಿದ್ದಾರೆ?

ದೇಶದ ಖ್ಯಾತ ಅರ್ಥಶಾಸ್ತ್ರಜ್ಞೆ ಮತ್ತು ರಾಜ್ಯದ ಮಹಿಳಾ ಚಳವಳಿಯೊಡನೆ 3–4 ದಶಕಗಳಿಂದಲೂ ನಿಕಟ ಒಡನಾಟ ಹೊಂದಿರುವ ಪ್ರೊ. ವಿಭೂತಿ ಪಟೇಲ್ ಅವರು ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ, ರಾಜ್ಯದಲ್ಲಿ ಮಹಿಳಾ ವಿರೋಧಿ ದೌರ್ಜನ್ಯ ಏಕೆ ಹೆಚ್ಚಾಯಿತು ಎಂಬುದಕ್ಕೆ ಕರ್ನಾಟಕದ ಸಮಕಾಲೀನ ಸಂದರ್ಭಗಳಲ್ಲಿ ತಲೆದೋರಿರುವ ಬದಲಾವಣೆಗಳನ್ನು ಗುರುತಿಸಿದ್ದಾರೆ. ಮಹಿಳೆಯರ ಉದ್ಯೋಗ ಭಾಗವಹಿಸುವಿಕೆಯ ಪ್ರಮಾಣ ಇಳಿಮುಖವಾಗಿ, ಮಹಿಳೆಯರ ಪರಾಧೀನತೆಯನ್ನು ಹೆಚ್ಚಿಸಿದೆ. ಆರ್ಥಿಕವಾಗಿ ಸಂಗಾತಿಯನ್ನು ಅವಲಂಬಿಸಿರುವ ಮಹಿಳೆಯರಿಗೆ ದೌರ್ಜನ್ಯದ ಪರಿಸರದಿಂದ ತಪ್ಪಿಸಿಕೊಂಡು ಹೋಗಲು ಪರ್ಯಾಯ ವ್ಯವಸ್ಥೆಯಿರುವುದಿಲ್ಲ. ಆಗ ಅವರು ಸುಲಭವಾಗಿ ಹಿಂಸೆಗೆ ಒಳಗಾಗುತ್ತಾರೆ. ಕೋವಿಡ್ ತಂದ ಆರ್ಥಿಕ ಪಲ್ಲಟಗಳಿಂದ ಉದ್ಯೋಗಗಳನ್ನು ಕಳೆದುಕೊಂಡವರಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದವರು ಮಹಿಳೆಯರು. ಕೋವಿಡ್ ಕಾಲದಲ್ಲಿ ಹಾಗೂ ಲಾಕ್‌ಡೌನ್ ನಂತರದಲ್ಲೂ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯ ಹೆಚ್ಚಾಗಿದ್ದು ಕೂಡಾ ಈ ಪರಿಸ್ಥಿತಿಗೆ ಮುಖ್ಯ ಕಾರಣ ಎನ್ನುವುದನ್ನೂ ನಾವು ಗುರುತಿಸಬೇಕು.

1980 ಮತ್ತು 1990 ರ ದಶಕಗಳಲ್ಲಿ ಕರ್ನಾಟಕದಲ್ಲಿ ಮಹಿಳಾ ಸಶಕ್ತೀಕರಣದ ಆಂದೋಲನದಲ್ಲಿ ಪ್ರಧಾನ ಭೂಮಿಕೆಯಲ್ಲಿದ್ದ ಸ್ವಾಯತ್ತ ಸ್ವಸಹಾಯ ಸಂಘಗಳು, ಮಹಿಳಾ ಸಮಖ್ಯಾ ಸಂಘಟನೆ ಹಾಗೂ ಮಹಿಳೆಯರ ಪರವಾಗಿ ಧ್ವನಿಯೆತ್ತಿ ಕಾರ್ಯಪ್ರವೃತ್ತವಾಗಿದ್ದ ಅನೇಕ ಬೆಂಬಲ ಗುಂಪುಗಳು ಇಂದು ದುರ್ಬಲವಾಗಿವೆ. ಬರಬರುತ್ತಾ ಅನೇಕ ಸ್ವಾಯತ್ತ ಮಹಿಳಾ ಸಂಘಟನೆಗಳೂ ಗೋಚರತೆಯನ್ನು ಕಳೆದುಕೊಂಡಿವೆ. ದೌರ್ಜನ್ಯಕ್ಕೆ ಒಳಗಾಗಿದ್ದ ಮಹಿಳೆಯರಿಗೆ ತಾತ್ಕಾಲಿಕ ಆಸರೆ, ಕಾನೂನು ನೆರವು, ಸಲಹೆಗಳನ್ನೂ ನೀಡುತ್ತಿದ್ದ ಆಶ್ರಯ ವ್ಯವಸ್ಥೆ ಇಂದು ನಾನಾ ಕಾರಣಗಳಿಗಾಗಿ ಸಕ್ರಿಯವಾಗಿಲ್ಲದಿರುವುದೂ ಮಹಿಳಾ ದೌರ್ಜನ್ಯದ ಪ್ರಮಾಣ ಹೆಚ್ಚಿರುವುದಕ್ಕೆ ಮತ್ತೊಂದು ಮುಖ್ಯ ಕಾರಣ ಎನ್ನುತ್ತಾರೆ ವಿಭೂತಿ ಪಟೇಲ್.

ರಾಜ್ಯದಲ್ಲಿ ದೌರ್ಜನ್ಯದಿಂದ ಮಹಿಳೆಯರನ್ನು ರಕ್ಷಿಸಲು ಸರ್ಕಾರ ಬೆಂಬಲಿತ ಸಕ್ರಿಯ ಕಾರ್ಯನಿರತ ವ್ಯವಸ್ಥೆಯ ಅಭಾವವಿದೆ. ಕರ್ನಾಟಕದಲ್ಲಿ, ಮುಂಬಯಿಯಲ್ಲಿ ಇರುವಂತೆ, ಕುಟುಂಬ, ಉದ್ಯೋಗ ಸ್ಥಳ, ಸಾರ್ವಜನಿಕ ಸ್ಥಳಗಳು– ಇಲ್ಲೆಲ್ಲಾ ದೌರ್ಜನ್ಯವನ್ನು ಎದುರಿಸುತ್ತಿರುವ ಮಹಿಳೆಯರು ಆಶ್ರಯವನ್ನೂ ಪಡೆಯಬಹುದಾದಂತ 'ಏಕಗವಾಕ್ಷಿ ಕೇಂದ್ರ'ಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. 'ಒನ್ ಸ್ಟಾಪ್ ಸೆಂಟರ್' ಎಂಬ ಈ ಸಂಸ್ಥೆಗಳು ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದು ಒಂದೇ ಸೂರಿನಡಿ ದೌರ್ಜನ್ಯವನ್ನು ಎದುರಿಸಿದ ಮಹಿಳೆಯರಿಗೆ ಪೊಲೀಸ್ ನೆರವು, ಕಾನೂನು ಸಲಹೆ, ವೈದ್ಯಕೀಯ ಚಿಕಿತ್ಸೆ ಆಶ್ರಯ ತಾಣಗಳ ಬಗ್ಗೆ ಮಾಹಿತಿ ಮತ್ತು ವಾಸ್ತವ್ಯಕ್ಕೆ ಅವಕಾಶ ಇಲ್ಲಿ ದೊರೆಯುತ್ತವೆ. ಸರ್ಕಾರ ಮಹಿಳಾ ಸುರಕ್ಷೆಗಾಗಿ ಇರುವ ಎಲ್ಲ ಯೋಜನೆಗಳನ್ನೂ ಒಂದು ನಿಜವಾದ ಅರ್ಥದಲ್ಲಿ ಅನುಷ್ಠಾನಕ್ಕೆ ತರಲು ಪೂರಕವಾದ ವ್ಯವಸ್ಥೆಯನ್ನೂ ಸೃಷ್ಟಿಸಬೇಕಾಗಿದೆ. ವಿಶೇಷವಾಗಿ ಕೌಟುಂಬಿಕ ದೌರ್ಜನ್ಯವನ್ನು ತಡೆಗಟ್ಟುವ ಕಾಯಿದೆಯ ಪ್ರಯೋಜನವನ್ನು ಮಹಿಳೆಯರು ಪಡೆಯುವಂತಾಗಲು ಅವಶ್ಯವಾದ ಕಾನೂನು ನೆರವು, ಕಾನೂನಿನ ಬಗ್ಗೆ ಅರಿವು, ಇವುಗಳನ್ನು ತೊಂದರೆಗೆ ಒಳಗಾಗಿರುವ ಮಹಿಳೆಯರಿಗೆ ಒದಗಿಸಲು ಆರ್ಥಿಕ ಬೆಂಬಲವನ್ನು ನೀಡುವ ವ್ಯವಸ್ಥೆಯನ್ನೂ ಒದಗಿಸದಿದ್ದರೆ ಕಾನೂನು ಇದ್ದರೂ ಇಲ್ಲದಿರುವಂತಾಗುತ್ತದೆ.

ಮಹಿಳಾ ದೌರ್ಜನ್ಯ ಎನ್ನುವುದನ್ನು ನಾವು ಬಹುಮುಖಿ ದೃಷ್ಟಿಕೋನದಿಂದ ನೋಡಿ ಅದಕ್ಕೆ ಕಾರಣವಾಗುವ ಎಲ್ಲ ಪರಿಸ್ಥಿತಿಗಳನ್ನೂ ಸಮಗ್ರವಾದ ಅಧ್ಯಯನಕ್ಕೆ ಒಳಪಡಿಸಬೇಕು. ಕರ್ನಾಟಕದ ಸಾಮಾಜಿಕ–ಆರ್ಥಿಕ–ರಾಜಕೀಯ–ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಲೆಯಲ್ಲೇ, ಏಕೆ ಈ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ದೌರ್ಜನ್ಯ ಪ್ರಕರಣಗಳು ಸಂಭವಿಸುತ್ತಿವೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿ ಸರ್ಕಾರ ಮತ್ತು ನಾಗರಿಕ ಸಮಾಜ ಈ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತವಾಗಬೇಕಾಗಿದೆ. ಸ್ವಾಯತ್ತ ಮಹಿಳಾ ಚಳವಳಿ ನಾನಾ ಕಾರಣಗಳಿಗಾಗಿ ಹಿಂದೆ ಇದ್ದಂತೆ ಸಕ್ರಿಯವಾಗಿ ಎಲ್ಲೆಡೆ ಕೆಲಸ ಮಾಡಲಾಗದಿದ್ದರೂ ನೆರೆಹೊರೆಗಳಲ್ಲಿ, ಗ್ರಾಮ–ಗ್ರಾಮಗಳಲ್ಲಿ, ಸಮುದಾಯ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಮಹಿಳಾ ಸಮಾನತೆಯ ಹೋರಾಟವನ್ನು ಮತ್ತೆ ಜಾಗೃತಗೊಳಿಸಬೇಕಾಗಿದೆ.


ಓವಲ್ ಮೈದಾನದಲ್ಲಿಲ್ಲ ಮೂಲ ಸೌಕರ್ಯ

ಅಪ್ಪಿತಪ್ಪಿಯೂ ಶೌಚಾಲಯದತ್ತ ಸುಳಿಯಬೇಡಿ!

ಮೈಸೂರು, ಮೇ 25(ಎಂಕೆ)– ಸದಾ ನೂರಾರು ಕ್ರೀಡಾಪಟುಗಳು, ವಾಯು ವಿಹಾರಿಗಳಿಂದ ಕೂಡಿರುವ 'ಓವಲ್ ಮೈದಾನ'ದಲ್ಲಿರುವ ಶೌಚಾಲಯದಲ್ಲಿ ಅನೈರ್ಮಲ್ಯ ತಾಂಡವವಾಡುತ್ತಿದ್ದು, ಮೂಗು ಮುಚ್ಚಿಕೊಂಡು ಬಳಕೆ ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ.

'ಯೋಗ'ವನ್ನು ವಿಶ್ವಕ್ಕೆ ಪರಿಚಯ ಮಾಡಿಕೊಟ್ಟ ಮೈಸೂರಿನ ಕೇಂದ್ರ ಸ್ಥಾನದಲ್ಲಿರುವ ಓವಲ್ ಮೈದಾನದಲ್ಲಿ ನಿರ್ಮಿಸಿರುವ ಶೌಚಾಲಯ ಇದ್ದರೂ ಇಲ್ಲದಂತಾಗಿದೆ. ಶೌಚಾಲಯದ ಬಾಗಿಲು ಮುರಿದು ಹೋಗಿದ್ದು, ಮಲ–ಮೂತ್ರ ವಿಸರ್ಜನೆಯ ಕೊಠಡಿಗಳು ಸಂಪೂರ್ಣ ಹಾಳಾಗಿವೆ.

ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರ, ಕ್ರೀಡಾಪಟುಗಳ ನೆಚ್ಚಿನ ಕ್ರೀಡಾಂಗಣವಾಗಿರುವ ಓವಲ್ ಮೈದಾನದಲ್ಲಿ ಹಲವು ಬಗೆಯ ಕ್ರೀಡಾ ಚಟುವಟಿಕೆಗಳು ಹಾಗೂ ಸಭೆ ಸಮಾರಂಭಗಳು ನಡೆಯುತ್ತಲೇ ಇರುತ್ತವೆ. ಸ್ಥಳೀಯ ಜನಪ್ರತಿನಿಧಿಗಳು, ಕ್ರೀಡಾ ಇಲಾಖೆ ಅಧಿಕಾರಿಗಳು, ಮೈಸೂರು ವಿವಿ ಸಿಬ್ಬಂದಿಗಳು ಆಗಾಗ ಭೇಟಿ ನೀಡುತ್ತಲೇ ಇರುತ್ತಾರೆ. ಆದರೆ ಯಾರೊಬ್ಬರು ಹಾಳಾಗಿರುವ ಶೌಚಾಲಯವನ್ನು ಸರಿಪಡಿಸುವ ಕೆಲಸಮಾಡಿಲ್ಲ ಎಂದು ಕೆಲ ಕ್ರೀಡಾಪಟುಗಳು ಬೇಸರ ವ್ಯಕ್ತಪಡಿಸಿದ್ದಾರೆ.



ಅನೈತಿಕ ಚಟುವಟಿಕೆಗಳು!: ಕೆಲ ಕಿಡಿಗೇಡಿಗಳು ಈ ಶೌಚಾಲಯವನ್ನೇ ಅನೈತಿಕ ಚಟುವಟಿಕೆಯ ಸ್ಥಳವನ್ನಾಗಿ ಮಾಡಿಕೊಂಡಿದ್ದಾರೆ. ಸಂಜೆಯಾಗುತ್ತಿದ್ದಂತೆ ಹೆಣ್ಣು ಮಕ್ಕಳು, ಹಿರಿಯ ನಾಗರಿಕರು ತಿರುಗಾಡುವುದಕ್ಕೂ ಭಯಪಡುವ ವಾತಾವರಣ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಯಾವುದೇ ವ್ಯವಸ್ಥೆ ಇಲ್ಲ: ಸದಾ ಕ್ರೀಡಾ ಚಟುವಟಿಕೆಗಳಿಂದ ಕೂಡಿರುವ ಓವಲ್ ಮೈದಾನದಲ್ಲಿ ಯಾವುದೇ ಮೂಲ ಸೌಲಭ್ಯವಿಲ್ಲ. ಕ್ರೀಡಾಪಟುಗಳಿಗೆ ಕುಡಿಯುವ ನೀರಿಲ್ಲ. ಇರುವ ಶೌಚಾಲಯವೂ ಬಳಕೆಗೆ ಯೋಗ್ಯವಾಗಿಲ್ಲ. ಕ್ರೀಡಾಪಟುಗಳು ಕ್ರೀಡೆಯಲ್ಲಿ ಸಾಧನೆ ಮಾಡಬೇಕೆಂಬ ಛಲದಿಂದ ಪ್ರತಿನಿತ್ಯ ಅಭ್ಯಾಸ ನಡೆಸಲು ಓವಲ್ ಮೈದಾನಕ್ಕೆ ಬರುತ್ತಾರೆ. ಆದರೆ ಅವರಿಗೆ ಬೇಕಾದ ಕನಿಷ್ಠ ವ್ಯವಸ್ಥೆಯೂ ಇಲ್ಲಿಲ್ಲ. ಕ್ರೀಡಾಕೂಟಗಳಲ್ಲಿ ಕ್ರೀಡಾಪಟುಗಳಿಂದ ಸಾಧನೆ ಸಾಧ್ಯವಾಗಬೇಕಾದರೆ ಪ್ರೋತ್ಸಾಹದ ಜೊತೆಗೆ ಸಹಕಾರ ನೀಡಬೇಕು.

ಬಯಲಲ್ಲೇ ಎಲ್ಲವೂ: ಬಳಕೆಯಾಗದ ಶೌಚಾಲಯದಿಂದಾಗಿ ಬಯಲಲ್ಲೇ ಮಲ–ಮೂತ್ರ ವಿಸರ್ಜನೆ ಮಾಡುವಂತಾಗಿದೆ. ದೂರದ ಬಡಾವಣೆಗಳಿಂದ ಕ್ರೀಡಾಭ್ಯಾಸಕ್ಕೆ, ವಾಕಿಂಗ್ ಬರುವವರು ಬೇರೆ ದಾರಿ ಕಾಣದೆ ಶೌಚಾಲಯದ ಹಿಂಭಾಗದಲ್ಲಿ ಮಲ–ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಇದರಿಂದ ದುರ್ವಾಸನೆ, ಸೊಳ್ಳೆಗಳ ಕಾಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸಾಂಕ್ರಾಮಿಕರ ರೋಗಗಳು ಹರಡುವ ಆತಂಕ ಕಾಡುತ್ತಿದೆ ಎಂದು ಸುವರ್ಣ ಬೆಳಕು ಫೌಂಡೇಶನ್ ಅಧ್ಯಕ್ಷರಾದ ಮಹೇಶ್ ನಾಯಕ್ ತಿಳಿಸಿದ್ದಾರೆ.

ಜೈಲಲ್ಲೇ ಕಾಡುಗಳ್ಳ ವೀರಪ್ಪನ್ ಸಹೋದರ ಮಾದಯ್ಯನ್ ಸಾವು

ಸೇಲಂ, ಮೇ 25– ಸೇಲಂ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಕಾಡುಗಳ್ಳ ವೀರಪ್ಪನ್ ಹಿರಿಯ ಸಹೋದರ ಕೂಸೆ ಮಾದಯ್ಯನ್(75) ಬುಧವಾರ ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ.



ಕೆಲ ವಾರಗಳ ಹಿಂದೆ ಉಸಿರಾಟ ಮತ್ತು ವಯೋಸಹಜ ಕಾಯಿಲೆಗಳಿಂದಾಗಿ ಸರ್ಕಾರಿ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದ ಮಾದಯ್ಯನ್ ಇಂದು ಬೆಳಗ್ಗೆ ಹೃದಯಾಘಾತದಿಂದ ಮೃತಪಟ್ಟಿದ್ದಾನೆ. 25 ವರ್ಷಗಳ ಹಿಂದೆ ಸತ್ಯಮಂಗಲ ಅರಣ್ಯದಲ್ಲಿ ಹತ್ಯೆ ಪ್ರಕರಣದಲ್ಲಿ ಮಾದಯ್ಯನ್‌ಗೆ 1997 ನವೆಂಬರ್‌ನಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಈ ಹಿಂದೆ ಕೊಯಮುತ್ತೂರು ಜೈಲಿನಲ್ಲಿದ್ದ ಆತನನ್ನು ಇತ್ತೀಚೆಗೆ ಸೇಲಂ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು.

ರೈತ ಸಂಘ ಸೇರಿ ವಿವಿಧ ಸಂಘಟನೆಗಳ ಬೆಂಬಲಿತ ಅಭ್ಯರ್ಥಿ

ಪ್ರಸನ್ನ ಎನ್.ಗೌಡ ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಕೆ



ಮೈಸೂರು,ಮೇ 25(ಪಿಎಂ)– ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಒಕ್ಕೂಟ, ಆಮ್ ಆದ್ಮಿ ಪಾರ್ಟಿ ಹಾಗೂ ಪ್ರಗತಿಪರ ಸಂಘಟನೆಗಳ ಬೆಂಬಲಿತ ಅಭ್ಯರ್ಥಿಯಾಗಿ ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್‌ಗೆ ನಡೆಯುವ ಚುನಾವಣೆಗೆ ಪ್ರಸನ್ನ ಎನ್.ಗೌಡ ಬುಧವಾರ ನಾಮಪತ್ರ ಸಲ್ಲಿಸಿದರು.

ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಹಿರಿಯ ಸಾಹಿತಿ ದೇವನೂರ ಮಹಾದೇವ, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಜೊತೆಗೂಡಿ ಅವರು ನಾಮಪತ್ರ ಸಲ್ಲಿಸಿದರು. ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ದೇವನೂರ ಮಹಾದೇವ, ತುಂಬ ಹಿಂದಿನಿಂದಲೂ ಪ್ರಸನ್ನ ಎನ್.ಗೌಡ ಅವರನ್ನು ಗಮನಿಸಿದ್ದು, ಪದವೀಧರ ಕ್ಷೇತ್ರಕ್ಕೆ ತಕ್ಕನಾದ ಅಭ್ಯರ್ಥಿ ಸಿಕ್ಕಿದ್ದಾರೆ. ಅವರು ಸಂಘಟನಾ ಸಾಮರ್ಥ್ಯ ಹೊಂದಿದ್ದಾರೆ ಎಂದರು.

ಬನ್ನೂರು ಸುತ್ತಮುತ್ತ ಕೆರೆಗಳನ್ನು ಪುನರ್‌ಜೀವನಗೊಳಿಸಲು ಮೂರ್‍ನಾಲ್ಕು ವರ್ಷ ಸತತವಾಗಿ ಕೆಲಸ ಮಾಡಿದ್ದಾರೆ. ನಾನು ಗಮನಿಸಿದಂತೆ ಪ್ರಸನ್ನ ಎನ್.ಗೌಡ ಅವರು ಯಾವಾಗ ರೈತ ಸಂಘಕ್ಕೆ ಸೇರಿದರೋ ಆವಾಗ ಅವರಿಗೆ ಹೊಸ ಹುಟ್ಟು ಬಂದಿದೆ. ಸೈದ್ಧಾಂತಿಕ ರಕ್ಕೆ ಅವರಿಗೆ ದೊರೆತಿದೆ. ಇಂತಹವರನ್ನು ಪ್ರಜ್ಞಾವಂತರಾದ ಪದವೀಧರರು ಗೆಲ್ಲಿಸಬೇಕು. ಇವರಿಗೆ ಮತದಾರರು ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕು ಎಂದು ಕೋರಿದರು. ಇದಕ್ಕೂ ಮುನ್ನ ಪುರಭವನ ಆವರಣದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಎಸ್ಟಿ ಮೀಸಲಾತಿ ಶೇ. 7.5ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಮೇ 25– ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ. 7.5ಕ್ಕೆ ಹೆಚ್ಚಿಸಬೇಕೆಂದು ಆಗ್ರಹಿಸಿ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ವಾಲ್ಮೀಕಿ ಪುತ್ಥಳಿ ಬಳಿ ನಾಯಕ ಸಮುದಾಯಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಲೋಕೇಶ್ ಪಿಯಾ

ಈ ಸಂದರ್ಭದಲ್ಲಿ ಮಾತನಾಡಿದ ನಾಯಕ ಸಮುದಾಯದ ಯುವ ಮುಖಂಡರು ಆದ ಕಾರ್ಪೊರೇಟರ್ ಲೋಕೇಶ್ ಪಿಯಾ, ಈ ಹಿಂದೆ ನಮ್ಮ ಸಮುದಾಯದ ಜನಸಂಖ್ಯೆ ಕಡಿಮೆ ಇದ್ದ ಕಾರಣ ಶೇ. 3.5ರಷ್ಟು ಮೀಸಲಾತಿ ನೀಡಲಾಗುತ್ತಿತ್ತು. ಈಗ ಜನಸಂಖ್ಯೆ ಹೆಚ್ಚಾಗಿರುವುದರಿಂದ ಅದಕ್ಕೆ ಅನುಗುಣವಾಗಿ ಮೀಸಲಾತಿಯನ್ನು ಶೇ. 7.5ಕ್ಕೆ ಹೆಚ್ಚಳ ಮಾಡಬೇಕೆಂದು ಹೋರಾಟ ನಡೆಸಲಾಗುತ್ತಿದೆ.

ಹೋರಾಟದ ಮುಂಚೂಣಿ ವಹಿಸಿರುವ ರಾಜನಹಳ್ಳಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಗಳ ಬಳಿ ತೆರಳುವ ನಮ್ಮ ಸಮಾಜದ ಶಾಸಕರು ಹಾಗೂ ಸಂಸದರು, ಹೋರಾಟಕ್ಕೆ ಬೆಂಬಲ ನೀಡುತ್ತೇವೆ ಎಂದು ಬಾಯಿ ಮಾತಿನಲ್ಲಿ ಹೇಳಿ, ಯಾವುದೇ ಹೋರಾಟ ನಡೆಸದೆ, ವಿಧಾನಸೌಧದಲ್ಲಿ ಆರಾಮವಾಗಿ ಕುಳಿತಿರುತ್ತಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಮೀಸಲಾತಿಗಾಗಿ ಹೋರಾಟ ಮಾಡದೇ ಇರುವ ನಮ್ಮ ಸಮಾಜದ ಶಾಸಕರು ಹಾಗೂ ಸಂಸದರ ವಿರುದ್ಧ ಹೋರಾಟ ರೂಪಿಸಲು ಚಿಂತನೆ ನಡೆಸಲಾಗಿದೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED URGENTLY
Female Receptionist for Reputed Blood Bank in Mysore. Walk in interview on 26.05.2022 & 27.05.2022
9008123101 / 9845733597
Lions Blood Centre Jeevadhara. Address: 1869, MBM Lehar Complex, 2nd Floor, New Sayyaji Rao Road, Opp. IMA Building, Mysore-570021

WANTED CONOPY SALES EXECUTIVE
ಕೆನೊಪಿಯಲ್ಲಿ ಸೇಲ್ಸ್ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿದ್ದು, ಗ್ರಾಮಾಂತರ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
9008005454

30x40 ಸೈಟು @ Rs. 20 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು. ಮೈದನಹಳ್ಳಿ, ಇಲವಾಲ, ಹುಣಸೂರು ರೋಡ್, ಮೈಸೂರು.
9538583377

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

WANTED
Lady Yoga Teacher - cum - Office Assistant.
90355 06790
90087 27172

ಟೈಲರ್ಸ್ ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ
ಕೆಲಸ ಬನ್ನಿಮಂಟಪ
ಕೆಲಸದ ಸಮಯ
9.00 am to 6.00 pm
8884179981

ಶ್ರೀ ಗೌರಿಶಂಕರ ಟೂರಿಸ್ಟ್
10-7-22 (1 ದಿನ) ಘಾಟಿ ಸುಬ್ರಮ್ಮಣ್ಯ, ಕೋಟಿಲಿಂಗ, ಚಿಕ್ಕತಿರುಪತಿ ಇತ್ಯಾದಿ.
15-7-22 (9 ದಿನ) ಪಳನಿ, ಮಧುರೈ, ಕನ್ಯಾಕುಮಾರಿ, ರಾಮೇಶ್ವರ, 9 ನವಗ್ರಹ ಇತ್ಯಾದಿ.
12-8-22 (7 ದಿನ) ಕಾಶಿ, ಅಯೋಧ್ಯ, ಪ್ರಯಾಗ್‌ರಾಜ್, ಗಯ ಇತ್ಯಾದಿ.
12-9-22 (13 ದಿನ) ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಉತ್ತರಕಾಶಿ ಇತ್ಯಾದಿ. (ವಿಮಾನ ಮತ್ತು ಎ.ಸಿ. ಬಸ್ಸು) (ಊಟ, ವಸತಿ ಸೇರಿರುತ್ತದೆ)
9620002114

WANTED
Well Experienced Beautician Attractive Salary offered. 24 years well equiped & well Running Beauty Parlour is giving under daily or Monthly Rented Basis. Contact:
9845591646
Udayagiri, Mysore - 19

ವೃದ್ಧಾಶ್ರಮ
ಕುಡಿಯಲು ಬಿಸಿನೀರು, ಮಲಗಲು ಉತ್ತಮ ಹಾಸಿಗೆ, ಮಂಚ, ಬಿಸಿನೀರಿನ ಸ್ನಾನ, ದಿನಕ್ಕೆ 3 ಬಾರಿ ಊಟ, 2 ಬಾರಿ ಕಾಫಿ, ನೋಡಲು ಟಿ.ವಿ ಹಾಗೂ ಉತ್ತಮ ಪರಿಸರ ಉಳ್ಳ ವೃದ್ಧಾಶ್ರಮಕ್ಕೆ ಅರ್ಹ ವಯೋವೃದ್ಧರನ್ನು ಸೇರಿಸಿಕೊಳ್ಳಲಾಗುತ್ತದೆ. (ಷರತ್ತುಗಳ ಅನ್ವಯ) ಮತ್ತು ಅಡುಗೆ ಕೆಲಸಕ್ಕೆ ಮತ್ತು ವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ.
8197804473

ಆಫೀಸ್ (ಬೇಕಾಗಿದ್ದಾರೆ)
25 ರಿಂದ 35 ವರ್ಷ (PUC / BA / B.Com) ಪುರುಷ / ಮಹಿಳೆ, ಗೋಕುಲಂ ಸುತ್ತಮುತ್ತ, (ದ್ವಿಚಕ್ರ ವಾಹನವಿರಬೇಕು) ಸೆಕ್ಯೂರಿಟಿ ಗಾರ್ಡ್ (25 ರಿಂದ 55) ಹೆಬ್ಬಾಳ್, ಕುವೆಂಪುನಗರ (ವಾರದ ಸಂಬಳ) ಕರೆ: (10 ರಿಂದ 6)
9036745292

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಡ್ರೈವಿಂಗ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಡ್ರೈವಿಂಗ್, ಸೂಪರ್ ವೈಸರ್: 16,500+ W/o (8 hrs), ಗಾರ್ಡ್: 15,500+W/o (8hrs) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9880727819

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50%-50% ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

ತಕ್ಷಣ ಬೇಕಾಗಿದ್ದಾರೆ
EXECUTIVE ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ :–
6364414499

WANTED TEACHERS
BRILLIANCE NURSERY & PRIMARY SCHOOL
B.M. Shree Nagar, Mysore - 570016
English Medium
1) SSLC, NST / PUC NST - 2 Post
2) PUC D.Ed - 2 Post
Those who are interested can apply along with their documents with in 7 days. "Lady Teachers are preferable"
9916195956

WANTED TEACHERS
SAPTHASWARA HIGHER PRIMARY AND HIGH SCHOOL
B.M.Shree Nagar, Metagalli, Mysore - 570016
Kannada & English Medium
English Teacher - BA, B.Ed / MA, M.Ed - 1 Post
Those who are interested can apply along with their documents with in 7 days. "Lady Teachers are preferable"
9916195956

ತಕ್ಷಣ ಬೇಕಾಗಿದ್ದಾರೆ
PART TIME / FULL TIME / HOME-BASED
E-CODE GAS SAFE

EDUCATION	WORK TIME	SALARY
SSLC,PUC,DIP	4 HOURS	8000/-
Any Degree	8 HOURS	16000/-

(ಗ್ಯಾಸ್ ಸೇಫ್ ಬಗ್ಗೆ) ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಬೋಳು ತಲೆಯ ಸಮಸ್ಯೆಯೇ?



ಕಮಿತರ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಪ್ರರ್ಯಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ತಕ್ಷಣ ಬೇಕಾಗಿದ್ದಾರೆ
7/8/9/10ನೇ ತರಗತಿ, ಪಿ.ಯು.ಸಿ, ಐ.ಟಿ.ಐ ಹಾಗೂ ಡಿಪ್ಲೋಮೊ, ಡಿಗ್ರಿ ಉತ್ತೀರ್ಣ ಅಥವಾ ಅನುತ್ತೀರ್ಣಗೊಂಡಿರುವ ಯುವಕರು ತಕ್ಷಣ ಬೇಕಾಗಿದ್ದಾರೆ. ವೇತನ ಸುಮಾರು 10,800 ರಿಂದ 15,000 ಸಾವಿರದವರೆಗೆ ದೊರೆಯುತ್ತದೆ ಹಾಗೂ ESI, PF, ತಿಂಡಿ, ಊಟ ಇರುತ್ತದೆ.
SRI SAI ENTERPRISES
9686963526 / 9686965326
9945852004 / 9686453136

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ.ವರೆಗೆ ಗಳಿಸಿ. ತರಬೇತಿಗಾಗಿ
7406375196
9880548596

ಬೇಕಾಗಿದ್ದಾರೆ
ರಿಸೆಪ್ಷನಿಸ್ಟ್ –01
ರೂಮ್ ಬಾಯ್ಸ್–2
ವಿಳಾಸ; ಶ್ರೀ ಗಣೇಶ್ ಪ್ರಸಾದ್ ಲಾಡ್ಜ್, 1096, ಶಿವರಾಮಪೇಟೆ ಮುಖ್ಯ ರಸ್ತೆ, ಮೈಸೂರು. 570001 (10am to 6pm)
9986756866

ಟೀಚರ್ಸ್ ಬೇಕಾಗಿದ್ದಾರೆ
ಶಾಶ್ವತ್ ವಿದ್ಯಾಮಂದಿರ (ಆಂಗ್ಲ ಮಾಧ್ಯಮ) ಸಿದ್ಧರಾಮನಹುಂಡಿ ಶಿಕ್ಷಕಿಯರು ಬೇಕಾಗಿದ್ದಾರೆ. ಇಂಗ್ಲೀಷ್, ಗಣಿತ, ನರ್ಸರಿ ಹಾಗೂ ವಾಹನ ಚಾಲಕರು
9740032559
9986791152

CHANGE OF NAME
I, ALKA D/o. Late VISHNUDEV TRIPATHI Spouse of PRADEEP KUMAR SHUKLA resident of SMQ-4/4, 2 AIR FORCE SELECTION BOARD, MYSORE have changed my Name from ALKA to ALKA SHUKLA vide Affidavit IN-KA86352293412465U before Notary Y.M. Kiran dated 04 April 2022 at Mysore. Sd/-ALKA SHUKLA

ಹೊಸ ಮನೆ ಮಾರಾಟಕ್ಕಿದೆ
NEW HOUSE FOR SALE
ವಿಜಯನಗರ 2ನೇ ಹಂತ KD ಸರ್ಕಲ್ ಹತ್ತಿರ
25 X 30 ಅಳತೆಯ ಮನೆ
Ground Floor (2 BHK)
I[st] Floor (2 BHK)
2[nd] Floor (Room) Bathroom attached
Call: 98452 15749
94482 47165

S.M.GOLD
ಗಿರವಿ ಚಿನ್ನಾಭರಣ ಖರೀದಿ
ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ(T&C)
8050518881

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಊಟ ಮತ್ತು ವಸತಿ ಉಚಿತ. ಇಎಸ್‌ಐ, ಪಿ.ಎಫ್ ದೊರೆಯುತ್ತದೆ.
72593 89106

WANTED
Accounts Asst., Welders, Electricians.
Call Between 10am to 6pm
7259016509 / 512

ವರದಿಗಾರರು ಬೇಕಾಗಿದ್ದಾರೆ
ಸವಾಲ್ ಪತ್ರಿಕೆ ಮತ್ತು ಸವಾಲ್ ಟಿ.ವಿಯಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ತಾಲ್ಲೂಕುಗಳಿಗೆ ವರದಿಗಾರರು ಹಾಗೂ ಕಂಪ್ಯೂಟರ್ ಆಪರೇಟರ್‌ಗಳು ಬೇಕಾಗಿದ್ದಾರೆ.
0821-2403100 / /9611834548

Wanted Teachers
for a BGS English Medium School at Gungral Chatra, Mysore. Required subject teachers for Chemistry, Biology, PET, English with D.Ed. and B.Ed. qualification.
Contact immediately.
7349306481 / 9110867065

SITE FOR SALE
Property close to Ramakrishnanagar, 200 metres from Andolana Circle. Available dimentions 30x50. Immediately registration and construction. Bank loan available.
Mob: 99865-92352

WANTED
Service Technician
ITI holder / 2nd PUC For Home Appliances
Authorised Service Center & KENT RO Water Purifier Service Center. *Contact:*
9900237315 / 9845963421

WANTED
Female Telecallers
Language: Kannada & others
Qualification: SSLC / PUC / Degree / Post Graduation.
Salary: Rs. 10,000 to Rs. 15,000 + Incentive.
9739015150 / 9535442888

Site Clearance Sale
30x40, 30x50
MUDA Approved, Ready to construct. All East facing sites @ Bogadi-Gaddige Main Road.
Call Now: 85469-79039, 97431-82602

SITE FOR SALE
60x40 feet, East facing at Ahad City, Mysuru. (Mahadevpura road). Beautiful layout, Gated community with Security, Water Supply, Electricity, UGD and Multiple Beautiful Gardens. Contact:
9901231117

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಹಾಸ್ಟೆಲ್‌ಗೆ ಕುಕ್ ಮತ್ತು ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9380394364

Franchise Opportunity
Trackon Couriers Pvt. Ltd. A leading courier and Cargo Company requires Franchise for Mysore.
Contact:
Mob: 9742583606

ದೂರವಾಣಿ ಕರೆ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: +91 8618439828

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ). ಸಂಬಳ 15000 ರಿಂದ 18000. (ESI, PF, ಸೌಲಭ್ಯ ಇರುತ್ತದೆ).
8050699742, 9513253739

ಸೈಟು ಮಾರಾಟಕ್ಕಿದೆ
60x40 ಅಡಿ ವಿಸ್ತೀರ್ಣ
ವಿಳಾಸ: ನಂ. 198, 'ಸಿ' ಬ್ಲಾಕ್, ವಿಜಯನಗರ 3ನೇ ಹಂತ, ಮೈಸೂರು.
7975952476, 8880132960

MUDA Site For Sale
East face MUDA site is for sale at Srirampura 2nd Stage.
Cost: 42 Lakhs (Negotiable)
Mob: 8296716216
BROKERS EXCUSE

SITES FOR SALE
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limits) 1.5 kms from J P Nagar Ring Road.
8660105902

ಬೇಕಾಗಿದ್ದಾರೆ
ಅಡುಗೆ ಕೆಲಸಕ್ಕೆ ಮತ್ತು ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಲಿಂಗಾಯತರು, ಬ್ರಾಹ್ಮಣರು, ಅಯ್ಯಂಗಾರ್ ಮಹಿಳೆಯರು ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು 18 ರಿಂದ 35, ವಿಜಯನಗರ ಸುತ್ತಮುತ್ತ
8088740862

WANTED
SALESMAN
(IN-SHOP)
Mobile Accessories Distributors
Minimum age: 25 years.
Mob: 9901308600

SDJ JEWELERS
ಪುರುಷರು ಮತ್ತು ಮಹಿಳೆಯರು
Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್. ಆರ್. ಮೊಹಲ್ಲಾ ಮುಂತಾದ ಏರಿಯಾಗಳಲ್ಲಿ ಕಂಪನಿಗಳಿಗೆ, Officerಗಳಿಗೆ, Showroomಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. Any Qualification ESI+PF+OT ಯೊಂದಿಗೆ ಸಂಬಳ: 14000/- ರಿಂದ 36,000. ತಕ್ಷಣ ಸಂಪರ್ಕಿಸಿ:
9035088408

17 ಗುಂಟೆ ಜಮೀನು ಮಾರಾಟಕ್ಕಿದೆ
AHAD ಸಿಟಿ ಪಕ್ಕ, ಶೂಟಿಂಗ್ ಮಹದೇವಪುರ ರಸ್ತೆ
7892565278

FOR SALE
40x60 (HOUSE / NORTH FACE) NEAR JSS ENGLISH SCHOOL, METAGALLI, MUDA / ALL CLEAR TITLE DEED FLAT / 3BHK/3RD FLOOR, FLAT / 2 BHK / GROUND FLOOR, SANKALP, NEAR MAHARSHI SCHOOL
9972837203

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
Any ITI, PUC, Degree Pass or Fail 8 ಗಂಟೆಯ ಅವಧಿ 12,000, W/o & ESI, PF, ಊಟ, ತಿಂಡಿ ಸೌಲಭ್ಯವಿರುತ್ತದೆ. ಮತ್ತು ಸೆಕ್ಯೂರಿಟಿ ಕೆಲಸಕ್ಕೆ ಗಾರ್ಡ್‌ಗಳು ಬೇಕಾಗಿದ್ದಾರೆ. ಕೂರ್ಗಳ್ಳಿ & ಮೇಟಗಳ್ಳಿ ಏರಿಯಾದಲ್ಲಿ ವಯಸ್ಸಿನ ಮಿತಿ 55 ವರ್ಷ
9035367083 / 6361548626

HOUSE FOR SALE
MUDA 30x40
New 4 BHK Duplex House with 22 Squares Furnished, E/F Door at SBM Layout, Bogadi - Rs.1.40 Cr Pillar construction,100 mtrs from Gaddige Road
Direct Owner: 6361295132

HOUSE FOR SALE
43x66, West Facing Site, Door North Facing, Ground and First Floor, With Car Garage & Portico, Swimming Pool Road, 6th Main, Saraswathi Puram, Mysore-09.
Call: 88923 23823

JNANAGANGA HOUSING SOCIETY, MYSORE
40x60 North Facing, Site For Sale (Broker Excuse) Square Feet 3750/- Contact
8904319072

FOR SALE
1)30x40 attach Brahmins layout 12 lks
2) 20x30 Vijayanagar 4th stage
3) 20x30 g+1floor Srirampuranagar
4)50x80 Commercial Dattagalli
5) 20x30 SATHAGALLI 2nd stage
6) 30x40 G+floor new house Bogadi Near Hari Vidyalaya .
PRAKRUTHI PROPERTIES
9035990359/9538690359

BUSINESS FOR SALE
Silk show room (Textiles) & unisex salon and spa,
1) Area 1500sq ft
2) Fully equipped with stocks
3) Glass buliding , at Gokulam Main circle, Contact
9840455005/9606045981

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ, *PDI ದ್ವಿಚಕ್ರ ವಾಹನದ ಆಕ್ಸಿಸರೀಸ್ ಫಿಟ್ಟಿಂಗ್ ಮಾಡಲು, Two wheeler Technician (ದ್ವಿಚಕ್ರ ವಾಹನದ ಮೆಕಾನಿಕ್), ಕೂಡಲೇ ಸಂಪರ್ಕಿಸಿ
9743647484
mail id-vijoysankar@gmail.com

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಅಡುಗೆ ಸಹಾಯದ ಕೆಲಸ ಮಾಡಬಲ್ಲ 40 ವಯಸ್ಸು ಮೀರದ ಆರೋಗ್ಯವಂತ ಸಮರ್ಥ ಮಹಿಳೆ, ಕೆಲಸದ ಸಮಯ ಬೆಳಗ್ಗೆ 9 ರಿಂದ ಸಂಜೆ 5, (ಶಾಲೆ ಸುತ್ತಮುತ್ತ ಸಮೀಪದಲ್ಲೇ ವಾಸಿಸುವವರಿಗೆ ಆದ್ಯತೆ) ಸಂಪರ್ಕಿಸಿ: ಜ್ಞಾನ ಗಂಗೋತ್ರಿ ಕಾನ್ವೆಂಟ್, ಇಂಗ್ಲೀಷ್ ಮೀಡಿಯಮ್, ರಾಜೇಂದ್ರನಗರ, ಮೈಸೂರು – 570007
9243580672 / 9113980741

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
23/06 ಕಾಶಿ ವಿಶ್ವನಾಥ, ರಾಂಚಿ ಜಗನ್ನಾಥ್ ಮಂದಿರ, ಜಾರ್ಖಂಡ್ ವೈದ್ಯನಾಥ, ಗಯ, ಬುದ್ಧ ಗಯ, ಅಯೋಧ್ಯ, ಪ್ರಯಾಗ ರಾಜ್.
21/06 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ, ಉಜ್ಜಯಿನಿ ಮಹಾ ಕಾಲೇಶ್ವರ, ಓಂಕಾರೇಶ್ವರ, ಮಹೇಶ್ವರ ಇತ್ಯಾದಿ.
20/06 ಪುರಿ ಜಗನ್ನಾಥ್, ಕೋಣಾರ್ಕ್ ಸೂರ್ಯ ಟೆಂಪಲ್, ಚಂದ್ರ ಭಾಗ ಬೀಚ್, ಭುವನೇಶ್ವರ್, ಲಿಂಗರಾಜು ಟೆಂಪಲ್, ಕೇದಾರ ಗೌರಿ, ಸಾಕ್ಷಿ ಟೆಂಪಲ್
9964527782 / 9591017782

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ಸಂಬಳ: 14,500 /- (8 hours, 26 days),ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9538567819

HOUSE FOR SALE
MUDA Allotted 40x55
N/F, 4 BHK Duplex Furnished, 32 squares, 15 years Old House at T K Layout, 4th Stage, Prime Location, Rs. 1.95 cr. Owner will give 6 months Time for registration.
Brokers Excuse
8660105902

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಫೀಲ್ಡ್ ಸೂಪರ್ ವೈಸರ್ –2. (ದ್ವಿಚಕ್ರ ವಾಹನವಿರಬೇಕು)
2) ಸೆಕ್ಯೂರಿಟಿ ಗಾರ್ಡ್‌ಗಳು –10
ಸ್ಥಳ: 1) ಬಲ್ಲಾಳ್ ಸರ್ಕಲ್, 2) ಮಂಟಿ (ಕೆ.ಆರ್.ಎಸ್ ರಸ್ತೆ), 3) ಹರ್ಷ ರಸ್ತೆ, 4) ವಿಜಯನಗರ 4ನೇ ಹಂತ
9686422400 / 9242406261

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮದ್ದೂರು ಹುಂಡಿ, ಗ್ರಾಮದಲ್ಲಿ 32 ಗುಂಟೆ, ಸುತ್ತಲು ತಂತಿ ಬೇಲಿ ಕಾಂಪೌಂಡ್ ಹಾಕಲಾಗಿದೆ ಹಾಗೂ ಮೈಸೂರು ಮಾನಂದವಾಡಿ ಮುಖ್ಯರಸ್ತೆಯಲ್ಲಿ 1 ಎಕರೆ, 18 ಗುಂಟೆ ಜಮೀನು ಮಾರಾಟಕ್ಕಿದೆ.
9945661696

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ ಊಟ, ವಸತಿಯೊಂದಿಗೆ 12,000 – 180000 ರವರೆಗೆ
9739292222 / 0821-3563782
9035113222

ಇಂದೇ ಸಂಪರ್ಕಿಸಿ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್ ಮುಂತಾದ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Line incharge, Maintance ಮತ್ತು Receptionist, Data Entry, Assistant Admin, Telecallers ಮುಂತಾದ ಕೆಲಸಕ್ಕೆ ಬೇಕಾಗಿದ್ದಾರೆ ಸಂಬಳ 14,000 - 38,000/- (ESI+PF+Ot) ಸೇರಿ
9980850141 / 9980630131

ಬೇಕಾಗಿದ್ದಾರೆ
ಕೊರಿಯರ್ಸ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಹಾಗೂ ಬೆಳಗ್ಗೆ 8 ರಿಂದ ಮಧ್ಯಾಹ್ನ 1 ಗಂಟೆ ಹಾಗೂ ಸಂಜೆ 6-00 pm to 9.30 part time ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಮತ್ತು ಆಫೀಸ್ Incharge ಒಬ್ಬರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು. ಸಂಪರ್ಕಿಸಿ:
9449871790
ಸಮಯ: ಬೆ. 10 am ರಿಂದ ಸಂಜೆ: 6 pm

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ
8884179981

ಮೈಸೂರು ಮ್ಯಾರೇಜ್ ಲಿಂಕ್ಸ್
50 ವರ್ಷ ಡಾಕ್ಟರ್ ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವರನಿಗೆ ಸುಂದರ, ವಿದ್ಯಾವಂತ ವಧು, ವಿಧವೆ, ವಿಚ್ಛೇದಿತರು. ನೇರ ಸಂಪರ್ಕಿಸಿ ಜಾತಿ ಅಭ್ಯಂತರವಿಲ್ಲ.
ಡಾ.ಗುರೂಜಿ ಮೈಸೂರು
6361740552

ತಕ್ಷಣ ಬೇಕಾಗಿದ್ದಾರೆ
ಶ್ರೀ ರೇಣುಕಾ ಫ್ಯೂಯಲ್ ಸ್ಟೇಷನ್
#10/ಎ, ಮಾನಂದವಾಡಿ ರೋಡ್, ಎನ್.ಹೆಚ್.ಪಾಳ್ಯ, ಮೈಸೂರು – 570008
ಪೆಟ್ರೋಲ್ ಬಂಕನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ: ಚಂದ್ರಶೇಖರ್
8861999933

WANTED
ಮೈಸೂರು ಮತ್ತು ವಿರಾಜಪೇಟೆಯಲ್ಲಿ E-com Express Courier ಅಲ್ಲಿ ಕೆಲಸ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ. ಹಾಗೂ ESI/ PF ಆಕರ್ಷಕ ವೇತನ ಲಭ್ಯವಿದೆ
7483205140 / 8971753918
9164475389

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜ್ ಪಕ್ಕ, ಮೈಸೂರು.
9916908454

ಬೃಹತ್ ಉದ್ಯೋಗವಕಾಶ
ಮೈಸೂರಿನಲ್ಲಿರುವ ಬೃಹತ್ AWG ಕಂಪನಿಗೆ Freshers + Experience ಆದ ಅಭ್ಯರ್ಥಿಗಳು ಬೇಕಾಗಿದ್ದಾರೆ. (ನೇರ ಸಂದರ್ಶನ, ನೇರ ಆಯ್ಕೆ) ವಿದ್ಯಾರ್ಹತೆ: SSLC, PUC, ITI, Any Degree, Diploma etc, ವಯೋಮಿತಿ 18-31 years, ತಿಂಗಳಿಗೆ : 24,000 - 31,000, (ಪ್ರಮೋಷನ್ + ಉಚಿತ ವಸತಿ) ಸಂದರ್ಶನದ ಸಮಯ + ಸ್ಥಳ: 11 ರಿಂದ 4pm+ ಕುವೆಂಪುನಗರ. ಪ್ರೀತಿಗೌಡ
9743199416 / 9844219943

ಬೇಕಾಗಿದ್ದಾರೆ
Door Step Car Wash ಹುಡುಗರು ಬೇಕಾಗಿದ್ದಾರೆ. ತಿಂಗಳಿಗೆ 15,000 - 25,000 ದುಡಿಯಿರಿ. 2 wheeler ಇರಬೇಕು
8105169384

(ಸ್ವರ ಭವಿಷ್ಯ)
ಶ್ರೀ ಮಂಜುನಾಥ ಸ್ವಾಮಿ ಜ್ಯೋತಿಷ್ಯಂ
ಪಂಡಿತ್ ವಿಷ್ಣುಕಾಂತ್ ಜೋಶಿ
8549998630 / 8549998630
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳಾದ ಸಾಲದ ಬಾಧೆ, ದಾಂಪತ್ಯ ಸಮಸ್ಯೆ, ಕೋರ್ಟ್ ಕೇಸ್ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸ ಇನ್ನು ಅನೇಕ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ತಿಳಿಸುತ್ತಾರೆ. ಫೋನಿನ ಮುಖಾಂತರ ಅಥವಾ ನೇರವಾಗಿ ಚಾಮರಾಜನಗರಕ್ಕೆ ಬಂದು ಭೇಟಿ ಮಾಡಿ.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ಗರ ದೈವ ಚೌಡಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಅಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ರೈತರ ಕುಂದುಕೊರತೆ ನಿವಾರಣೆಗೆ ಅಗತ್ಯ ಕ್ರಮಕೈಗೊಳ್ಳಿ

ಜಿಲ್ಲಾಧಿಕಾರಿ ಎಸ್.ಅಶ್ವತಿ ಸೂಚನೆ



ಮಂಡ್ಯ, ಮೇ 25– ರೈತರು ಆರ್ಥಿಕವಾಗಿ ಸದೃಢವಾಗಬೇಕಾದರೆ ಜಿಲ್ಲಾಡಳಿತದಿಂದ ಸಿಗುವ ಎಲ್ಲಾ ಸೌಲಭ್ಯಗಳು ನಿಗದಿತವಾಗಿ ತಲುಪಬೇಕು. ರೈತರ ಕುಂದುಕೊರತೆ ನಿವಾರಣೆಗೆ ಅಗತ್ಯ ಕ್ರಮಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ರೈತರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಣ್ಣು ಆರೋಗ್ಯ ಅಭಿಯಾನದಡಿ ಜಿಲ್ಲೆಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಿ ಮಣ್ಣಿನ ಸ್ಯಾಂಪಲ್ ತೆಗೆದು, ತರಬೇತಿ ಹಾಗೂ ಪ್ರಾತ್ಯಕ್ಷಿಕೆ ಆಯೋಜಿಸಿ ರೈತರಿಗೆ ಅರಿವು ಮೂಡಿಸಬೇಕು ಎಂದರು.

ರೈತರಿಗೆ ಬರುವ ಸರ್ಕಾರದ ಅನುದಾನವನ್ನು ಸಾಲದ ಹೆಸರಿನಲ್ಲಿ ಕಡಿತಗೊಳಿಸದೆ ರೈತರಿಗೆ ಸೌಲಭ್ಯವನ್ನು ಒದಗಿಸಬೇಕು ಎಂದು ಬ್ಯಾಂಕ್ ಸಿಬ್ಬಂದಿಗಳಿಗೆ ಸೂಚಿಸಿದರು. ತಾಲೂಕು ಮಟ್ಟದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ರೈತರ ಬೇಡಿಕೆಗಳ ಕುರಿತು ಚರ್ಚಿಸಿ ತಾಲೂಕು ಮಟ್ಟದ ಅಧಿಕಾರಿಗಳು ಸಭೆ ನಡೆಸಿ ಅಗತ್ಯ ಕ್ರಮವಹಿಸುವಂತೆ ಸೂಚಿಸಿದ ಅವರು, ಫಲಾನುಭವಿಗಳನ್ನು ಗುರುತಿಸಿ ಯಂತ್ರೋಪಕರಣಗಳನ್ನು ವಿತರಿಸುವ ಸಂದರ್ಭದಲ್ಲಿ ಅದನ್ನು ಬಳಸುವ ವಿಧಾನದ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕು. ರೈತರ ಜಮೀನುಗಳ ದುರಸ್ತಿ, ಪೋಡಿ, ಸಾಗುವಳಿ ಚೀಟಿ ವಿತರಣೆ ಮಾಡುವ ಸಂದರ್ಭದಲ್ಲಿ ಅವ್ಯವಹಾರ ಮಾಡಿದಲ್ಲಿ ಕಾನೂನಾತ್ಮಕ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಮಳೆ ಹಾನಿ ಉಂಟಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಬೆಳೆ ನಷ್ಟ ಮತ್ತು ಬಾಕಿ ಉಳಿದಿರುವ ಸರ್ವೆ ಪ್ರಕ್ರಿಯೆ ಶೀಘ್ರದಲ್ಲಿ ನಡೆಸಿ ಅದಕ್ಕೆ ಪರಿಹಾರ ಒದಗಿಸಬೇಕು ಎಂದರು.

ರೈತರಿಗೆ ಮುಖ್ಯವಾದ ಕೃಷಿ, ಬ್ಯಾಂಕ್, ವಿದ್ಯುತ್, ತೋಟಗಾರಿಕೆ, ಕಂದಾಯಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಗುಣಮಟ್ಟದ ಬಿತ್ತನೆ ಬೀಜ, ಲೋಪವಿಲ್ಲದ ಶುದ್ಧ ರಸಗೊಬ್ಬರ, ವಿಳಂಬವಿಲ್ಲದೆ ಬ್ಯಾಂಕ್‌ಗಳು ಸಾಲ ಸೌಲಭ್ಯ ಹಾಗೂ ಸಮರ್ಪಕ ವಿದ್ಯುತ್ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಪಾಂಡವಪುರ ಉಪ ವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಮಂಡ್ಯ ಉಪವಿಭಾಗಾಧಿಕಾರಿ ಐಶ್ವರ್ಯ, ಜಿಲ್ಲಾಧಿಕಾರಿಗಳ ಕಚೇರಿಯ ಹಿರಿಯ ಸಹಾಯಕ ಸ್ವಾಮಿಗೌಡ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎಸ್. ಅಶೋಕ್, ಜಿ.ಪಂ ಉಪಕಾರ್ಯದರ್ಶಿ ಧನರಾಜ್, ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕಿ ಜಿ.ಸೌಮ್ಯ, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಮಂಜುನಾಥ್, ಲೀಡ್ ಬ್ಯಾಂಕ್ ವ್ಯವಸ್ಥಾಪಕ ದೀಪಕ್, ರೈತ ಮುಖಂಡರಾದ ಸುನಂದಾ ಜಯರಾಂ, ರೈತ ಮುಖಂಡರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಆಲಭುಜನಹಳ್ಳಿ ಶ್ರೀ ಬಸವೇಶ್ವರ ದೇಗುಲದ ಬಸವ ನಿಧನ



ಭಾರತೀನಗರ, ಮೇ 25–(ಅಣ್ಣೂರು ಸತೀಶ್)– ಇಲ್ಲಿಗೆ ಸಮೀಪದ ಆಲಭುಜನಹಳ್ಳಿಯ ಶ್ರೀಬಸವೇಶ್ವರಸ್ವಾಮಿ ದೇವಾಲಯದ ಬಸವ ಅನಾರೋಗ್ಯದಿಂದ ಮಂಗಳವಾರ ಸಂಜೆ ನಿಧನವಾಗಿದೆ.

ಬಸವಪ್ಪನಿಗೆ 20 ವರ್ಷ ವಯಸ್ಸಾಗಿದ್ದು, ಕಳೆದ ಒಂದು ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿತ್ತು.

ಬಸವೇಶ್ವರ ದೇವಾಲಯದ ಹಿಂಭಾಗ ಬುಧವಾರ ಪೂಜಾ ಕೈಂಕರ್ಯಗಳೊಂದಿಗೆ ಹಿಂದೂ ಸಂಪ್ರದಾಯದಂತೆ ಅಂತ್ಯ ಸಂಸ್ಕಾರವನ್ನು ಗ್ರಾಮಸ್ಥರು, ಭಕ್ತಾದಿಗಳು ನೆರವೇರಿಸಿದರು. ಅಂತ್ಯ ಸಂಸ್ಕಾರಕ್ಕೂ ಮುನ್ನ ಗ್ರಾಮದ ಪ್ರತೀ ಮನೆಗಳ ಮಹಿಳೆಯರು ಬಸವಪ್ಪನ ಸನ್ನಿಧಿಗೆ ಆಗಮಿಸಿ ದೀಪಾರಾಧನೆಯನ್ನು ಸಲ್ಲಿಸಿ ಕಾರ್ಕಹಳ್ಳಿ ಮಲ್ಲಾರಾಧ್ಯರವರ ನೇತೃತ್ವದಲ್ಲಿ ಅಂತ್ಯಸಂಸ್ಕಾರಕ್ಕೆ ಅನುವುಮಾಡಿಕೊಟ್ಟರು.

ಸುತ್ತ-ಮುತ್ತಲ ಗ್ರಾಮದ ಭಕ್ತಾದಿಗಳು ಆಗಮಿಸಿ ಅಂತಿಮ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಇ–ಶ್ರಮ್ ಚೀಟಿ ವಿತರಣೆ



ಶ್ರೀರಂಗಪಟ್ಟಣ,ಮೇ 25(ವಿನಯ್ ಕಾರೇಕುರ)– ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಇ ಶ್ರಮ್ ಚೀಟಿಗಳನ್ನು ವಿತರಿಸಲಾಯಿತು.

ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಮತ್ತು ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ರೆಡ್‌ಕ್ರಾಸ್ ಘಟಕದ ವತಿಯಿಂದ ತಾಲೂಕಿನ ವಿವಿಧ ಗ್ರಾಮಗಳ 80 ಜನರಿಗೆ 'ಇ-ಶ್ರಮ್' ಚೀಟಿಗಳನ್ನು ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಾಂಶುಪಾಲ ಸಾಲ್ದಾನಾ ವಿತರಿಸಿದರು.

'ಇ-ಶ್ರಮ್' ಚೀಟಿ ಹೊಂದಿರುವವರು ಅಕಾಲಿಕ ಮರಣಕ್ಕೆ ತುತ್ತಾದರೆ 75 ಲಕ್ಷ, ಗಾಯಗೊಂಡರೆ 71 ಲಕ್ಷ ರೂ. ಪರಿಹಾರ ಸಿಗಲಿದೆ ಎಂದು ಆರೋಗ್ಯ ರಕ್ಷಾ ಸಮಿತಿ ಸದಸ್ಯ ಡಾ.ಪ್ರಶಾಂತ್ ತಿಳಿಸಿದರು. ಪುರಸಭೆ ಉಪಾಧ್ಯಕ್ಷ ಕೃಷ್ಣಪ್ಪ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ನಳಿನಾ ಸತ್ಯನಾರಾಯಣ, ಡಾ.ಆರ್.ಕೆ. ನಾಗರಾಜು, ಡಾ.ಶಿವರಾಮಶಾಸ್ತ್ರಿ, ಡಾ.ರವಿ ಇದ್ದರು.

ಹೆಚ್ಚಿನ ಚಿಕಿತ್ಸೆಗಾಗಿ ಡಾ.ಶಂಕರೇಗೌಡ ಬೆಂಗಳೂರಿಗೆ ರವಾನೆ



ಮಂಡ್ಯ, ಮೇ 25– ಐದು ರೂ. ವೈದ್ಯರೆಂದೇ ಮಂಡ್ಯ ಜಿಲ್ಲೆ ಮಾತ್ರವಲ್ಲದೇ ರಾಜ್ಯಾದ್ಯಂತ ಹೆಸರುವಾಸಿಯಾಗಿರುವ ಖ್ಯಾತ ಚರ್ಮರೋಗ ತಜ್ಞ ಡಾ. ಶಂಕರೇಗೌಡ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಪೋರ್ಟಿಸ್ ಆಸ್ಪತ್ರೆಗೆ ಬುಧವಾರ ಮಧ್ಯಾಹ್ನ ರವಾನಿಸಲಾಗಿದೆ.

ಕಳೆದ ಸೋಮವಾರ ರಾತ್ರಿ ಮಂಡ್ಯ ನಗರದ ಬಂದೀಗೌಡ ಬಡಾವಣೆಯಲ್ಲಿರುವ ಅವರ ನಿವಾಸದಲ್ಲಿ ತೀವ್ರ ಹೃದಯಾಘಾತಕ್ಕೊಳಗಾಗಿದ್ದ ಅವರನ್ನು ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಇಂದು ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಬೆಂಗಳೂರಿನ ಪೋರ್ಟಿಸ್ ಆಸ್ಪತ್ರೆಗೆ ಮೈಸೂರಿನಿಂದ ಬೆಂಗಳೂರಿನವರೆಗೆ ಜೀರೋ ಟ್ರಾಫಿಕ್‌ನಲ್ಲಿ ಕರೆದೊಯ್ಯಲಾಯಿತು. ಅವರ ಆರೋಗ್ಯದ ಬಗ್ಗೆ ಇಲ್ಲಸಲ್ಲದ ವದಂತಿಗಳು ಹಬ್ಬುವುದು ಮುಂದುವರೆದ ಹಿನ್ನೆಲೆಯಲ್ಲಿ ಅವರ ಬೆಂಬಲಿಗರು ಹಾಗೂ ಅಭಿಮಾನಿಗಳು ಆತಂಕಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯುತ್ತಿದ್ದು, ಅವರ ಆರೋಗ್ಯ ಸುಧಾರಣೆಯತ್ತ ಸಾಗಿದೆ ಎಂದು ಗೌಡರ ಪತ್ನಿ ರುಕ್ಮಿಣಿ ಶಂಕರೇಗೌಡ ತಿಳಿಸಿದ್ದಾರೆ.

ಶಾಲಾ ಶುಲ್ಕ ಸೂಚನಾ ಫಲಕದಲ್ಲಿ ಪ್ರಕಟಿಸಿ

ಮಂಡ್ಯ, ಮೇ 25– ಜಿಲ್ಲೆಯಲ್ಲಿ 2022–23ನೇ ಶೈಕ್ಷಣಿಕ ಸಾಲು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಖಾಸಗಿ ಅನುದಾನ ರಹಿತ ಪ್ರಾಥಮಿಕ ಪ್ರೌಢಶಾಲಾ ಮುಖ್ಯಸ್ಥರು ನಿಯಮಾನುಸಾರ ಶುಲ್ಕವನ್ನು ನಿಗದಿಪಡಿಸಿಕೊಂಡು ತಮ್ಮ ಶಾಲೆಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವಂತೆ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಕಾಂಗ್ರೆಸ್‌ನಿಂದ ಗೊಂದಲ ಸೃಷ್ಟಿ

ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಆರೋಪ



ಪದವೀಧರ ಚುನಾವಣೆ ಹಿನ್ನೆಲೆಯಲ್ಲಿ ಚಾಮರಾಜನಗರದ ಸೇಂಟ್ ಜೋಸೆಫ್ ಪ್ರೌಢಶಾಲೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಸಚಿವ ಬಿ.ಸಿ.ನಾಗೇಶ್ ಮತಯಾಚಿಸಿದರು.

ಚಾಮರಾಜನಗರ, ಮೇ 25(ಎಸ್‌ಎಸ್)– ವೈಚಾರಿಕ ವಿಷಯಗಳ ಮೇಲೆ ವಾದ ಮಾಡಲು ವಿಫಲವಾಗಿರುವ ಜಾತಿ ವಿಚಾರ ಮುಂದಿಟ್ಟುಕೊಂಡು ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಕಾಂಗ್ರೆಸ್ ಗೊಂದಲ ಸೃಷ್ಟಿಸುತ್ತಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಆರೋಪಿಸಿದರು.

ಪದವೀಧರ ಚುನಾವಣೆ ಹಿನ್ನೆಲೆಯಲ್ಲಿ ಬುಧವಾರ ನಗರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಪಠ್ಯಪುಸ್ತಕ ಮುದ್ರಣಗೊಂಡಿದೆ. ಯಾರು ಬೇಕಾದರೂ ಪುಸ್ತಕವನ್ನು ಓದಬಹುದು. ಪಠ್ಯಪುಸ್ತಕದ ಬಗ್ಗೆ ವಿನಾಕಾರಣ ಗೊಂದಲ ಸೃಷ್ಟಿಸಲಾಗುತ್ತಿದೆ. ನಾವು ಏನನ್ನೂ ಮುಚ್ಚಿಟ್ಟಿಲ್ಲ. ಹಿಂದಿನವರು ಮಹಾರಾಜರ ಪಠ್ಯವನ್ನು ಪುಸ್ತಕದಿಂದ ತೆಗೆದಿರಲಿಲ್ಲವೇ? ಟಿಪ್ಪು ಪಠ್ಯ ಕುರಿತು ಐದು ಪುಟಗಳನ್ನು ವಿಸ್ತರಿಸಲಿಲ್ಲವೇ? ಎಂದು ಪ್ರಶ್ನಿಸಿದರು.

ಪಠ್ಯ ಪರಿಷ್ಕರಣೆ ಸಮಿತಿಯು ಕಳೆದ ಎಂಟು ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂತು. ಆಗ ಮಾತನಾಡದವರು ಈಗ ಮಾತನಾಡುತ್ತಿದ್ದಾರೆ. ಆ ಪಠ್ಯ ಕೈಬಿಟ್ಟಿದ್ದಾರೆ, ಈ ಪಠ್ಯ ಕೈ ಬಿಡಲಾಗಿದೆ ಎಂದು ಕಾಂಗ್ರೆಸ್‌ನವರು ಹೇಳಿದರು. ಪಠ್ಯ ಪುಸ್ತಕ ಹೊರಬಂದಾಗ ಇದೆಲ್ಲ ಸುಳ್ಳು ಎಂಬುದು ಸಾಬೀತಾಯಿತು. ಮೊದಲಿಗೆ ಟಿಪ್ಪು ಪಠ್ಯ ಕೈಬಿಡಲಾಗಿದೆ ಎಂದು ಹೇಳಿದರು.

ಪಠ್ಯದಲ್ಲಿ ಟಿಪ್ಪು ಪಠ್ಯ ಇದೆ ಎಂದು ತಿಳಿಯುತ್ತಿದ್ದಂತೆಯೇ ಭಗತ್‌ಸಿಂಗ್ ಪಠ್ಯ ಇಲ್ಲ ಎಂದರು. ಅದೂ ಸುಳ್ಳು ಎಂಬುದು ತಿಳಿಯುತ್ತಿದ್ದಂತೆಯೇ ಬಸವಣ್ಣ, ನಾರಾಯಣ ಗುರು, ಕುವೆಂಪು ಅವರ ಪಠ್ಯದ ಬಗ್ಗೆ ಮಾತನಾಡಿದರು. ಈ ಆರೋಪಗಳೆಲ್ಲವೂ ಸುಳ್ಳಾದ ನಂತರ ಇದೀಗ ಜಾತಿಯ ವಿಚಾರವನ್ನು ಮುಂದಿಟ್ಟುಕೊಂಡು ಆರೋಪಿಸಲಾಗುತ್ತಿದೆ. ಕಾಂಗ್ರೆಸ್ ವೈಚಾರಿಕತೆಯ ಅಧಃಪತನಕ್ಕೆ ಇಳಿದಿದೆ ಎಂದು ಸಚಿವ ನಾಗೇಶ್ ದೂರಿದರು.

> ಶಾಲಾ ಪಠ್ಯದಲ್ಲಿ ತಮ್ಮ ಲೇಖನವನ್ನು ಪ್ರಕಟಿಸಲು ನನ್ನ ಒಪ್ಪಿಗೆ ಇಲ್ಲ ಎಂದು ಸಾಹಿತಿ ದೇವನೂರ ಮಹಾದೇವ ಅವರು ಯಾವ ಒತ್ತಡದಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಮಹಾದೇವ ಅವರೊಂದಿಗೆ ಮಾತನಾಡುತ್ತೇನೆ.
>
> –ಬಿ.ಸಿ.ನಾಗೇಶ್,
> ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ.

ಮುಂದಿನ ದಿನಗಳಲ್ಲಿ ವಿಜಯೇಂದ್ರಗೆ ಅವಕಾಶ

ಚಾಮರಾಜನಗರ: ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ವಿಧಾನ ಪರಿಷತ್ ಚುನಾವಣೆ ಟಿಕೆಟ್ ಕೈ ತಪ್ಪಿದ ಸಂಬಂಧ ಪ್ರತಿಕ್ರಿಯಿಸಿದ ಸಚಿವರು, ಅದು ಪಕ್ಷದ ಒಳಗಿನ ತೀರ್ಮಾನ. ಹಿರಿಯರೆಲ್ಲ ಸೇರಿ ನಿಶ್ಚಯ ಮಾಡಿರುವಂಥದ್ದು. ಯಡಿಯೂರಪ್ಪ ಅವರು ಸಹ ಅವರೊಂದಿಗೆ ಅಲ್ಲೇ ಇದ್ದರು. ಪಕ್ಷದಲ್ಲಿ ಎಲ್ಲವೂ ನಾಲ್ಕು ಗೋಡೆಗಳ ಮಧ್ಯೆ ನಡೆಯುತ್ತದೆ. ಟಿಕೆಟ್ ಕೈ ತಪ್ಪಿರುವ ಸಂಬಂಧ ವಿಜಯೇಂದ್ರ ಅವರು ಮಾತನಾಡಿಲ್ಲ. ವಿಜಯೇಂದ್ರ ಅವರು ಪಕ್ಷದ ಹಿರಿಯ ಉಪಾಧ್ಯಕ್ಷರಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಅವರಿಗೆ ಅವಕಾಶ ಸಿಗಲಿದೆ ಎಂದರು.

ಶೇ.80 ರಷ್ಟು ಪುಸ್ತಕಗಳು ಪೂರೈಕೆ: ಈಗಾಗಲೇ ಶೇ.80ರಷ್ಟು ಪಠ್ಯ ಪುಸ್ತಕಗಳು ಪೂರೈಕೆಯಾಗಿವೆ. ಕಲಿಕಾ ಚೇತರಿಕೆ ಒಂದು ತಿಂಗಳ ಕಾರ್ಯಕ್ರಮವಿದೆ. ಮೊದಲ ಬಾರಿ ಶಿಕ್ಷಣ ಇಲಾಖೆಯಲ್ಲಿ ಇಷ್ಟು ಮುಂದಾಲೋಚನೆ ಮಾಡಲಾಗಿದೆ. ನಮ್ಮ ಆಲೋಚನೆಗೆ ಉಕ್ರೇನ್ ಯುದ್ಧ ಅಡಚಣೆಯಾಯಿತು. ಕಾಗದ ಸಿಗದ ಹಿನ್ನೆಲೆಯಲ್ಲಿ ಪುಸ್ತಕ ಪೂರೈಕೆ ನಿಧಾನವಾಗಿದೆ. ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರಿಗೆ ಉಪಕರಣಗಳನ್ನು ಪೂರೈಸಲಾಗಿದ್ದು, ಕಲಿಕಾ ಚೇತರಿಕೆ ಕಾರ್ಯಕ್ರಮ ಎಲ್ಲೆಡೆ ಆರಂಭವಾಗಿದೆ ಎಂದರು.

ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಗೊಂದಲ ಸೃಷ್ಟಿಸಿದೆ. ವೈಚಾರಿಕ ವಿಷಯಗಳ ಮೇಲೆ ವಾದ ಮಾಡಲು ವಿಫಲವಾಗಿರುವಾಗ ಕಾಂಗ್ರೆಸ್ ಮುಖಂಡರು, ಹತಾಶರಾಗಿ ಮಾತನಾಡುತ್ತಿದ್ದಾರೆ ಎಂದು ಆಪಾದಿಸಿದ ಸಚಿವರು, ಉತ್ತರಪ್ರದೇಶದ ಚುನಾವಣೆಯ ಫಲಿತಾಂಶದ ನಂತರ ಕಾಂಗ್ರೆಸ್ ನವರು ಇಡೀ ದೇಶದಲ್ಲಿ ಪಕ್ಷ ಎಲ್ಲಿ ಇಲ್ಲವಾಗಿ ಬಿಡುತ್ತದೆಯೋ ಎಂಬ ಭಯದಿಂದ ಸರ್ಕಾರದ ಮೇಲೆ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಮತ ಯಾಚನೆ: ಬಳಿಕ ಸಚಿವ ನಾಗೇಶ್ ಅವರು ಜೆಎಸ್‌ಎಸ್ ಕಾಲೇಜು ಸೇರಿದಂತೆ ಹಲವು ಕಡೆ ತೆರಳಿ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರ ಮತಯಾಚಿಸಿದರು.

ಈ ಸಂದರ್ಭದಲ್ಲಿ ಶಾಸಕ ಎನ್.ಮಹೇಶ್, ಜಿಪಂ ಮಾಜಿ ಅಧ್ಯಕ್ಷೆ ಜಿ.ನಾಗಶ್ರೀ ಪ್ರತಾಪ್, ಮುಖಂಡರಾದ ದತ್ತೇಶ್‌ಕುಮಾರ್ ಆಲೂರು ಮಲ್ಲು ಇತರರು ಉಪಸ್ಥಿತರಿದ್ದರು.

ಕೊಳ್ಳೇಗಾಲ ಪೊಲೀಸರ ಯಶಸ್ವಿ ಕಾರ್ಯಾಚರಣೆ

ಬೈಕ್ ಕಳ್ಳನ ಬಂಧನ; 7 ಬೈಕ್ ವಶ



ಬೈಕ್ ಕಳ್ಳನ ಬಂಧಿಸಿದ ಪೊಲೀಸ್ ತಂಡದ ಜೊತೆ ಎಎಸ್ಪಿ ಸುಂದರರಾಜು, ಡಿವೈಎಸ್ಪಿ ನಾಗರಾಜು.



ಪ್ರದೀಪ್‌ಕುಮಾರ್

ಕೊಳ್ಳೇಗಾಲ, ಮೇ 25(ನಾಗೇಂದ್ರ)– ಆನ್‌ಲೈನ್ ಮೋಜಿಗೆ ಬಿದ್ದು, ಬೈಕ್ ಕದ್ದು ಹಲವೆಡೆ ಮಾರಾಟ ಮಾಡಿದ್ದ ಆರೋಪಿಯೋರ್ವನನ್ನು ಬಂಧಿಸುವಲ್ಲಿ ಕೊಳ್ಳೇಗಾಲ ಪಟ್ಟಣ ಪೊಲೀಸರ ತಂಡ ಮಂಗಳವಾರ ರಾತ್ರಿ ಯಶಸ್ವಿಯಾಗಿದ್ದು, ಪ್ರಕರಣ ಭೇದಿಸಿದ ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನಗದು ಬಹುಮಾನ ನೀಡಿ ಗೌರವಿಸಲಾಗುವುದು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜು ತಿಳಿಸಿದ್ದಾರೆ. ಚಾ.ನಗರ ತಾಲೂಕಿನ ಕಲ್ಲಂಬಳ್ಳಿ ಗ್ರಾಮದ ಪ್ರದೀಪ್ ಕುಮಾರ್ ಬಂಧಿತ ಆರೋಪಿ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜು, ಸಿಕ್ಕಿಬಿದ್ದಿರುವ ಆರೋಪಿ ಆನ್‌ಲೈನ್ ರಮ್ಮಿಗೆ ದಾಸನಾಗಿದ್ದು, ಕಳ್ಳತನ ಚಟಕ್ಕೆ ಬಿದ್ದಿದ್ದ ಎಂದು ತಿಳಿಸಿದ್ದಾರೆ.

ಮೇ 24ರಂದು ಕೊಳ್ಳೇಗಾಲ ತಾಲೂಕಿನ ಚಲುವನಹಳ್ಳಿಯ ಸೋಮಶೇಖರ್ ಅವರು ಕೊಳ್ಳೇಗಾಲದ ಐಡಿಬಿಐ ವೃತ್ತದಲ್ಲಿ ನಿಲ್ಲಿಸಿದ್ದ ತಮ್ಮ ಬೈಕ್ ಕಳುವಾಗಿದೆ ಎಂದು ಪಟ್ಟಣ ಠಾಣೆಯಲ್ಲಿ ದೂರು ನೀಡಿದ್ದರು. ಇದಲ್ಲದೆ ಕೊಳ್ಳೇಗಾಲ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೈಕ್ ಕಳ್ಳತನ ಪ್ರಕರಣ ಹೆಚ್ಚಿದ ಹಿನ್ನೆಲೆಯಲ್ಲಿ ಈ ದೂರನ್ನು ಗಂಭೀರವಾಗಿ ಪರಿಗಣಿಸಿ ಅಂದೇ ಎಸ್ಪಿ ಡಾ.ಶಿವಕುಮಾರ್ ಸೂಚನೆ ಮೇರೆಗೆ ಡಿವೈಎಸ್ಪಿ ನಾಗರಾಜು ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಶಿವರಾಜ ಮುದೋಳ್ ಪಿಎಸ್‌ಐ ಚೇತನ್ ನೇತೃತ್ವದಲ್ಲಿ ಸಹಾಯಕ ಎಎಸ್‌ಐ ಮಾದೇಗೌಡ, ಮುಖ್ಯಪೇದೆಗಳಾದ ಶಂಕರ್, ರಘು, ಪ್ರತಾಪ್, ಶಿವಕುಮಾರ್, ಪ್ರಕಾಶ್, ರಾಜು, ಬಿಳಿಗೌಡ, ಯಶೋದಮ್ಮ ನೇತೃತ್ವದ ತಂಡ ರಚಿಸಲಾಗಿತ್ತು.

ತನಿಖಾ ತಂಡ ಅನುಮಾನದ ಮೇರೆಗೆ ಕಲ್ಲಂಬಳ್ಳಿ ಗ್ರಾಮ ಪ್ರದೀಪ್ ಕುಮಾರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಬೈಕ್ ಕಳವು ಮಾಡಿರುವುದನ್ನು ಪ್ರದೀಪ್ ಒಪ್ಪಿಕೊಂಡಿದ್ದಾನೆ.

ಈತ ಕಳ್ಳತನದಲ್ಲಿ ಕುಖ್ಯಾತವಾಗಿದ್ದು, ಕೊಳ್ಳೇಗಾಲ ಸರಹದ್ದಿನಲ್ಲಿ 3 ಬೈಕ್, ಚಾ.ನಗರ ಸರಹದ್ದಿನಲ್ಲಿ 2 ಹಾಗೂ ನಂಜನಗೂಡು ನಗರ ವ್ಯಾಪ್ತಿಯಲ್ಲಿ 2 ಬೈಕ್ ಕಳ್ಳತನ ಮಾಡಿದ್ದ.

ಆರೋಪಿಯನ್ನು ದಸ್ತಗಿರಿ ಮಾಡಿ ಟಿವಿಎಸ್ ವಿಕ್ಟರ್, ಹೀರೊ ಹೋಂಡಾ ಸ್ಪ್ಲೆಂಡರ್, ಯಮಹಾ ಬೈಕ್ ಸೇರಿದಂತೆ 3 ಲಕ್ಷ ಮೌಲ್ಯದ 7 ಬೈಕ್‌ಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಒಂದೇ ದಿನದಲ್ಲಿ ಪೊಲೀಸ್ ತಂಡ ಉತ್ತಮ ಕಾರ್ಯಾಚರಣೆ ನಡೆಸಿ ಪ್ರಕರಣ ಭೇದಿಸಿದೆ ಎಂದು ಸುಂದರರಾಜು ಪ್ರಶಂಸಿಸಿದ್ದಾರೆ.

ರಸ್ತೆ ಅಪಘಾತ; ಪತ್ನಿ ಸಾವು, ಪತಿಗೆ ಗಾಯ

ಬೇಗೂರು,ಮೇ 25–ನಾಯಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಸ್ಕೂಟರ್‌ನಿಂದ ಆಯತಪ್ಪಿ ಬಿದ್ದು, ಪತ್ನಿ ಸಾವನ್ನಪ್ಪಿದ್ದು, ಪತಿ ಗಾಯಗೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಗರಗನಹಳ್ಳಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದೆ.

ನಂಜನಗೂಡು ತಾಲೂಕಿನ ನಂದಗುಂದ ಗ್ರಾಮದ ನಿವಾಸಿ ನಾಗರಾಜು ಪತ್ನಿ ಅಲಮೇಲು(38) ಮೃತಪಟ್ಟವರು. ಮಂಗಳವಾರ ರಾತ್ರಿ ನಾಗರಾಜು ದಂಪತಿ ಗುಂಡ್ಲುಪೇಟೆಯಲ್ಲಿನ ಸಂಬಂಧಿಕರ ಮದುವೆ ಸಮಾರಂಭವೊಂದಕ್ಕೆ ತೆರಳಿದ್ದರು. ಬುಧವಾರ ಬೆಳಗ್ಗೆ ತಮ್ಮ ಸುಜಿಕಿ ಆಕ್ಸಿಸ್ ಸ್ಕೂಟರ್‌ನಲ್ಲಿ ಸ್ವಗ್ರಾಮಕ್ಕೆ ವಾಪಸ್ಸಾಗುತ್ತಿದ್ದರು.

ಬೇಗೂರು ಸಮೀಪದ ಗರಗನಹಳ್ಳಿ ಗೇಟ್ ಸಮೀಪ ಇವರ ಸ್ಕೂಟರ್‌ಗೆ ನಾಯಿ ಅಡ್ಡ ಬಂದಿದೆ. ಈ ವೇಳೆ ನಾಯಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ದಂಪತಿ ಆಯತಪ್ಪಿ ಸ್ಕೂಟರ್ ಸಮೇತ ರಸ್ತೆಗೆ ಬಿದ್ದಿದ್ದಾರೆ. ಹೆಲ್ಮೆಟ್ ಧರಿಸಿದ್ದರಿಂದ ನಾಗರಾಜು ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಹಿಂಬದಿ ಕುಳಿತಿದ್ದ ಇವರ ಪತ್ನಿ ಅಲುಮೇಲು ಹೆಲ್ಮೆಟ್ ಧರಿಸಿಲ್ಲದಿದ್ದರಿಂದ ರಸ್ತೆಗೆ ಬಿದ್ದ ವೇಳೆ ತಲೆಗೆ ಗಂಭೀರವಾಗಿ ಪೆಟ್ಟು ಬಿದ್ದಿದೆ. ತಕ್ಷಣ ಸ್ಥಳೀಯ ಸಹಕಾರದಿಂದ ಆಂಬುಲೆನ್ಸ್‌ನಲ್ಲಿ ಗಾಯಾಳುಗಳನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಯಿತು. ಗಂಭೀರವಾಗಿ ಗಾಯಗೊಂಡ ಅಲುಮೇಲು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ರಾತ್ರಿ ಕೊನೆಯುಸಿರೆಳೆದಿದ್ದಾರೆ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಮಾರುಕಟ್ಟೆ ದುರಸ್ತಿ ಕಳಪೆ ಕಾಮಗಾರಿ: ಆರೋಪ



ಸೋಮವಾರಪೇಟೆ, ಮೇ 25– ಹೈಟೆಕ್ ಮಾರುಕಟ್ಟೆ ದುರಸ್ತಿ ಕಾಮಗಾರಿಗೆ ಇಲ್ಲಿಯವರೆಗೆ ರೂ. 62 ಲಕ್ಷ ಖರ್ಚು ಮಾಡಲಾಗಿದೆ. ಆದರೂ, ಮಳೆಗಾಲದಲ್ಲಿ ಮಾರುಕಟ್ಟೆ ಹೊಂಡಮಯವಾಗುತ್ತದೆ ಎಂದು ಪಟ್ಟಣ ಪಂಚಾಯಿತಿ ಕೆಲ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು.

ಪಪಂ ಅಧ್ಯಕ್ಷ ಪಿ.ಕೆ. ಚಂದ್ರು ಅಧ್ಯಕ್ಷತೆಯಲ್ಲಿ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆಡಳಿತ ಪಕ್ಷದ ಕೆಲ ಸದಸ್ಯರು ಅಧಿಕಾರಿಗಳ ವಿರುದ್ಧ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಅಭಿಯಂತರರು ಯಾವ ರೀತಿ ಅಂದಾಜುಪಟ್ಟಿ ತಯಾರು ಮಾಡುತ್ತಿದ್ದಾರೆ. ಅಂದಾಜುಪಟ್ಟಿಗಿಂತ ಹೆಚ್ಚಿನ ಹಣ ಕಾಮಗಾರಿಗೆ ವಿನಿಯೋಗಿಸಲಾಗುತ್ತಿದೆ. ಮುಂದೆ ನಡೆಯುವ ದುರಸ್ತಿ ಕಾಮಗಾರಿ ಉಸ್ತುವಾರಿಯನ್ನು ಸ್ಥಳೀಯ ಶಾಸಕರೇ ನೋಡಿಕೊಳ್ಳಬೇಕು ಎಂದು ನಾಮಕರಣ ಸದಸ್ಯ ಎಸ್. ಮಹೇಶ್ ಹೇಳಿದರು.

ಪಂಚಾಯಿತಿ ಸಭೆಯಲ್ಲಿ ಕಾಮಗಾರಿಯ ಬಗ್ಗೆ ಚರ್ಚೆ ಮಾಡಿದರೆ, ಸಭೆಯಲ್ಲಿದ್ದವರೇ ಗುತ್ತಿಗೆದಾರರಿಗೆ ಮಾಹಿತಿ ರವಾನಿಸುತ್ತಾರೆ. ನಾವು ಹೊರಗೆ ಹೋದಾಗ ಕೆಲ ಗುತ್ತಿಗೆದಾರರು, ನಮ್ಮನ್ನು ಗುರಾಯಿಸಲು ಪ್ರಾರಂಭಿಸುತ್ತಾರೆ ಎಂದು ಮಹೇಶ್ ಅಸಮಾಧಾನ ವ್ಯಕ್ತಪಡಿಸಿದರು. ಇತ್ತೀಚೆಗೆ ಹೈಟೆಕ್ ಮಾರುಕಟ್ಟೆಯನ್ನು 5 ಲಕ್ಷ ರೂ. ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. ಕಾಮಗಾರಿ ನಡೆದು ಪ್ರಥಮ ಮಳೆಗೆ ಮಳೆ ನೀರು ಸಂಗ್ರಹವಾಗಿ ಸಾರ್ವಜನಿಕರಿಂದ ಟೀಕೆಗೆ ಗುರಿಯಾಗಬೇಕಿದೆ. ಕಾಮಗಾರಿ ಪೂರ್ಣಗೊಳ್ಳದೆ ಬಿಲ್ ನೀಡುತ್ತಿರುವುದರಿಂದ ಇಂತಹ ಸಮಸ್ಯೆಗಳು ಉದ್ಭವವಾಗುತ್ತಿವೆ ಎಂದು ಪಪಂ ಉಪಾಧ್ಯಕ್ಷ ಬಿ.ಸಂಜೀವ ಆರೋಪಿಸಿದರು.

ಕಾಮಗಾರಿ ಪೂರ್ಣಗೊಳ್ಳದೆ ಯಾವುದೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಬಾರದು. ಬಿಲ್ ಪಾವತಿಸಿದ ಪ್ರಕರಣಗಳು ಕಂಡು ಬಂದರೆ ಪಪಂ ಮುಖ್ಯಾಧಿಕಾರಿ ಹಾಗೂ ಇಂಜಿನಿಯರ್ ವಿರುದ್ಧ ಕಾನೂನು ಕ್ರಮಕ್ಕೆ ಶಿಫಾರಸು ಮಾಡಲಾಗುತ್ತದೆ. ಕಳಪೆ ಕಾಮಗಾರಿ ಮಾಡಿ ನಾನು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಗುತ್ತಿಗೆದಾರ ಎಂದು ಹೇಳಿಕೊಂಡರೂ ಬಿಡುವುದಿಲ್ಲ ಎಂದು ಶಾಸಕ ಅಪ್ಪಚ್ಚು ರಂಜನ್ ಎಚ್ಚರಿಸಿದರು.

ಈ ಬಾರಿಯಾದರೂ ಹೈಟೆಕ್ ಮಾರುಕಟ್ಟೆ ದುರಸ್ತಿ ಕೆಲಸ ಹಾಗೂ ಇನ್ನಿತರ ಕಾಮಗಾರಿಗಳು ಕಳಪೆಯಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಸದಸ್ಯ ಮೃತ್ಯುಂಜಯ ಹೇಳಿದರು.

ಪ್ರತಿವಾರ್ಡ್‌ಗೆ ಬೀದಿದೀಪ, ರಸ್ತೆ ಕಾಮಗಾರಿ ಹಾಗೂ ತಡೆಗೋಡೆ ನಿರ್ಮಿಸಲು ಅನುದಾನ ಕಲ್ಪಿಸಬೇಕೆಂದು ಶೀಲಾ ಡಿಸೋಜ, ಜಯಂತಿ ಶಿವಕುಮಾರ್, ಜೀವನ್, ನಾಗರತ್ನ, ಮೋಹಿನಿ, ಶುಭಕರ್ ಒತ್ತಾಯಿಸಿದರು.

ಮುಖ್ಯಾಧಿಕಾರಿ ಪಟ್ಟಚೆರವಂಡ ನಾಚಪ್ಪ, ಎಇಇ ಹೇಮಕುಮಾರ್, ಇಂಜಿನಿಯರ್ ವೆಂಕಟನಾಯಕ್, ಆರೋಗ್ಯ ನಿರೀಕ್ಷಕ ಜಾಸಿಂ ಖಾನ್ ಇತರರಿದ್ದರು.

ನಾಡಿನ ಗಡಿಯಲ್ಲಿ ಕನ್ನಡ ಭಾಷೆಗೆ ಪ್ರಥಮ ಪ್ರಾಶಸ್ತ್ಯ



ಮಡಿಕೇರಿ ಮೇ 25– ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಪ್ರಥಮ ಪ್ರಾಶಸ್ತ್ಯ. ಆ ನಿಟ್ಟಿನಲ್ಲಿ ನಾಡಿನ ಯಾವ ಗಡಿ ಪ್ರದೇಶದಲ್ಲಿಯೂ ಸಹ ಕನ್ನಡ ಮರೆಯುವ ಪರಿಸ್ಥಿತಿ ನಿರ್ಮಾಣ ಆಗಬಾರದು ಎಂದು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಹೇಳಿದ್ದಾರೆ.

ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗ ವತಿಯಿಂದ ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ನಡೆದ 'ಗಡಿ ಸಾಂಸ್ಕೃತಿಕ ಉತ್ಸವ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕನ್ನಡ ಭಾಷೆಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದ್ದು, ಕನ್ನಡ ಭಾಷೆಗೆ ತನ್ನದೇ ಆದ ಪಾರಂಪರಿಕ, ಸಾಂಸ್ಕೃತಿಕ ಮತ್ತು ಇತಿಹಾಸವಿದೆ. ಆ ನಿಟ್ಟಿನಲ್ಲಿ ಅನಾದಿ ಕಾಲದಿಂದಲೂ ಉಳಿಸಿಕೊಂಡು ಬಂದಿರುವ ಕನ್ನಡ ಭಾಷೆಯನ್ನು ಮತ್ತಷ್ಟು ಬೆಳೆಸಿಕೊಂಡು ಹೋಗಬೇಕು ಎಂದು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಪ್ರತಿಪಾದಿಸಿದರು.

ಜಿಲ್ಲೆಯ ಗಡಿ ಭಾಗವಾದ ಕುಟ್ಟ, ಮಾಕುಟ್ಟ, ಕರಿಕೆ ಮತ್ತಿತರ ಕಡೆಗಳಲ್ಲಿ ಕನ್ನಡ ಭಾಷಾ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು. ಕನ್ನಡ ಭಾಷಾ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಶಾಸಕರು ತಿಳಿಸಿದರು.

ಕರ್ನಾಟಕ ರಾಜ್ಯ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ಶಾಂತೆಯಂಡ ರವಿಕುಶಾಲಪ್ಪ ಮಾತನಾಡಿ, ಕನ್ನಡ ನಾಡಿನಲ್ಲಿ ವಾಸಿಸುವ ಎಲ್ಲರೂ ಕನ್ನಡಿಗರೇ. ಪ್ರತಿಯೊಬ್ಬರಿಗೂ ಅರ್ಥವಾಗುವ ಭಾಷೆ ಕನ್ನಡವಾಗಿದೆ. ಆದ್ದರಿಂದ ಕನ್ನಡ ಭಾಷೆಗೆ ಸರ್ಕಾರ ಹೆಚ್ಚಿನ ಪ್ರಾಧಾನ್ಯತೆ ನೀಡಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗ ದೊರೆಯಬೇಕು. ಪ್ರಾದೇಶಿಕ ಅಸಮಾನತೆ, ಗಡಿ ಸಮಸ್ಯೆಗಳನ್ನು ಸರಿಪಡಿಸಬೇಕು. ಕೊಡಗಿನ ಗಡಿ ಪ್ರದೇಶದಲ್ಲಿ ಕನ್ನಡ ಕಲಿಕೆಗೆ ಮತ್ತಷ್ಟು ಒತ್ತು ನೀಡಬೇಕು ಎಂದು ಸಲಹೆ ಮಾಡಿದರು.

ಜಿಲ್ಲೆಯ ಗಡಿ ತಾಲೂಕುಗಳಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ ಆಗಬೇಕು. ಕನ್ನಡ ನಾಮ ಫಲಕಗಳಿಗೆ ಪ್ರಥಮ ಆದ್ಯತೆ ನೀಡಬೇಕು ಎಂದು ಟಿ.ಪಿ.ರಮೇಶ್ ತಿಳಿಸಿದರು.

ಜಿಲ್ಲೆಯ ಪೊನ್ನಂಪೇಟೆ, ವಿರಾಜಪೇಟೆ ಮತ್ತು ಮಡಿಕೇರಿ ತಾಲೂಕಿನ ಕೇರಳ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ 19 ಗ್ರಾಪಂಗಳ ಅಭಿವೃದ್ಧಿಗೆ ಪೂರಕವಾಗಿ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಗಡಿಭಾಗದ ಜನರ ಜೀವನ ಸುಧಾರಣೆಗೆ ಶ್ರಮಿಸಬೇಕಿದೆ ಎಂದು ಟಿ.ಪಿ.ರಮೇಶ್ ಕರೆ ನೀಡಿದರು.

ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ ಮಾತನಾಡಿ, ಕನ್ನಡ ನಾಡಿನಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ಕನ್ನಡ ಮಾತೃಭಾಷೆಯಾಗಿದೆ. ಆದ್ದರಿಂದ ಮಕ್ಕಳಿಗೆ ಕಡ್ಡಾಯವಾಗಿ ಕನ್ನಡ ಭಾಷೆ ಕಲಿಸಬೇಕು. ಕನ್ನಡ ಭಾಷೆಯಲ್ಲಿ ಕವನ, ಪ್ರಬಂಧ ಸ್ಪರ್ಧೆ ಏರ್ಪಡಿಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವಂತಾಗಬೇಕು ಎಂದು ಸಲಹೆ ನೀಡಿದರು.

ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗದ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿದರು. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ್ ಹೊಳ್ಳ, ನಗರಸಭೆ ಉಪಾಧ್ಯಕ್ಷರಾದ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷರಾದ ಮನು ಶೆಣೈ, ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತಶಯನ, ಪೌರಾಯುಕ್ತ ರಾಮದಾಸ್ ಇತರರು ಇದ್ದರು.

ಮುನೀರ್ ಅಹ್ಮದ್ ಸ್ವಾಗತಿಸಿದರು. ಡಾ.ಸಿ.ಆರ್.ರಾಘವೇಂದ್ರ ತಂಡದವರು ನಾಡಗೀತೆ ಹಾಡಿದರು. ಕಡ್ಲೇರ ತುಳಸಿ ಮೋಹನ್ ಮತ್ತು ರೇವತಿ ರಮೇಶ್ ನಿರೂಪಿಸಿದರು. ಟಿ.ಜಿ.ಪ್ರೇಮ್ ಕುಮಾರ್ ವಂದಿಸಿದರು.

ವಿರಾಜಪೇಟೆಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ವಿರಾಜಪೇಟೆ, ಮೇ 25– ಗ್ರಾಮೀಣ ಭಾಗದ ಪ್ರತಿ ಮನೆಗೂ ಕುಡಿಯುವ ನೀರಿನ ಸೌಲಭ್ಯವನ್ನು ಕೇಂದ್ರ ಮತ್ತು ರಾಜ್ಯ ಸರಕಾರ ಒದಗಿಸಿರುವುದಾಗಿ ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ವಿರಾಜಪೇಟೆ ಸಮೀಪದ ಕದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೋಯಿ ಕೇರಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ 238 ನಿವಾಸಿಗಳಿಗೆ ಬೋರ್‌ವೆಲ್ ಮತ್ತು ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಬಳಿಕ ರೂ.30 ಲಕ್ಷ ಅನುದಾನದಲ್ಲಿ ನಿರ್ಮಾಣವಾದ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟನೆ ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾಲಂಗಾಲ ಗ್ರಾಮದ 199 ಕುಟುಂಬಗಳಿಗೆ ರೂ.71,28 ಲಕ್ಷ ಹಾಗೂ ಕೆದಮುಳ್ಳೂರು ಗ್ರಾಮದ 1094 ಮನೆಗೆ ಪೈಪ್‌ಲೈನ್ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಪ್ರತಿಯೊಂದು ಕುಟುಂಬಗಳು ಸರಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಂದರ್ಭ ಜಿಪಂ ಮಾಜಿ ಸದಸ್ಯ ಶಶಿಸುಬ್ರಮಣಿ, ಮಹೇಶ್ ಗಣಪತಿ, ಬಿಜೆಪಿಯ ಪ್ರಮುಖರಾದ ರಘು ನಾಣಯ್ಯ, ನೆಲ್ಲಿರ ಚಲನ್ ಕುಮಾರ್, ಲಾಲಾ ಭೀಮಯ್ಯ, ಅಂಜಪರವಂಡ ಅನಿಲ್, ಕುಂಬೆಯಂಡ ಗಣೇಶ್, ಮಧುದೇವಯ್ಯ, ರಾಜ ನಂಜಪ್ಪ, ಮನುಕುಮಾರ್, ಕದನೂರು ಪಿಡಿಓ ಮಂಜುಳಾ, ಗ್ರಾಮಸ್ಥರು ಉಪಸ್ಥಿತರಿದ್ದರು.

ಮೇ 29, ಒಕ್ಕಲಿಗರ ಸಂಘದ ಸದಸ್ಯರಿಗೆ ಕ್ರೀಡಾಕೂಟ

ವಿರಾಜಪೇಟೆ, ಮೇ 25– ಒಕ್ಕಲಿಗರ ಸಂಘದ ವತಿಯಿಂದ ಅಮ್ಮತ್ತಿ ಒಂಟಿಯಂಗಡಿ ಶಾಲಾ ಮೈದಾನದಲ್ಲಿ ಮೇ 29 ರಂದು ಸಂಘದ ಸದಸ್ಯರಿಗೆ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ ಎಂದು ಸಂಘದ ನಿರ್ದೇಶಕ ಕೆ.ಪಿ. ನಾಗರಾಜ್ ಹೇಳಿದರು.

ಒಕ್ಕಲಿಗರ ಸಂಘ ಪ್ರಾರಂಭಗೊಂಡು ಆರು ವರ್ಷಗಳಾಗಿದ್ದು ಈಗಾಗಲೇ 350 ಸದಸ್ಯರನ್ನು ಒಳಗೊಂಡಿದೆ. ಕ್ರೀಡಾಕೂಟಗಳನ್ನು ನಡೆಸುವುದರ ಮೂಲಕ ಜನಾಂಗದ ಒಗ್ಗೂಡಿಕೆ ಸಾಧ್ಯವಾಗುತ್ತದೆ. ಪುರುಷರು ಹಾಗೂ ಮಹಿಳೆಯರಿಗೆ ಹಗ್ಗಜಗ್ಗಾಟ, ಪುರುಷರಿಗೆ ನೂರು ಮೀಟರ್ ಓಟ, ಗೋಣಿಚೀಲ ಜಿಗಿತ, ಮಹಿಳೆಯರಿಗೆ ಸಂಗೀತ ಕುರ್ಚಿ ಹಾಗೂ ವಿಷದ ಚೆಂಡು ಸ್ಪರ್ಧೆ, ಬಾಲಕ ಬಾಲಕಿಯರಿಗೆ ಹಾಗು ಪುಟ್ಟ ಮಕ್ಕಳಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಮಕ್ಕಳಲ್ಲಿ ಜಾತ್ಯತೀತ ಮನೋಭಾವ ಬೆಳೆಸಲು ಪರ್ಯಾಯ ಮಾರ್ಗ ಬಳಸುತ್ತೇವೆ

ಹಿರಿಯ ಸಾಹಿತಿ ದೇವನೂರ ಮಹಾದೇವ

ಮೈಸೂರು, ಮೇ 25(ಪಿಎಂ)– ಪಠ್ಯ ಪುಸ್ತಕ ಪುನರ್ ಪರಿಷ್ಕರಣೆ ಸಮಿತಿ ಕಾರ್ಯವೈಖರಿ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿರುವ ಹಿರಿಯ ಸಾಹಿತಿ ದೇವನೂರ ಮಹಾದೇವ, ಅವರು ಎಲ್ಲಿ ತಪ್ಪು ಮಾಡಿದ್ದರೋ ಅದನ್ನು ಸರಿಪಡಿಸಲು ಹಾಗೂ ಕೊರತೆ ಪಾಠಗಳನ್ನು ತುಂಬಲು ಪರ್ಯಾಯವಾಗಿ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳುತ್ತೇವೆ. ಆ ಮೂಲಕ ನಮ್ಮ ಮಕ್ಕಳಲ್ಲಿ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಮನೋಭಾವ ಬೆಳೆಸುತ್ತೇವೆ ಎಂದು ತಿಳಿಸಿದರು.



ಪ್ರಾದೇಶಿಕ ಆಯುಕ್ತರ ಕಚೇರಿ ಆವರಣ ದಲ್ಲಿ ಬುಧವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಅವರು (ಪರಿಷ್ಕರಣೆ ಸಮಿತಿ/ಸರ್ಕಾರ) ಎಲ್ಲಿ ತಪ್ಪು ಮಾಡಿದ್ದರೋ ಅದನ್ನು ಸರಿಪಡಿಸಲು ಹಾಗೂ ಕೊರತೆ ಪಾಠಗಳನ್ನು ತುಂಬಲು ಪರ್ಯಾಯ ಮಾರ್ಗದಲ್ಲಿ ನಾವು ಮಕ್ಕಳ ತಲುಪುತ್ತೇನೆ ಎಂದರು.

5ನೇ ತರಗತಿಯಿಂದ ಎಸ್‌ಎಸ್‌ಎಲ್‌ಸಿ ವರೆಗೆ ಹಂತ ಹಂತವಾಗಿ ತಜ್ಞರಿಂದ ಪಾಠ ಮಾಡಿಸುತ್ತೇವೆ. ಅವುಗಳನ್ನು ಆನ್‌ಲೈನ್, ಸಾಮಾಜಿಕ ಜಾಲತಾಣಗಳಾದ ವಾಟ್ಸಪ್, ಫೇಸ್‌ಬುಕ್ ಮೊದಲಾದ ಮಾಧ್ಯಮಗಳ ಮೂಲಕ ಮಕ್ಕಳಿಗೆ ತಲುಪಿಸುತ್ತೇವೆ. ನಮ್ಮ ಮಕ್ಕಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಮಾಡುತ್ತೇವೆ. ನಮ್ಮ ಮಕ್ಕಳು ಪ್ರಶ್ನೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಮೂಢನಂಬಿಕೆಗೆ ಒಳಗಾಗದೇ ವೈಜ್ಞಾನಿಕ ಮನೋಭಾವ ಬೆಳೆಸಲು ನಾವು ದೊಡ್ಡ ಆಲೋಚನೆಯಲ್ಲಿದ್ದೇವೆ ಎಂದು ಹೇಳಿದರು.

ಮುಖ್ಯವಾಗಿ ಸಂವಿಧಾನ ಪೀಠಿಕೆಯನ್ನು ಹಾಡು ಕಟ್ಟಿ ಪ್ರಸಾರ ಮಾಡುತ್ತೇವೆ. ನಾಡಿನ ಆರೋಗ್ಯವಂತ ಮನಸ್ಸಿನವರ ಜೊತೆಗೆ ನಾವು ಈ ನಿಟ್ಟಿನಲ್ಲಿ ಮುನ್ನಡೆಯುತ್ತೇವೆ ಎಂದು ಹೇಳಿದರು. ಪಠ್ಯ ಪುಸ್ತಕ ಮಕ್ಕಳ ಕೈ ಸೇರಿದೆ. ಹಾಗಾಗಿ ಪರಿಷ್ಕೃತ ಪಠ್ಯದಿಂದ ತಮ್ಮ ಕಥನ ತೆಗೆಯಲು ಸಾಧ್ಯವಿಲ್ಲ ಎಂದಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಇದನ್ನು ಪಾಠ ಮಾಡಬೇಡಿ ಎಂದು ಸೂಚನೆ ನೀಡಲಿ ಎಂದರು.

ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆ

ನಿರುದ್ಯೋಗಿ ಪದವೀಧರರಿಗೆ ಮಾಸಿಕ 10 ಸಾವಿರ ಗೌರವಧನಕ್ಕೆ ಹೋರಾಟ; ನಾಮಪತ್ರ ಸಲ್ಲಿಸಿದ ವಾಟಾಳ್

ಮೈಸೂರು, ಮೇ 25(ಪಿಎಂ)– ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ ಕನಿಷ್ಠ 10 ಸಾವಿರ ರೂ. ಗೌರವಧನ ನೀಡಬೇಕು. ಮತದಾರರು ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್‌ಗೆ ನನ್ನ ಆಯ್ಕೆ ಮಾಡಿದರೆ ಇದಕ್ಕಾಗಿ ಹೋರಾಟ ಮಾಡುತ್ತೇನೆ. ಇದು ಮೂರು ತಿಂಗಳಲ್ಲಿ ಸಾಧ್ಯವಾಗದಿದ್ದರೆ, ರಾಜೀನಾಮೆ ಕೊಟ್ಟು ಹೊರಬರುತ್ತೇನೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹೇಳಿದರು.



ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಬುಧವಾರ ತಮ್ಮ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಾತಿ, ಹಣ ಮತ್ತು ಪಾರ್ಟಿ ಬಿಟ್ಟು ಪ್ರಾಮಾಣಿಕರನ್ನು ಪರಿಷತ್‌ಗೆ ಕಳುಹಿಸಲು ಮತದಾರರು ಮುಂದಾಗಬೇಕು. ಚುನಾವಣಾ ಭ್ರಷ್ಟಾಚಾರದ ವಿರುದ್ಧ ನನ್ನ ಹೋರಾಟವಿದ್ದು, ಹಣವಂತರಿಗೆ ಪರಿಷತ್ತು ಮೀಸಲಾಗಬಾರದು. ಹೀಗಾಗಿ ಕನ್ನಡಕ್ಕೆಂದು ನನಗೊಂದು ಓಟು ಕೊಡಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಸ್ಥಳೀಯ ಸಂಸ್ಥೆಗಳಿಂದ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ 80 ಓಟು ನನಗೆ ಬಂದಿದೆ. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಸೋತರೂ ಹೋರಾಟ, ಗೆದ್ದರೂ ಹೋರಾಟ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಪಠ್ಯ ಪುಸ್ತಕ ಪರಿಷ್ಕರಣೆ ವಿರುದ್ಧ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಸರ್ಕಾರ ಗಂಭೀರವಾಗಿ ಚಿಂತನೆ ಮಾಡದಿದ್ದರೆ ವಿದ್ಯಾರ್ಥಿಗಳ ಮೇಲೆ ಗದಾಪ್ರಹಾರ ಮಾಡಿದಂತೆ ಆಗಲಿದೆ. ಅವರ ಮನಸ್ಸು ಕಲುಷಿತ ಮಾಡಿದಂತೆ ಆಗಲಿದೆ. ಹೀಗೆ ಬಿಟ್ಟರೆ ಪಠ್ಯ ಪುಸ್ತಕಕ್ಕೆ 'ಆರ್‌ಎಸ್‌ಎಸ್' ಎಂದು ನಾಮಕರಣ ಮಾಡಲೂಬಹುದು ಎಂದು ಕಿಡಿಕಾರಿದರು.

ಇಂದು ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ವರ್ಧಂತ್ಯುತ್ಸವ; ಜನತೆಗೆ ಸ್ವಾಮೀಜಿಯವರ ಸಂದೇಶ

ಹಂಚಿಕೊಂಡು ಬಾಳುವುದರಲ್ಲಿ ಸುಖವಿದೆ



ಇಂದು (ಗುರುವಾರ) ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 80ನೇ ವರ್ಧಂತಿ ದಿನ. ಶ್ರೀಗಳು ಜಾತ್ಯತೀತ, ಸಾಮಾಜಿಕ ತತ್ತ್ವಾಧಾರಿತದಲ್ಲಿ ತಮ್ಮ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನ ದೃಷ್ಟಿ ಹರಿಸುತ್ತಾ ಬಂದಿದ್ದಾರೆ. ಜಗತ್ತಿನಲ್ಲಿರುವ ಅವರ ಎಲ್ಲ 98 ಆಶ್ರಮಗಳೂ ಸಾಮಾಜಿಕ ನ್ಯಾಯ ಎತ್ತಿ ಹಿಡಿಯುತ್ತಾ ಬಂದಿವೆ. ಶ್ರೀಗಳು ಕಳೆದೆರಡು ವರ್ಷಗಳಿಂದ ಕೊರೊನಾ ಕಾರಣದಿಂದ ತಮ್ಮ ವರ್ಧಂತಿಯನ್ನು ಸರಳವಾಗಿ ಆಶ್ರಮದಲ್ಲೇ ಆಚರಿಸಿಕೊಂಡಿದ್ದರು. ಈ ಬಾರಿ ಕೊರೊನಾ ಹಾವಳಿ ಕ್ಷೀಣಿಸಿರುವುದರಿಂದ ಸಾರ್ವಜನಿಕವಾಗಿ ಆಚರಿಸಿಕೊಳ್ಳುತ್ತಿದ್ದಾರೆ.

"ಬದುಕು ಎಂದರೆ ಸಂಕಷ್ಟಗಳ ಸರಮಾಲೆ. ಜನರು ಸಂಕಷ್ಟಗಳಿಗೆ ಎದೆಗುಂದದೆ ಬದುಕುವ ಛಲಗಾರಿಕೆಯನ್ನು ರೂಢಿಸಿಕೊಳ್ಳಬೇಕು. ಯಾರೂ ಹತಾಶೆಯಿಂದ ಕೈಚೆಲ್ಲಬಾರದು. ಕಷ್ಟ ಕಳೆದು ನೆಮ್ಮದಿ ಬದುಕು ಬಂದೇ ಬರುತ್ತದೆ. ಅದಕ್ಕಾಗಿ ತಾಳ್ಮೆಯಿಂದ ಕಾಯಬೇಕು. ಕಳೆದ ಎರಡು ವರ್ಷಗಳ ಕೊರೊನಾ ಹಾವಳಿಯಲ್ಲಿ ಮಾನವರ ಜೀವ ಮತ್ತು ಜೀವನ ಎರಡೂ ಹಾಳಾಗಿ ಹೋಗಿತ್ತು. ಮತ್ತೆ ಒಳ್ಳೆ ಕಾಲ ಬರುವುದೇ ಇಲ್ಲವೇನೋ ಎಂಬಷ್ಟು ಆತಂಕ ಸೃಷ್ಟಿಸಿತ್ತು. ಆದರೆ ಈಗ ಕೊರೊನಾ ಹಾವಳಿ ನಿಂತು, ಜನ ಮತ್ತೆ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ಹಳೆ ನೀರನ್ನು ಹೊಸ ನೀರು ಕೊಚ್ಚಿಕೊಂಡು ಹೋಗುವಂತೆ, ನಮ್ಮ ಹಿಂದಿನ ಕಷ್ಟಗಳು ನಮ್ಮ ಅಚಲವಾದ ಛಲದಿಂದ ಕಣ್ಮರೆಯಾಗಿ ನೆಮ್ಮದಿಯ ಬದುಕು ಸಾಕಾರವಾಗುತ್ತಿದೆ.

ನಮ್ಮ ಜೀವನದ ಸೋಲು–ಗೆಲುವು ವಿಧಿ ಲಿಖಿತದಲ್ಲಿಲ್ಲ. ಪ್ರತಿಕ್ಷಣ ನಾವು ಮಾಡುವ ಒಳ್ಳೆಯ ಕೆಲಸದಲ್ಲಿ ನಮ್ಮ ಯಶಸ್ಸು ಅಡಗಿರುತ್ತದೆ. ಮತ್ತೊಬ್ಬರಿಗೆ ಕೇಡು ಬಯಸುವುದರಲ್ಲಿ ನಮ್ಮ ಅವನತಿ ಇರುತ್ತದೆ. ಇಂದು ಸಮಾಜ ಎದುರಿಸುತ್ತಿರುವ ಬಹಳಷ್ಟು ಸಮಸ್ಯೆಗಳಿಗೆ ಮನುಷ್ಯರ ಸ್ವಾರ್ಥ ಮತ್ತು ಲೋಭತನವೇ ಕಾರಣವಾಗಿದೆ. ಜನರಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ–ಅನೀತಿಗಳು ದೇಶವನ್ನು ಹಾಳು ಮಾಡುತ್ತಿದೆ.

ನಾವೆಲ್ಲಾ ಒಂದೇ ಅನ್ನುವುದರಲ್ಲಿ ನೆಮ್ಮದಿ ಇದೆ. ಹಂಚಿಕೊಂಡು ಬಾಳುವುದರಲ್ಲಿ ಸುಖವಿದೆ. ತಾರತಮ್ಯದ ಅಂಚಿಡಿದು, ಹೊಡೆದಾಡುವುದರಲ್ಲಿ ಅಪಾಯವಿದೆ. ದೇಶವನ್ನು ಉತ್ತಮವಾಗಿ ರೂಪಿಸಬೇಕಾದರೆ, ಸಮಾಜದ ಸ್ಥಿತಿ–ಗತಿ ಸುಧಾರಿಸಬೇಕು. ಇದಕ್ಕಾಗಿ ಪ್ರತಿಯೊಬ್ಬರು ಸಮಾಜಕ್ಕೆ ಕಂಟಕವಾಗದ ರೀತಿ ಬದುಕಲು ಪ್ರಯತ್ನಿಸಬೇಕು. ಪರರ ಹಿತದಲ್ಲಿ ನಮ್ಮ ಹಿತವಿದೆ ಎಂದು ಭಾವಿಸುವ ಸದ್ಬುದ್ಧಿ ಜನರಲ್ಲಿ ಮೂಡಬೇಕು. ಚಂಡಮಾರುತ–ಭೂಕಂಪನ, ಅತಿವೃಷ್ಟಿ–ಅನಾವೃಷ್ಟಿಗಳೆಲ್ಲಾ ಪ್ರಕೃತಿಯ ವಿನೋದ ಲೀಲೆಗಳು. ನಮಗೆ ತೊಂದರೆಯಾಯಿತೆಂದು ಪ್ರಕೃತಿಯ ದೂಷಿಸಬಾರದು. ನಮ್ಮ ಅನುಕೂಲಕ್ಕೆ ತಕ್ಕಂತೆ ಭೂಮಿಯನ್ನು ಬಳಸುತ್ತೇವೋ, ಹಾಗೆಯೇ, ಪ್ರಕೃತಿ ತನ್ನ ಅಗತ್ಯಕ್ಕೆ ತಕ್ಕಂತೆ ವರ್ತಿಸುತ್ತದೆ. ಅದು ಕೆಟ್ಟದ್ದು ಅಂದುಕೊಳ್ಳುವುದು ತಪ್ಪು. ಪ್ರಕೃತಿ ಚಿತ್ತದಂತೆ ನಮ್ಮ ಬದುಕು ನಡೆಯುತ್ತಿದೆ ಅನ್ನೋ ಸತ್ಯ ಅರ್ಥ ಮಾಡಿಕೊಳ್ಳಬೇಕು.

ಬದುಕಬೇಕೆಂಬ ಛಲಗಾರನಿಗೆ ಬದುಕು ಒಲಿಯುತ್ತದೆ. ಛಲವಿಲ್ಲದವನಿಗೆ ಬದುಕು ಮುನಿಯುತ್ತದೆ. ಇದನ್ನು ಮನುಷ್ಯ ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತಾನೋ, ಅಷ್ಟು ಬೇಗ ಅವನ ಬದುಕು ಬೆಳಗುತ್ತದೆ. ಇದಕ್ಕಾಗೇ ಛಲಬೇಕು ಪ್ರತಿ ಮನುಷ್ಯನಿಗೆ ಅಂತ ನಮ್ಮ ಹಿರಿಯರು ಹೇಳುತ್ತಿದ್ದರು. ಛಲದ ಬಲ ಸರಿಯಾಗಿ ಅರ್ಥ ಮಾಡಿಕೊಂಡವರು ಬಹುಬೇಗ ಸಾಧನೆಯ ಹಾದಿ ತುಳಿಯುತ್ತಾರೆ. ಸಾಧನೆ ಹಾದಿಯಲ್ಲಿ ಎದುರಾಗುವ ಕಡು ಕಷ್ಟಗಳನ್ನು ಸಹಿಸಿ, ಯಶಸ್ಸಿನ ಶಿಖರ ಮುಟ್ಟುತ್ತಾರೆ.

ಆಧುನಿಕ ಕಾಲದ ಹೊಡೆತದಲ್ಲಿ ಮನುಷ್ಯನ ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಏರುಪೇರಾಗುತ್ತಿದೆ. ನಮ್ಮ ಸುಖಕ್ಕಾಗಿ ವಿಜ್ಞಾನ–ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ದುಷ್ಪರಿಣಾಮವನ್ನು ಎದುರಿಸುತ್ತಿದ್ದೇವೆ. ಪ್ರಕೃತಿ ಮೇಲೆ ನಾವು ಮಾಡುವ ದೌರ್ಜನ್ಯ ಬೂಮರಾಂಗ್‌ನಂತೆ ನಮ್ಮತ್ತಲೇ ಎರಗುತ್ತಿದೆ. ಪ್ರಕೃತಿ ಮತ್ತು ನಮ್ಮ ಜೀವ ಬೇರೆ ಬೇರೆಯಲ್ಲ. ಪ್ರಕೃತಿಯೊಂದಿಗೆ ನಮ್ಮ ಜೀವ ಬೆಸೆದುಕೊಂಡು ನಾವು ಬಾಳುತ್ತಿದ್ದೇವೆ. ಪ್ರಕೃತಿ ಮೇಲೆ ಆಗುವ ಕೆಟ್ಟ ಪರಿಣಾಮಗಳು, ನಮ್ಮ ಮೇಲೂ ಆಗುತ್ತದೆ. ಆದ್ದರಿಂದ ಪ್ರಕೃತಿಗೆ ಪೂರಕವಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಇಂದಿನ ಯುವಕರಲ್ಲಿ ಶ್ರಮಿಕತನ ಕಾಣೆಯಾಗುತ್ತಿದೆ. ಮನಸ್ಸು ಬಯಸಿದಂತೆ ತಕ್ಷಣ ಸುಖ ಕೈಗೆಟುಕಬೇಕೆಂಬ ಧಾವಂತದಲ್ಲಿದ್ದಾರೆ. ಪರಿಶ್ರಮದಿಂದ ಬದುಕು ಕಟ್ಟಿಕೊಳ್ಳಬೇಕೆಂಬ ವಿವೇಕ ಕಣ್ಮರೆಯಾಗುತ್ತಿದೆ. ಶ್ರಮವಿಲ್ಲದೆ ಸುಖ ಬಯಸುವ ಯುವ ಪೀಳಿಗೆಯ ವರ್ತನೆ ಬದಲಾಗದಿದ್ದರೆ ಭವಿಷ್ಯದ ದಿನಗಳು ಮಾರಕವಾಗುತ್ತವೆ. ಛಲ–ಬಲದಲ್ಲಿ ವಿಶ್ವಾಸ ಇಟ್ಟವರು ಮಾತ್ರ ಯಶಸ್ವಿ ಬದುಕನ್ನು ರೂಪಿಸಿಕೊಳ್ಳಬಲ್ಲರು. ಭೂಮಿ ಮೇಲೆ ಹುಟ್ಟಿದ ಪ್ರತಿಜೀವಿಯೂ ಕಷ್ಟಪಟ್ಟೇ ಬದುಕು ಕಟ್ಟಿಕೊಳ್ಳಬೇಕು. ಕಷ್ಟಪಟ್ಟರೆ ಸುಖ, ಸುಖವನ್ನಷ್ಟೆ ಅನುಭವಿಸಿದರೆ ಕಷ್ಟ. ಏಕೆಂದರೆ ಭಗವಂತ ಸುಖದ ಗೂಡಲ್ಲಿ ರೋಗದ ಮೊಟ್ಟೆ ಇಟ್ಟಿದ್ದಾನೆ. ಸುಖ ಬಯಸಿದಷ್ಟು ರೋಗದ ಮೊಟ್ಟೆಗಳು ಹೆಚ್ಚಾಗುತ್ತವೆ. ಹಾಗಂತ, ಜೀವಿಗಳೆಲ್ಲ ಕಷ್ಟ ಪಡಲಿ ಅಂತ ಭಗವಂತ ಭೂಮಿ ಸೃಷ್ಟಿಸಿಲ್ಲ. ಕಷ್ಟ–ಸುಖ ಸಮನಾಗಿ ಅನುಭವಿಸಿ, ಉತ್ತಮ ಜೀವನ ಸಾಗಿಸಲಿ ಅಂತ ಹಗಲು–ರಾತ್ರಿ ಸೃಷ್ಟಿಸಿದ್ದಾನೆ. ಸೂರ್ಯನ ಕಣ್ಗಾವಲಿನಲ್ಲಿ ಶ್ರಮಪಡುತ್ತಾ, ಚಂದ್ರನ ಅಂಗಳದಲ್ಲಿ ವಿಶ್ರಮಿಸುತ್ತಾ ಬದುಕಲು ಅನುಕೂಲ ಮಾಡಿಕೊಟ್ಟಿದ್ದಾನೆ. ಭಗವಂತನ ಈ ಕಾಲ ನಿಯಮಕ್ಕೆ ಯಾರೂ ಅತೀತರಲ್ಲ. ಎಲ್ಲಾ ಜೀವಿಗಳಂತೆ ಸೂರ್ಯನ ಶಾಖದಲ್ಲಿ ರೋಗಾಣು ಕರಗಿಸಿಕೊಂಡು, ಚಂದ್ರನ ತಂಪಲ್ಲಿ ಜೀವ ಶಕ್ತಿ ಪಡೆಯುವ ಸೃಷ್ಟಿ ನಿಯಮಕ್ಕೆ ಮಾನವ ಹೊಂದಿಕೊಳ್ಳಬೇಕು.

ನಮ್ಮ ಹುಟ್ಟು ಮತ್ತು ಸಾವು ನಮಗರಿವಿಲ್ಲದೆ ಆಗುವ ಸೃಷ್ಟಿಯ ಲೀಲೆ. ಭೂಮಿ ಎಂಬ ಮನೆಗೆ ಅತಿಥಿಯಾಗಿ ಬಂದಿದ್ದೇವೆ. ಇರುವಷ್ಟು ದಿನ ನೆಲೆ ಕೊಟ್ಟವರ ಮನೆ ಹಾಳು ಮಾಡದೆ, ಅನ್ನ ಇಕ್ಕಿದವಳ ಕೊರಳ ಹಿಸುಕದೆ, ನಮಗಿತ್ತ ಬದುಕನ್ನು ಸವಿಯುತ್ತಾ, ನೆಮ್ಮದಿಯಿಂದ ನಿರ್ಗಮಿಸಬೇಕು. ಇರುವಷ್ಟು ಕಾಲಾವಧಿಯಲ್ಲಿ ಪರರನ್ನು ಹಿಂಸಿಸುತ್ತಾ, ಹೀಯಾಳಿಸುತ್ತಾ ಕಾಲ ಕಳೆಯಬಾರದು. ಸಲ್ಲದ ವಿಷ ಬೀಜಗಳನ್ನು ಮನುಷ್ಯರ ಎದೆಯಲ್ಲಿ ಬಿತ್ತುವ ಕೆಲಸ ಮಾಡಲೇಬಾರದು. ಅದು ಪೀಳಿಗೆಯಿಂದ ಪೀಳಿಗೆಗೆ ವಿಷಬೀಜಗಳು ಎಲ್ಲರ ಎದೆಗೆ ಹರಡುತ್ತಲೇ ಇರುತ್ತದೆ. ಏಕೆಂದರೆ ಒಳ್ಳೆಯದಕ್ಕಿಂತ ಕೆಟ್ಟದ್ದಕ್ಕೆ ವೇಗ ಹೆಚ್ಚು. ಮನುಷ್ಯನ ಏಳ್ಗೆಯಲ್ಲಿ ಜ್ಞಾನದ ಪಾತ್ರ ಬಹಳ ದೊಡ್ಡದು. ಸುಜ್ಞಾನದಿಂದ ಮಾತ್ರ ಮನುಷ್ಯರ ಬದುಕು ಪಾವನವಾಗುತ್ತದೆ. ಸುಜ್ಞಾನ ಬೆಳೆಯಬೇಕಾದರೆ ಮನಸ್ಸು ಶುದ್ಧವಾಗಿರಬೇಕು. ಅಲ್ಲಿ ದ್ವೇಷ–ದುರಾಸೆಗಳೆಂಬ ಕಶ್ಮಲಗಳು ಸುಳಿಯಬಾರದು. ಮನಸ್ಸಿನೊಳಗಿನ ಕಶ್ಮಲಗಳನ್ನೆಲ್ಲ ತೊಳೆದು ಜ್ಞಾನ ಬೆಳಗಲೆಂದೇ ಧರ್ಮ–ಸಂಸ್ಕೃತಿಗಳು ಸ್ಥಾಪಿತಗೊಂಡಿವೆ. ಮನಸ್ಸನ್ನು ದುರ್ಬಲಗೊಳಿಸುವ ಕೆಟ್ಟ ವಿಚಾರಗಳು ಸುಳಿಯದಂತೆ ಎಚ್ಚರವಹಿಸಬೇಕು. ಇದಕ್ಕಾಗಿ ನಿತ್ಯಯೋಗ–ಧ್ಯಾನದಿಂದ ಮನಸ್ಸನ್ನು ಆರೋಗ್ಯಕರವಾಗಿಟ್ಟುಕೊಂಡು, ಸಂಕುಚಿತ ಬುದ್ಧಿಯಿಂದ ಹೊರಬರಬೇಕು.

ದೇಹಕ್ಕೆ ಪೌಷ್ಟಿಕ ಆಹಾರ ಹೇಗೆ ಅಗತ್ಯವೋ, ಹಾಗೇ ಆರೋಗ್ಯಕರ ಮನಸ್ಸಿಗೆ ಸಾತ್ವಿಕ ವಿಚಾರಧಾರೆಗಳು ಅವಶ್ಯ. ನಮ್ಮ ತತ್ವ ವಿಚಾರಗಳು ಸಮತೋಲಿತವಾಗಿರಬೇಕು. ಅದು ಎಡಕ್ಕಾಗಲಿ ಅಥವ ಬಲಕ್ಕಾಗಲಿ ಒಂದೇ ಕಡೆ ವಾಲಿಕೊಳ್ಳಬಾರದು. ನಮ್ಮ ದೇಹ ಒಂದೇ ಕಡೆ ವಾಲಿದರೆ ಹೇಗೆ ಕೆಡುಕಾಗುವುದೋ, ಅದೇ ರೀತಿ ನಮ್ಮ ತತ್ವ–ಸಿದ್ಧಾಂತಗಳು ಒಂದೇ ಕಡೆಗೆ ಜಾರಿದರೆ ಸಮಾಜದ ಸಮತೋಲನ ಹಾಳಾಗುತ್ತದೆ. ಸಮತೋಲಿತ ಆಹಾರ ಮತ್ತು ಸಮತೋಲಿತ ವಿಚಾರಗಳು ಆರೋಗ್ಯಕರ ಸಮಾಜಕ್ಕೆ ಅತ್ಯವಶ್ಯ. ನಮ್ಮ ಮುಂದಿರುವ ದೊಡ್ಡ ಸವಾಲೆಂದರೆ ಬಡತನ ಮತ್ತು ರೋಗರುಜಿನಗಳು. ಇದರ ನಿವಾರಣೆಗೆ ನಮ್ಮ ಬುದ್ಧಿ ಬಳಸಬೇಕೇ, ಹೊರತು ಕ್ಷುಲ್ಲಕ ವಿಚಾರಗಳಿಗಲ್ಲ. ನಮ್ಮ ಭೌತಿಕ ಶರೀರ ಮತ್ತು ಬೌದ್ಧಿಕ ಮನಸ್ಸಿಗೆ ಸಂಪರ್ಕ ಕೊಂಡಿಗಳಿವೆ. ಇವು ಬಲವಾಗಿ ಸರಪಣಿಯಂತೆ ಕೂಡಿಕೊಂಡು ನಮ್ಮ ಜೀವ ಮತ್ತು ಜೀವನವನ್ನು ಕಾಪಾಡುತ್ತಿವೆ. ಅದರಂತೆ ಸಮಾಜದಲ್ಲೂ ಮಾನವರ ನಡುವೆ ಸಂಬಂಧದ ಕೊಂಡಿಗಳಿವೆ. ಅವುಗಳನ್ನು ಉಳಿಸಿ–ಬೆಳೆಸಬೇಕು. ಅಂಥ ಸೌಹಾರ್ದ ಸಮಾಜದ ನಿರ್ಮಾಣಕ್ಕಾಗಿ ನಾವೆಲ್ಲರೂ ಶ್ರಮಿಸೋಣ.

"ಜೈ ಗುರುದತ್ತ"

ಶ್ರೀ ಮಹದೇಶ್ವಸ್ವಾಮಿ ಪ್ರೌಢಶಾಲೆಗೆ ಶೇ.95 ಫಲಿತಾಂಶ



ಹೇಚ್.ಎಂ.ಸ್ನೇಹ

ಮೈಸೂರು, ಮೇ 25– ಮೈಸೂರು ತಾಲೂಕಿನ ಸಿಂಧುವಳ್ಳಿ ಗ್ರಾಮದ ಶ್ರೀ ಮಹದೇಶ್ವಸ್ವಾಮಿ ಅನುದಾನಿತ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿನಿ ಹೆಚ್.ಎಂ.ಸ್ನೇಹ 561, ಆರ್. ದೀಪಿಕಾ 519, ಎಂ.ಶೋಭಾ 517, ಟಿ.ಎನ್. ವರುಣ್‌ಕುಮಾರ್ 510, ಅಮೃತಾ 505 ಅಂಕ ಗಳಿಸಿದ್ದಾರೆ.

ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು, ಮೇ 25– ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಶ್ರೀ ಗುರು ರಾಘವೇಂದ್ರ ಕಂಪ್ಯೂಟರ್ ಸೆಂಟರ್‌ನಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಉಚಿತವಾಗಿ ಕಂಪ್ಯೂಟರ್ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶ್ರೀ ಗುರುರಾಘವೇಂದ್ರ ಕಂಪ್ಯೂಟರ್, ಮಂಡಿಮೊಹಲ್ಲಾ, ಮೈಸೂರು ಕಚೇರಿಯನ್ನು ಅಥವಾ ಮೊ.ಸಂ. 7760240575 ಅನ್ನು ಸಂಪರ್ಕಿಸಬಹುದು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಕಿರ್ಲೋಸ್ಕರ್ ಕಾರ್ಮಿಕರ ಪ್ರತಿಭಟನೆ



ಮೈಸೂರು, ಮೇ 25(ಎಂಕೆ)– ವೇತನ ಪರಿಷ್ಕರಣೆ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕಿರ್ಲೋಸ್ಕರ್ ಎಂಪ್ಲಾಯಿಸ್ ಯೂನಿಯನ್ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಹುಣಸೂರು ಮುಖ್ಯರಸ್ತೆ(ಬೆಳವಾಡಿ ಸಮೀಪ)ಯಲ್ಲಿರುವ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂ.ಲಿ ಎದುರು ಜಮಾವಣೆಗೊಂಡ ಕಾರ್ಮಿಕರು ವೇತನ ಪರಿಷ್ಕರಣೆ ಸೇರಿದಂತೆ ಹಲವು ಸಮಸ್ಯೆಗಳಿಂದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾರ್ಖಾನೆ ಮಾಲೀಕರು ಕೂಡಲೇ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಕಾರ್ಖಾನೆ ಮಾಲೀಕರು ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಪ್ರತಿನಿತ್ಯ ಪ್ರತಿಭಟನೆ ನಡೆಸುತ್ತೇವೆ ಎಂದು ಕಿರ್ಲೋಸ್ಕರ್ ಎಂಪ್ಲಾಯಿಸ್ ಯೂನಿಯನ್ ಕಾರ್ಯದರ್ಶಿ ನವೀನ್ ಕುಮಾರ್ ತಿಳಿಸಿದರು.

ಅಧ್ಯಕ್ಷ ಮಧುಸೂದನ್ ಸೇರಿದಂತೆ 30ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಿಮಾ ಕಂಪನಿಗಳ ಖಾಸಗೀಕರಣ ವಿರೋಧಿಸಿ ವಿಮಾ ನೌಕರರ ಪ್ರತಿಭಟನೆ



ಮೈಸೂರು, ಮೇ 25(ಎಂಕೆ)– ವೇತನ ಪರಿಷ್ಕರಣೆ ಹಾಗೂ ವಿಮಾ ಕಂಪನಿಗಳ ಖಾಸಗೀಕರಣ ವಿರೋಧಿಸಿ ಸಾರ್ವಜನಿಕ ವಲಯ ಸಾಮಾನ್ಯ ವಿಮಾ ನೌಕರರ ಮತ್ತು ಅಧಿಕಾರಿಗಳ ಜಂಟಿ ಕ್ರಿಯಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಬಲ್ಲಾಳ ವೃತ್ತದ ಸಮೀಪದಲ್ಲಿರುವ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಲಿ. ವಿಭಾಗೀಯ ಕಚೇರಿ–1ರ ಎದುರು ಜಮಾಯಿಸಿದ ವಿಮಾ ನೌಕರರು 2017ರಿಂದಲೂ ನಮಗೆ ವೇತನ ಪರಿಷ್ಕರಣೆ ಆಗಿಲ್ಲ. ಕೌಟುಂಬಿಕ ಪಿಂಚಣಿಯನ್ನು ಶೇ.30ಕ್ಕೆ ಏರಿಕೆ ಮಾಡಬೇಕು, ವಿಮಾ ಕಂಪನಿಗಳನ್ನು ಖಾಸಗೀಕರಣ ಮಾಡುವ ಬದಲು ವಿಲೀನಗೊಳಿಸಬೇಕು ಎಂದು ಒತ್ತಾಯಿಸಿದರು.

ಸಾರ್ವಜನಿಕ ವಲಯ ಸಾಮಾನ್ಯ ವಿಮಾ ರಾಷ್ಟ್ರೀಕರಣ ಕಾಯ್ದೆ 2021 ಅನ್ನು ಹಿಂಪಡೆಯಬೇಕು. ಖಾಸಗೀಕರಣ ಮಾಡದೆ 4 ಸಾರ್ವಜನಿಕ ವಲಯ ಸಾಮಾನ್ಯ ವಿಮಾ ಸಂಸ್ಥೆಗಳಾದ ದ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ, ಓರಿಯಂಟಲ್ ಇನ್ಶೂರೆನ್ಸ್ ಕಂ, ನ್ಯಾಶನಲ್ ಇನ್ಶೂರೆನ್ಸ್ ಕಂಪನಿಗಳನ್ನು ವಿಲೀನಗೊಳಿಸಬೇಕು ಎಂದರು.

ಜಂಟಿ ಕ್ರಿಯಾ ಸಮಿತಿ ಸಂಚಾಲಕ ಎಸ್.ಬಿ.ಬಲರಾವ್, ಮಹೇಶ್, ಶಿವಕುಮಾರ್, ಗುರುಪ್ರಕಾಶ್, ಸೋಮಣ್ಣ, ರವಿಕುಮಾರ್ ಮತ್ತಿತರರಿದ್ದರು.

ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 25 – ಮೈಸೂರಿನ ದಟ್ಟಗಳ್ಳಿಯ 3ನೇ ಮುಖ್ಯ ರಸ್ತೆಯಲ್ಲಿರುವ ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೇ 27ರಂದು 'ಉಚಿತ ಆರೋಗ್ಯ ತಪಾಸಣಾ ಶಿಬಿರ'ವನ್ನು ಏರ್ಪಡಿಸಲಾಗಿದೆ.

ಅಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ತಪಾಸಣಾ ಶಿಬಿರ ನಡೆಯಲಿದ್ದು, ತಜ್ಞ ವೈದ್ಯರು ರೋಗಿಗಳೊಂದಿಗೆ ಉಚಿತ ಸಮಾಲೋಚನೆ ನಡೆಸಲಿದ್ದಾರೆ. ಲ್ಯಾಬ್ ಮತ್ತು ರೇಡಿಯಾಲಜಿ ಸೇವೆಗಳ ಮೇಲೆ ಶೇ.20 ರಷ್ಟು ರಿಯಾಯಿತಿ(ಸೂಚಿಸಿದ್ದಲ್ಲಿ ಮಾತ್ರ) ಇರಲಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ನಂ. 9513310100/8762850960 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಗೀತಪ್ರಿಯರ ಮನತಣಿಸಿದ ವಿದುಷಿ ಕೌಶಿಕಿ ಚಕ್ರವರ್ತಿ ಗಾಯನ



ಮೈಸೂರು, ಮೇ 25(ಎಂಕೆ)– ಸುಂದರ ಮುಸ್ಸಂಜೆಯಲಿ ವಿದುಷಿ ಕೌಶಿಕಿ ಚಕ್ರವರ್ತಿ ಅವರ ಹಿಂದೂಸ್ಥಾನಿ ಗಾಯನ ಅಪಾರ ಸಂಗೀತ ಪ್ರಿಯರ ಮನತಣಿಸಿತು.

ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ ಅಂಗವಾಗಿ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬುಧವಾರ ವಿದುಷಿ ಕೌಶಿಕಿ ಚಕ್ರವರ್ತಿ ಅವರು ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ತಮ್ಮ ಸುಮಧುರ ಕಂಠದಿಂದ ಹತ್ತಾರು ಹಾಡುಗಳನ್ನು ಇಂಪಾಗಿ ಹಾಡಿದ ಅವರು ಸಂಗೀತ ಅಭಿಮಾನಿಗಳ ಮನಗೆದ್ದರು. ಹಾರ್ಮೋನಿಯಂ ವಾದನದಲ್ಲಿ ವಿದ್ವಾನ್ ತನ್ಮಯ್ ಡಿಯೋಚಕ್ಕೆ, ಕೊಳಲು ವಾದನದಲ್ಲಿ ವಿದ್ವಾನ್ ಎಸ್ ಆಕಾಶ್, ತಬಲದಲ್ಲಿ ವಿದ್ವಾನ್ ಸಂದೀಪ್ ಘೋಷ್, ಸಾರಂಗಿಯಲ್ಲಿ ಮುರಾದ್ ಅಲಿ, ತಾಳವಾದ್ಯದಲ್ಲಿ ಸೂರ್ಯಕಾಂತ್, ಮಹಿಮಾ ಉಪಧ್ಯಾಯ ಉತ್ತಮ ಸಹಕಾರ ನೀಡಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸೇರಿದಂತೆ ಗಣ್ಯರು, ಸಾವಿರಾರು ಮಂದಿ ಭಕ್ತರು ಭಾಗವಹಿಸಿದ್ದರು.

ಬೆಟ್ಟದಬೀಡು ಸಿ.ಎನ್.ಎಂ. ಪಬ್ಲಿಕ್ ಶಾಲೆಗೆ ಶೇ.100 ಫಲಿತಾಂಶ



ಮೈಸೂರು,ಮೇ 25– ಮೈಸೂರು ತಾಲೂಕು, ಜಯಪುರ ಹೋಬಳಿ, ಬೆಟ್ಟದ ಬೀಡು ಬಳಿ ಇರುವ ಸಿ.ಎನ್.ಎಂ. ಪಬ್ಲಿಕ್ ಶಾಲೆಗೆ 2021–22ನೇ ಸಾಲಿನ ಎಸ್.ಎಸ್.ಎಲ್.ಸಿಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದ್ದು, ಪರೀಕ್ಷೆಗೆ ಹಾಜರಾಗಿದ್ದ 17 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಮೂವರು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 14 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷರಾದ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕಾರ್ಯದರ್ಶಿ ಭರತ್ ಮಂಜೇಗೌಡ, ಖಜಾಂಚಿ ಎಂ. ಭಾರ್ಗವಿ, ಮುಖ್ಯ ಶಿಕ್ಷಕಿ ಸತ್ಯಶೀಲಾ, ಪ್ರಾಂಶುಪಾಲ ಬಸವನಗೌಡ, ನಿರ್ದೇಶಕ ನಂದರಾಜು ಅಭಿನಂದಿಸಿದ್ದಾರೆ.

ನಿವೇಶನ ನೀಡುವುದಾಗಿ 3 ಲಕ್ಷ ಪಡೆದು ವಂಚನೆ

ಮೈಸೂರು, ಮೇ 25– ನಿವೇಶನ ಕೊಡುವುದಾಗಿ 3 ಲಕ್ಷ ರೂ. ಪಡೆದು ವಂಚನೆ ಮಾಡಿರುವ ಬಗ್ಗೆ ಮೈಸೂರಿನ ಎನ್‌ಆರ್ ಮೊಹಲ್ಲಾದಲ್ಲಿರುವ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಕಂಪನಿಯ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ಶ್ರೀರಾಂಪುರ 2ನೇ ಹಂತದ ನಿವಾಸಿ, ಇಂಜಿನಿಯರ್ ಜಿ.ಮೋಹಿತ ಹಣ ಕಳೆದುಕೊಂಡವರಾಗಿದ್ದು, ಇವರು 2019ರ ಮೊದಲ ವಾರದಲ್ಲಿ ಎನ್‌ಆರ್ ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ಶ್ರೀ ಸಾಯಿ ಗುರುರಾಘವೇಂದ್ರ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಕಚೇರಿಗೆ ತೆರಳಿ, ತಮಗೆ ನಿವೇಶನ ಬೇಕೆಂದು ಹೇಳಿದಾಗ, ಕಚೇರಿಯಲ್ಲಿದ್ದ ಮಂಜುನಾಥ್ ಮತ್ತು ಮಹೇಶ್ ಎಂಬುವರು ಹಳೇ ಕೆಸರೆ ಗ್ರಾಮದ ಸರ್ವೆ ನಂ. 32, 33 ಮತ್ತು 34ರ ಜಮೀನಿನ ಮಾಲೀಕರಿಗೆ ಹಣ ನೀಡಿ, ಸದರಿ ಜಮೀನಿನಲ್ಲಿ ನಿವೇಶನಗಳನ್ನು ರಚಿಸಲು ಒಪ್ಪಂದ ಮಾಡಿಕೊಂಡಿದ್ದು, ಆ ಜಾಗದಲ್ಲಿ ದೀಪಾ ಎನ್‌ಕ್ಲೇವ್ ಎಂಬ ಹೆಸರಿನಲ್ಲಿ ಬಡಾವಣೆ ನಿರ್ಮಿಸಲಿರುವು ದಾಗಿ ತಿಳಿಸಿ, ಆ ಜಮೀನಿಗೆ ಮೋಹಿತ ಅವರನ್ನು ಕರೆದುಕೊಂಡು ಹೋಗಿ ತೋರಿಸಿ ದ್ದಾರೆ. ಜಮೀನಿನಲ್ಲಿ ದೀಪಾ ಎನ್‌ಕ್ಲೇವ್ ಎಂಬ ಬೋರ್ಡ್ ಅನ್ನು ಕೂಡ ಅಳವಡಿಸ ಲಾಗಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ. ನಿವೇಶನಕ್ಕಾಗಿ ಮಂಜುನಾಥ ಮತ್ತು ಮಹೇಶ್ ಅವರೊಂದಿಗೆ ತಾವು 2019ರ ಮಾರ್ಚ್ 8ರಂದು ಎಂಓಯು ಮಾಡಿ ಕೊಂಡು 2 ಕಂತುಗಳಲ್ಲಿ 3 ಲಕ್ಷ ರೂ. ನೀಡಿದ್ದು, ಈವರೆಗೂ ಅವರು ತಮಗೆ ನಿವೇಶನ ನೀಡಿಲ್ಲ. ಅವರು ತೋರಿಸಿದ್ದ ಜಮೀನಿನಲ್ಲಿ ಬಡಾವಣೆ ನಿರ್ಮಾಣಕ್ಕೆ ಸಂಬಂಧಿ ಸಿದಂತೆ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯವೂ ಕೂಡ ನಡೆದಿಲ್ಲ. ತಮ್ಮ ಹಣ ಹಿಂತಿರುಗಿಸುವಂತೆ ಕೇಳಿದಾಗ ಅವರು ನೀಡಿದ ಚೆಕ್ ಕೂಡ ಬೌನ್ಸ್ ಆಗಿದೆ ಎಂದು ಮೋಹಿತ ನೀಡಿದ ದೂರಿನನ್ವಯ ಎನ್‌ಆರ್ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 34, 406, 420ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೂರನೇ ಪುಟದಿಂದ

ಅಭ್ಯರ್ಥಿಗಳ ಪಟ್ಟಿ ಇಂದು ಫೈನಲ್

ಅದು ಕೈಗೂಡುವುದಾದರೆ ಮಾತ್ರ ಪಕ್ಷವು ಅಭ್ಯರ್ಥಿಯನ್ನು ಕಣಕ್ಕಿಳಿಸಲಿದೆ. ಇಲ್ಲದಿ ದ್ದರೆ ಪ್ರತಿಪಕ್ಷಗಳ ಹೆಚ್ಚುವರಿ ಮತ ಕೀಳಬಲ್ಲ ತಟಸ್ಥ ಅಭ್ಯರ್ಥಿಯೊಬ್ಬರನ್ನು ಮುಂದೆ ಬಿಟ್ಟು ಗೆಲ್ಲಿಸುವ ತಂತ್ರಗಾರಿಯೂ ಬಿಜೆಪಿಯದ್ದಾಗಿದೆ. ಈ ನಡುವೆ ವಿಧಾನಪರಿಷತ್ ಟಿಕೆಟ್ ವಂಚಿತರಿಗೆ ಅವಕಾಶ ನೀಡುವುದೋ ಅಥವಾ ಪಕ್ಷ ನಿಷ್ಠ ಅಚ್ಚರಿಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೋ ಎನ್ನುವ ಬಗ್ಗೆ ವರಿಷ್ಠರು ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಪರಿಷತ್ ಅಭ್ಯರ್ಥಿಗಳ ಆಯ್ಕೆಯಲ್ಲಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕೈ ಮೇಲಾಗಿದ್ದು, ಇದರಲ್ಲೂ ಅವರದ್ದೇ ಮಾತು ನಡೆಯುತ್ತಾ ಅನ್ನೋದು ನೋಡಬೇಕಿದೆ. ಈಗಾಗಲೇ ಮಗನಿಗೆ ಟಿಕೆಟ್ ತಪ್ಪಿದ ಹಿನ್ನೆಲೆಯಲ್ಲಿ ಬೇಸರಗೊಂಡಿರುವ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಸಮಾಧಾನ ಮಾಡುವ ಪ್ರಯತ್ನ ಏನಾದ್ರೂ ಆಗುತ್ತಾ ಅನ್ನುವುದನ್ನು ಕಾದು ನೋಡಬೇಕು. ಜೂನ್ 10 ರಂದು ನಡೆಯುವ ಚುನಾವಣೆಗೆ ನಿನ್ನೆಯೇ ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಸಲು ಮೇ 31 ಕೊನೆಯ ದಿನ. ಸೋಮವಾರ ದೊಳಗೆ ಬಿಜೆಪಿ ತನ್ನ ಅಧಿಕೃತ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಬೇಕಿದೆ.

ದೇವೇಗೌಡರೊಂದಿಗೆ ಇಂದು ಮಾತುಕತೆ

ಮುಖಂಡರು, ಮುಖ್ಯಮಂತ್ರಿಗಳು ಹಾಗೂ ನಾಯಕರನ್ನು ಈಗಾಗಲೇ ಸಂಪರ್ಕಿಸಿ ಮಾತುಕತೆ ಮುಗಿಸಿದ್ದಾರೆ. ಪ್ರಾದೇಶಿಕ ಪಕ್ಷಗಳ ಒಗ್ಗೂಡುವಿಕೆ ಅಂತಿಮ ಸ್ವರೂಪ ನೀಡಲು ಹೆಚ್.ಡಿ.ದೇವೇಗೌಡರ ಸಹಕಾರ ಕೋರುತ್ತಿದ್ದಾರೆ. ಕರ್ನಾಟಕದಲ್ಲಿ ನಡೆದ ಕಳೆದ ವಿಧಾನ ಸಭಾ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಅಧಿಕಾರಕ್ಕೆ ತರಲು ಗೌಡರಿಗೆ ಚಂದ್ರಶೇಖರ್ ರಾವ್ ಬೆಂಬಲ ಸೂಚಿಸಿದ್ದರು. ರಾಜ್ಯ ವಿಧಾನಸಭಾ ಚುನಾವಣೆಗೆ ಒಂದು ವರ್ಷ ಬಾಕಿ ಇರುವ ಬೆನ್ನಲ್ಲೇ ಮತ್ತೆ ರಾವ್ ಪ್ರಾದೇಶಿಕ ಪಕ್ಷಗಳ ಒಗ್ಗೂಡಿಸುವಿಕೆ ಜತೆಗೆ ಜೆಡಿಎಸ್ ಬೆಂಬಲಿಸಲು ಮುಂದಾಗಿದ್ದಾರೆ. ಮಾತುಕತೆ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಎಚ್. ಡಿ.ಕುಮಾರಸ್ವಾಮಿ ಉಪಸ್ಥಿತರಿರುತ್ತಾರೆ.

ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ

ಮೇ 19ರಂದು ಯಾಸಿನ್ ಮಲಿಕ್ ತಪ್ಪಿತಸ್ಥ ಎಂದು ತೀರ್ಪು ನೀಡಿತ್ತು. ಆದರೆ ಶಿಕ್ಷೆಯ ಪ್ರಮಾಣವನ್ನು ಇಂದಿಗೆ ಕಾಯ್ದಿರಿಸಿತ್ತು. ಇಂದು ತೀರ್ಪು ಪ್ರಕಟಿಸಿದ ಕೋರ್ಟ್ ಉಗ್ರರಿಗೆ ಆರ್ಥಿಕ ನೆರವು ನೀಡಿದ ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ ಹಾಗೂ 10 ಲಕ್ಷ ರೂಪಾಯಿ ದಂಡ ವಿಧಿಸಿದೆ. ಇದಕ್ಕು ಮುನ್ನ ಯಾಸಿನ್ ಮಲಿಕ್‌ಗೆ ಮರಣದಂಡನೆ ವಿಧಿಸುವಂತೆ ರಾಷ್ಟ್ರೀಯ ತನಿಖಾ ಆಯೋಗ(NIA) ನ್ಯಾಯಾಲಯಕ್ಕೆ ಮನವಿ ಮಾಡಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ನ್ಯಾಯಾಲಯ ನೇಮಿಸಿದ ಅಮಿಕಸ್ ಕ್ಯೂರಿ, ಕನಿಷ್ಠ ಶಿಕ್ಷೆಯಾದ ಜೀವಾವಧಿ ಶಿಕ್ಷೆಯನ್ನು ನೀಡುವಂತೆ ಕೋರಿದರು.

ಈ ಮಧ್ಯೆ, ಶಿಕ್ಷೆಯ ಪ್ರಮಾಣವನ್ನು ನಿರ್ಧರಿಸಲು ನ್ಯಾಯಾಲಯಕ್ಕೆ ಬಿಡುತ್ತಿದ್ದೇನೆ ಎಂದು ಮಲಿಕ್ ನ್ಯಾಯಾಧೀಶರಿಗೆ ತಿಳಿಸಿದರು. ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಾಲಯ ಅಂತಿಮವಾಗಿ ಜೀವಾವಧಿ ಶಿಕ್ಷೆ ನೀಡಿದೆ. ಬುರ್ಹಾನ್ ವಾನಿ ಎನ್‌ಕೌಂಟರ್ ಆದ 30 ನಿಮಿಷಗಳಲ್ಲಿ ನನ್ನನ್ನು ಬಂಧಿಸಲಾಯಿತು. ಅಟಲ್ ಬಿಹಾರಿ ವಾಜಪೇಯಿ ಅವರು ನನಗೆ ಪಾಸ್‌ಪೋರ್ಟ್ ಮಂಜೂರು ಮಾಡಿದರು ಮತ್ತು ನಾನು ಕ್ರಿಮಿನಲ್ ಅಲ್ಲದ ಕಾರಣ ಹೇಳಿಕೆ ನೀಡಲು ಭಾರತ ನನಗೆ ಅವಕಾಶ ಮಾಡಿಕೊಟ್ಟಿತು ಎಂದು ಯಾಸಿನ್ ಮಲಿಕ್ ನ್ಯಾಯಾಲಯದಲ್ಲಿ ಹೇಳಿದರು.

1994 ರಲ್ಲಿ ಶಸ್ತ್ರಾಸ್ತ್ರ ತ್ಯಜಿಸಿದಾಗಿನಿಂದ ತಾನು ಮಹಾತ್ಮ ಗಾಂಧಿಯವರ ತತ್ವಗಳನ್ನು ಅನುಸರಿಸುತ್ತಿದ್ದೇನೆ. ಅಂದಿನಿಂದ ನಾನು ಕಾಶ್ಮೀರದಲ್ಲಿ ಅಹಿಂಸಾತ್ಮಕ ರಾಜಕೀಯವನ್ನು ಮಾಡುತ್ತಿದ್ದೇನೆ. ಏಳು ಪ್ರಧಾನಿಗಳೊಂದಿಗೆ ಕೆಲಸ ಮಾಡಿದ್ದೇನೆ ಎಂದು ಹೇಳಿಕೊಂಡ ಮಲಿಕ್, ಕಳೆದ 28 ವರ್ಷಗಳಲ್ಲಿ ಯಾವುದೇ ಭಯೋತ್ಪಾದನಾ ಚಟುವಟಿಕೆಗಳು ಅಥವಾ ಹಿಂಸಾಚಾರದಲ್ಲಿ ಭಾಗಿಯಾಗಿದ್ದರೆ ಅದನ್ನು ತೋರಿಸಲಿ ಎಂದು ಭಾರತೀಯ ಗುಪ್ತಚರ ಸಂಸ್ಥೆಗಳಿಗೆ ಸವಾಲು ಹಾಕಿದರು. ಒಂದು ವೇಳೆ ಆರೋಪ ಸಾಬೀತಾದರೆ ನಾನು ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆ ಮತ್ತು ಮರಣದಂಡನೆಯನ್ನು ಸ್ವೀಕರಿಸುತ್ತೇನೆ ಎಂದು ಹೇಳಿದರು. ಕೋರ್ಟ್ ತೀರ್ಪು ಪ್ರಕಟಿಸುವ ಮುನ್ನ ಶ್ರೀನಗರದ ಕೆಲವು ಭಾಗಗಳಲ್ಲಿ ಇಂದು ಬಂದ್‌ಗೆ ಕರೆ ನೀಡಲಾಗಿತ್ತು. ನಗರದ ಕೆಲವು ಭಾಗಗಳಲ್ಲಿ ಅಂಗಡಿಗಳು ಮತ್ತು ಇತರ ವ್ಯಾಪಾರ ಸಂಸ್ಥೆಗಳು ಬಂದ್ ಆಗಿದ್ದವು. ಆದಾಗ್ಯೂ, ಸಾರ್ವಜನಿಕ ಸಾರಿಗೆ ಮತ್ತು ಖಾಸಗಿ ವಾಹನಗಳು ಎಂದಿನಂತೆ ಕಾರ್ಯನಿರ್ವಹಿಸಿ ದವು. ಶ್ರೀನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಕಾನೂನು–ಸುವ್ಯವಸ್ಥೆ ಹದಗೆಡದಂತೆ ಪರಿಸ್ಥಿತಿಯನ್ನು ನಿಭಾಯಿಸಲು ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಇಟಿ ಪರೀಕ್ಷೆಗೂ ಹಿಜಾಬ್ ನಿಷೇಧ

ಪರೀಕ್ಷಾ ಪ್ರಾಧಿಕಾರ ಸ್ಪಷ್ಟನೆ ನೀಡಿದೆ. ಸಿಇಟಿ ಪರೀಕ್ಷೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಲವು ನಿಯಮಗಳನ್ನು ಜಾರಿ ಮಾಡಿದೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ನಿಯಮ ಪಾಲನೆ ಮಾಡಬೇಕು ಎಂದು ಸೂಚನೆ ನೀಡಿದೆ. ಸಿಇಟಿ ಪರೀಕ್ಷೆಗೆ ವಿದ್ಯಾರ್ಥಿಗಳು ಹಿಜಬ್ ಧರಿಸುವಂತಿಲ್ಲ. ಹಿಜಬ್ ಅಲ್ಲದೇ ಕೇಸರಿ ಶಾಲು ಸೇರಿದಂತೆ ಯಾವುದೇ ಧಾರ್ಮಿಕ ಭಾವನೆಗೆ ಧಕ್ಕೆಯಾಗುವ ವಸ್ತ್ರಗಳನ್ನು ವಿದ್ಯಾರ್ಥಿಗಳು ಧರಿಸುವಂತಿಲ್ಲ.

ಪರೀಕ್ಷಾ ಕೇಂದ್ರಗಳಿಗೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಸಂಪೂರ್ಣ ನಿಷೇಧ ಮಾಡ ಲಾಗಿದೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ವಾಚ್ ನಿಷೇಧ (ಕೈ ಗಡಿಯಾರ) ಮಾಡ ಲಾಗಿದೆ. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಆಭರಣಗಳನ್ನು ಧರಿಸುವುದಕ್ಕೂ ನಿಷೇಧ ಹಾಕಲಾಗಿದೆ. ಮೊಬೈಲ್ ಸೇರಿದಂತೆ ಎಲ್ಲಾ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ನಿಷೇಧಿಸಿದ್ದು, ಪ್ರತಿ ಕೇಂದ್ರದಲ್ಲೂ ಕೆಇಎಯಿಂದಲೇ ಗಡಿಯಾರ ಅಳವಡಿಕೆ ಮಾಡಲು ತೀರ್ಮಾನ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಕುಡಿಯುವ ನೀರು ತೆಗೆದುಕೊಂಡು ಹೋಗಲು ಮಾತ್ರ ಅವಕಾಶ ನೀಡಲು ಕೆಇಎ ತೀರ್ಮಾನ ಮಾಡಿದೆ.

ಭಾರತಕ್ಕೂ ಶ್ರೀಲಂಕಾ ಸ್ಥಿತಿ

ರೈತರ ಸಂಕಷ್ಟ ಕೇಳುವವರೇ ಇಲ್ಲವಾಗಿದೆ ಎಂದರು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 414 ರೂ. ಇದ್ದ ಗ್ಯಾಸ್ ಸಿಲಿಂಡರ್ ಬೆಲೆ ಈಗ 1,050 ರೂ.ಗೆ ಹೆಚ್ಚಳವಾಗಿದೆ. ಇಂತಹ ದುಸ್ಥಿತಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಹೊಣೆಯಾಗಿದೆ. ಇದನ್ನು ಕಾಂಗ್ರೆಸ್ ಕಾರ್ಯಕರ್ತರು ಜನತೆಗೆ ಅರ್ಥ ಮಾಡಿಸಬೇಕು. ನಮ್ಮ ಕಾರ್ಯಕರ್ತರು ಮತದಾರರನ್ನು ಭೇಟಿ ಮಾಡಿ ಬಿಜೆಪಿಯ ಭ್ರಷ್ಟಾಚಾರ, ವೈಫಲ್ಯಗಳನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು.

ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆಯನ್ನು ಈ ಬಾರಿ ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಹಾಗಾಗಿ ಮಧು ಜಿ.ಮಾದೇಗೌಡರನ್ನು ಕಾಂಗ್ರೆಸ್ ಅಭ್ಯರ್ಥಿಗಾಗಿ ಶೀಘ್ರವೇ ಘೋಷಿಸಿತ್ತು. ಮಧು ಅವರ ತಂದೆ ಡಾ.ಜಿ.ಮಾದೇಗೌಡ ಅವರು ಇಡೀ ರಾಜ್ಯಕ್ಕೆ ಚಿರಪರಿಚಿತರು. 6 ಬಾರಿ ಶಾಸಕರು, ಎರಡು ಬಾರಿ ಸಂಸದರಾಗಿ, ಒಮ್ಮೆ ಸಚಿವ ರಾಗಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸಿದವರು. ಅದಕ್ಕಿಂತಲೂ ಹೆಚ್ಚಾಗಿ ಗ್ರಾಮೀಣ–ಬಡ ಜನತೆ ಮತ್ತು ರೈತರ ಬಗ್ಗೆ ಅಪಾರ ಕಳಕಳಿ ಹೊಂದಿದ್ದವರು ಎಂದರು.

ಜಿ.ಮಾದೇಗೌಡ ಜನಪರ ಹೋರಾಟದ ಅಪರೂಪದ ರಾಜಕಾರಣಿಯಾಗಿ ಪ್ರಾಮಾಣಿ ಕತೆ ಮತ್ತು ಬದ್ಧತೆಗೆ ಹೆಸರಾಗಿದ್ದರು. ತಂದೆ ದಾರಿಯಲ್ಲಿ ಮಧು ಅವರು ಸಾಗುತ್ತಿದ್ದಾರೆ. ಇವರು ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಬದಲಾವಣೆ ತರಬೇಕೆಂಬ ಆಕಾಂಕ್ಷೆಯೊಂದಿಗೆ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಪಕ್ಷದ ಕಾರ್ಯಕರ್ತರು, ಮುಖಂಡರು ಎಲ್ಲರೂ ಒಟ್ಟಾಗಿ ಸಂಘಟಿತವಾಗಿ ಕೆಲಸ ಮಾಡಿದರೆ ಮಧು ಜಿ.ಮಾದೇಗೌಡರ ಗೆಲುವು ಖಚಿತ ಎಂದರು. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವ ನಾರಾಯಣ್, ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾ ಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಗಣಪತಿ ಆಶ್ರಮದಲ್ಲಿ ವೇದ, ಸಂಗೀತ ವಿದ್ವಾಂಸರಿಗೆ ಸನ್ಮಾನ





ಆಸ್ಥಾನ ವಿದ್ವಾನರೂ ಆದ ಹೆಚ್.ವಿ.ನಾಗರಾಜರಾವ್ (ಮೈಸೂರು), ಡಾ.ಎಂ.ಸೂರ್ಯಪ್ರಸಾದ್ (ಬೆಂಗಳೂರು), ನಾಡನಿಧಿ ತಿರುವಾನೂರ್ ಭಕ್ತವತ್ಸಲಂ (ಚೆನ್ನೈ), ತ್ರಿಚಿ ಕೆ.ರಮೇಶ್ (ಚೆನ್ನೈ), ಆಸ್ಥಾನ್ ವಿದುಷಿ ಸೇಶುಲತಾ ಕೊಸುರಿ (ಹೈದರಾಬಾದ್), ಡಾ.ವಾಸೀಮ್ ಮಿರ್ಜಾ (ಮೈಸೂರು) ಅವರನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜನ್ಮದಿನ, ಶ್ರೀ ಜಯಲಕ್ಷ್ಮೀ ಮಾತೆ ಅವರ 100ನೇ ಜನ್ಮದಿನ ಹಾಗೂ ನಾದಮಂಟಪದ 24ನೇ ವಾರ್ಷಿಕೋತ್ಸವದ ಅಂಗವಾಗಿ ಬುಧವಾರ ಸನ್ಮಾನಿಸಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರನ್ನು ಕಾಣಬಹುದು. ಹನುಮಾನ್ ಜಯಂತಿ ಅಂಗವಾಗಿ ಆಶ್ರಮದ ಕಾರ್ಯಸಿದ್ಧಿ ಹನುಮಾನ್ ಮೂರ್ತಿಯನ್ನು 1 ಲಕ್ಷ ವಡೆಯಿಂದ ಅಲಂಕರಿಸಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ; ಮಾಜಿ ಸಿಎಂ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್ ನಾಯಕರು, ಅಪಾರ ಸಂಖ್ಯೆಯ ಕಾರ್ಯಕರ್ತರೊಂದಿಗೆ ಮೆರವಣಿಗೆ ನಂತರ

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ನಾಮಪತ್ರ ಸಲ್ಲಿಕೆ





ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು. ಜಿ.ಮಾದೇಗೌಡ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಆಯುಕ್ತ ಡಾ.ಜಿ.ಸಿ.ಪ್ರಕಾಶ್‌ರಿಗೆ ನಾಮಪತ್ರ ಸಲ್ಲಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಜೊತೆಗಿದ್ದರು. ಎಡಚಿತ್ರದಲ್ಲಿ ಪಾದಯಾತ್ರೆಯಲ್ಲಿ ನಾಮಪತ್ರ ಸಲ್ಲಿಕೆಗೆ ಮುಖಂಡರೊಂದಿಗೆ ಆಗಮಿಸಿದ ಅಭ್ಯರ್ಥಿ

ಮೈಸೂರು,ಮೇ 25(ಪಿಎಂ)–ಮಾಜಿ ಮುಖ್ಯಮಂತ್ರಿ, ವಿಪಕ್ಷ ನಾಯಕ ಸಿದ್ದ ರಾಮಯ್ಯ ನೇತೃತ್ವದಲ್ಲಿ ಅಪಾರ ಸಂಖ್ಯೆಯ ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ತೆರಳಿ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಬುಧ ವಾರ ನಾಮಪತ್ರ ಸಲ್ಲಿಸಿದರು.

ದಾಸಪ್ಪ ವೃತ್ತದಲ್ಲಿರುವ ಕಾಂಗ್ರೆಸ್ ಭವನ ದಿಂದ ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತ (ಮೆಟ್ರೋಪೋಲ್ ವೃತ್ತ) ಹಾಗೂ ಹುಣಸೂರು ರಸ್ತೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಯ ಕಾಂಗ್ರೆಸ್ ಶಾಸಕರು, ಮಾಜಿ ಶಾಸಕರು, ಮುಖಂಡರು, ಕಾರ್ಯ ಕರ್ತರೊಂದಿಗೆ ಪಾದಯಾತ್ರೆ ನಡೆಸಿ, ಪ್ರಾದೇ ಶಿಕ ಕಚೇರಿ ಆಯುಕ್ತರ ಕಚೇರಿಗೆ ತೆರಳಿ ಮಧು ಜಿ.ಮಾದೇಗೌಡ ನಾಮಪತ್ರ ಸಲ್ಲಿಸಿದರು.

ಬ್ಯಾಂಡ್‌ನೊಂದಿಗೆ ಕಾರ್ಯಕರ್ತರ ಜೈಕಾರದ ಘೋಷಣೆಗಳು ಮೆರವಣಿಗೆಯಲ್ಲಿ ಮೊಳಗಿದವು. ಸಿದ್ದರಾಮಯ್ಯ ಸೇರಿದಂತೆ ಹಿರಿಯ ನಾಯಕರು ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರೊಂದಿಗೆ ಪ್ರಾದೇ ಶಿಕ ಆಯುಕ್ತರ ಕಚೇರಿಯವರೆಗೂ ಕಾಲ್ನ ಡಿಗೆಯಲ್ಲಿ ತೆರಳಿ ಶಕ್ತಿ ಪ್ರದರ್ಶಿಸಿದರು.

ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಕಾರ್ಯಾ ಧ್ಯಕ್ಷ ಆರ್.ಧ್ರುವನಾರಾಯಣ್ ಜೊತೆ ಗೂಡಿ ಪ್ರಾದೇಶಿಕ ಆಯುಕ್ತರೂ ಆದ ಚುನಾ ವಣಾಧಿಕಾರಿ ಡಾ.ಜಿ.ಸಿ.ಪ್ರಕಾಶ್ ಅವರಿಗೆ ಮಧು ಜಿ.ಮಾದೇಗೌಡ ತಮ್ಮ ಉಮೇದು ವಾರಿಕೆ ಸಲ್ಲಿಸಿದರು. ಬಳಿಕ ಮಾಜಿ ಸಚಿವ ರಾದ ಡಾ.ಹೆಚ್.ಸಿ.ಮಹದೇವಪ್ಪ, ಚೆಲುವ ರಾಯಸ್ವಾಮಿ ಜೊತೆಗೂಡಿ ಮತ್ತೊಂದು ಸೆಟ್ ನಾಮಪತ್ರ ಹಾಗೂ ಹಾಸನ ಜಿಲ್ಲಾ ಧ್ಯಕ್ಷ ಜಾವಗಲ್ ಮಂಜುನಾಥ್, ಮೈಸೂರು ನಗರಾಧ್ಯಕ್ಷ ಆರ್.ಮೂರ್ತಿ ಜೊತೆಗೂಡಿ ಇನ್ನೊಂದು ಸೆಟ್ ನಾಮಪತ್ರ ಸೇರಿದಂತೆ ಒಟ್ಟು 3 ಸೆಟ್ ನಾಮಪತ್ರಗಳನ್ನು ಮಧು ಜಿ.ಮಾದೇಗೌಡ ಸಲ್ಲಿಸಿದರು. ಹೆಚ್ಚುವರಿ ಪ್ರಾದೇಶಿಕ ಆಯುಕ್ತರಾದ ರೂಪಶ್ರೀ, ಶಿವ ರಾಜ್ ಸೇರಿದಂತೆ ಪ್ರಾದೇಶಿಕ ಆಯುಕ್ತರ ಕಚೇರಿ ಸಿಬ್ಬಂದಿ ಈ ವೇಳೆ ಹಾಜರಿದ್ದರು.

ಬಳಿಕ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಯಾವ ಅಂಶಗಳು ಸಕಾರಾತ್ಮಕವಾಗಿವೆ? ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಬಿಜೆಪಿ ಸರ್ಕಾರದ ಆಡಳಿತ ವೈಫಲ್ಯ, ವ್ಯಾಪಕ ಭ್ರಷ್ಟಾಚಾರದ ಜೊತೆಗೆ ರೈತರ ಸಮಸ್ಯೆಗಳಿಗೆ ಪರಿಹಾರ ದೊರೆಯದೇ ಇರುವುದು, ನಿರುದ್ಯೋಗ, ಬೆಲೆ ಏರಿಕೆ ಸೇರಿದಂತೆ ಬಿಜೆಪಿ ಆಡಳಿತದ ವೈಫಲ್ಯದ ದೊಡ್ಡ ಪಟ್ಟಿಯೇ ಇದೆ. ಹಾಗಾಗಿ ಹೆಚ್ಚು ಪ್ರಜ್ಞಾವಂತರು ಮತ್ತು ಪ್ರಬುದ್ಧರಾಗಿ ರುವ ಪದವೀಧರ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ಮಾತ್ರ ಈ ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಸುವ ಶಕ್ತಿ ಹೊಂದಿದೆ. ಬಿಜೆಪಿ, ಜೆಡಿಎಸ್‌ನಿಂದ ಇದು ಸಾಧ್ಯವಿಲ್ಲ. ಹಾಗಾಗಿ ನಮ್ಮ ಅಭ್ಯರ್ಥಿ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಅಭ್ಯರ್ಥಿ ಮಧು ಜಿ.ಮಾದೇ ಗೌಡ ಮಾತನಾಡಿ, ನಾಲ್ಕು ಜಿಲ್ಲೆಗಳಿಂದ ಪಕ್ಷದ ಕಾರ್ಯಕರ್ತರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪದವೀಧರ ಮತದಾರ ಬಂಧುಗಳು ನನ್ನ ಜೊತೆಯಲ್ಲಿ ನಿಂತು ನಾಮಪತ್ರ ಸಲ್ಲಿಕೆಗೆ ಸಾಕ್ಷಿಯಾಗಿದ್ದಾರೆ. ಜೊತೆಗೆ ನಮ್ಮ ನಾಯಕರಾದ ಸಿದ್ದರಾಮಯ್ಯ, ಆರ್.ಧ್ರುವನಾರಾಯಣ ಸೇರಿದಂತೆ ಕಾಂಗ್ರೆಸ್ ಮುಖಂಡರು ನಾಮಪತ್ರ ಸಲ್ಲಿಕೆ ಕಾರ್ಯ ಕ್ರಮದಲ್ಲಿ ಪಾಲ್ಗೊಂಡು ನೈತಿಕ ಶಕ್ತಿ ತುಂಬಿ ದ್ದಾರೆ. ಈಗಾಗಲೇ ನಾನು ನಾಲ್ಕು ಜಿಲ್ಲೆಗಳ 27 ತಾಲೂಕುಗಳಲ್ಲಿ ಎಲ್ಲಾ ಪದವೀಧರ ರನ್ನು ಪಕ್ಷದ ಕಾರ್ಯಕರ್ತರೊಂದಿಗೆ ಭೇಟಿ ಮಾಡಿ ಮತ ಯಾಚಿಸಿದ್ದೇನೆ. ಬಿಜೆಪಿ ದುರಾ ಡಳಿತ ಮತ್ತು ಭ್ರಷ್ಟಾಚಾರ ನನ್ನ ಗೆಲುವಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ನಮ್ಮ ತಂದೆಯವರು ಮಾಡಿರುವ ರೈತ ಪರ ಕೆಲಸ–ಕಾರ್ಯಗಳು, ಜನಪರ ಹೋರಾಟಗಳು ನನ್ನ ಗೆಲುವಿನ ಸಹಕಾರಿ ಯಾಗುವ ವಿಶ್ವಾಸವಿದೆ. ಕಳೆದ ಒಂದು ವರ್ಷದಿಂದ 45 ಸಾವಿರಕ್ಕೂ ಹೆಚ್ಚು ಪದವೀ ಧರರನ್ನು ಮತದಾರರಾಗಿ ನೋಂದಣಿ ಮಾಡಿಸಿದ್ದು, 70 ಸಾವಿರ ಪದವೀಧರರನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದೇನೆ ಎಂದರು.

ಜೆಡಿಎಸ್ ಎಂಎಲ್‌ಸಿ ಮರಿತಿಬ್ಬೇಗೌಡ ತಮ್ಮ ಪಕ್ಷದಿಂದ ಹೊರಬರುವ ಸುಳಿವು ನೀಡಿದ್ದಾರೆ. ಜೊತೆಗೆ ರಾಜಕೀಯವಾಗಿ ನನಗೆ ಸ್ಥಾನಮಾನ ದೊರೆತಿದ್ದು ಕಾಂಗ್ರೆಸ್ ಪಕ್ಷ ದಿಂದ ಎಂದು ಹೇಳಿಕೊಂಡಿದ್ದಾರೆ. ಹಾಗಾಗಿ ಅವರ ಬೆಂಬಲ ಕೋರುತ್ತೀರಾ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಹಕಾರ ಕೋರುವು ದರಲ್ಲಿ ತಪ್ಪೇನಿಲ್ಲ. ಕೋರುತ್ತೇವೆ ಎಂದರು.

ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹ ದೇವಪ್ಪ, ಚೆಲುವರಾಯಸ್ವಾಮಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡ ಮರೀಗೌಡ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಸೇರಿದಂತೆ ನೂರಾರು ಕಾರ್ಯ ಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಅಧಿಕಾರಿಗಳಿಗಿದ್ದ ಮಾಹಿತಿ ಕೊರತೆ ನೀಗಿಸಿದ ಸಿದ್ದರಾಮಯ್ಯ!

ಮೈಸೂರು: ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ ಸಂಬಂಧ ಅಭ್ಯರ್ಥಿ ನಾಮಪತ್ರ ಸಲ್ಲಿಸುವಾಗ ಅವರ ಜೊತೆಯಲ್ಲಿ ಇಬ್ಬರು ಹಾಜರಿರಲು ಅವಕಾಶವಿದೆ ಎಂಬ ಮಾಹಿತಿ ಕೊರತೆ ನೀಗಿಸಿದ್ದಾರೆ ಮಾಜಿ ಸಿಎಂ ಸಿದ್ದರಾಮಯ್ಯ.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರ ನಾಮ ಪತ್ರ ಸಲ್ಲಿಸುವ ಸಂಬಂಧ ಪ್ರಾದೇಶಿಕ ಆಯುಕ್ತರ ಕಚೇರಿಗೆ ಸಿದ್ದರಾಮಯ್ಯ, ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಚೆಲುವರಾಯಸ್ವಾಮಿ ಸೇರಿದಂತೆ ಹಲವರು ಆಗಮಿಸಿದ್ದರು.

ಅಭ್ಯರ್ಥಿ ನಾಮಪತ್ರ ಸಲ್ಲಿಸುವಾಗ ಅವರ ಜೊತೆಯಲ್ಲಿ ಒಬ್ಬರು ಮಾತ್ರ ಹಾಜರಿರಲು ಅವಕಾಶವಿದೆ. ಈ ಹಿಂದೆ ಅಭ್ಯರ್ಥಿ ಜೊತೆಗೆ ನಾಲ್ವರಿಗೆ ಅವಕಾಶ ನೀಡಲಾಗಿತ್ತು. ಇದನ್ನು ಚುನಾವಣಾ ಆಯೋಗ ಬದಲಾವಣೆ ಮಾಡಿದೆ. ಈಗ ಅಭ್ಯರ್ಥಿ ಜೊತೆಗೆ ಒಬ್ಬರು ಹಾಜರಿರಲು ಅನುವು ಮಾಡಿದೆ ಎಂದು ಚುನಾವಣಾಧಿ ಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ಡಾ.ಪ್ರಕಾಶ್ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಿನ್ನೆ ವಿಧಾನಸಭೆ ಯಿಂದ ಪರಿಷತ್‌ಗೆ ನಡೆಯುವ ಚುನಾವಣೆ ಸಂಬಂಧ ನಾಮಪತ್ರ ಸಲ್ಲಿಕೆಗೆ ಅಭ್ಯರ್ಥಿ ಜೊತೆಯಲ್ಲಿ ಇಬ್ಬರು ಹಾಜರಿರಲು ಅವಕಾಶವಿತ್ತು. ಅದಕ್ಕೊಂದು ಇದಕ್ಕೊಂದು ಪ್ರತ್ಯೇಕ ನಿಯಮ ಇರಲಿಕ್ಕಿಲ್ಲ. ಒಮ್ಮೆ ಪರಿಶೀಲಿಸಿ ಎಂದು ಹೇಳಿದರು.

ಬಳಿಕ ಚುನಾವಣಾಧಿಕಾರಿಗಳು ದೂರವಾಣಿ ಮೂಲಕ ಆಯೋಗದ ಅಧಿಕಾರಿಗಳನ್ನು ಸಂಪರ್ಕಿಸಿದರು. ಈ ವೇಳೆ ಅಭ್ಯರ್ಥಿ ಜೊತೆಗೆ ಇಬ್ಬರಿಗೆ ಅವಕಾಶ ಇದೆ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ, ಆರ್.ಧ್ರುವನಾರಾಯಣ್ ಅವರ ಜೊತೆಯಲ್ಲಿ ಮಧು ಜಿ.ಮಾದೇಗೌಡ ನಾಮಪತ್ರ ಸಲ್ಲಿಸಿದರು. ಇದರಿಂದ ಉಳಿದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗಲೂ ಇಬ್ಬರು ಜೊತೆಯಲ್ಲಿರಲು ಅವಕಾಶ ದೊರೆಯಿತು.

ಒಳ್ಳೆಯದನ್ನು ಪಠ್ಯದಲ್ಲಿ ಅಳವಡಿಸಿದ್ದೇವೆ

ಕಾಂಗ್ರೆಸ್‌ನಿಂದ ನೀಚ ರಾಜಕೀಯ: ಸಚಿವ ಬಿ.ಸಿ.ನಾಗೇಶ್ ವಾಗ್ದಾಳಿ

ಮೈಸೂರು, ಮೇ 25(ಆರ್‌ಕೆ)– ಪಠ್ಯಪುಸ್ತಕ ದಲ್ಲಿ ಒಳ್ಳೆಯದನ್ನೇ ಅಳವಡಿಸಿದ್ದೇವೆ. ಆದರೆ ಕಾಂಗ್ರೆಸ್ ಅದನ್ನೇ ಬಳಸಿಕೊಂಡು ನೀಚ ರಾಜಕೀಯ ಮಾಡುತ್ತಿದೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಾಗ್ದಾಳಿ ನಡೆಸಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ ಸ್ವಾಮೀಜಿಗಳಿಗೆ ಶುಭಾಶಯ ಹೇಳಿ ಆಶೀರ್ವಾದ ಪಡೆದ ನಂತರ ಸುದ್ದಿಗಾರರೊಂ ದಿಗೆ ಮಾತನಾಡುತ್ತಿದ್ದ ಅವರು, ನಾವು ಶಿಕ್ಷಣ ವನ್ನು ಮಾತ್ರ ಬದಲಾವಣೆ ಮಾಡಿಲ್ಲ, ದೇಶದ ಸಮಗ್ರ ಬದಲಾವಣೆ ಮಾಡಿದ್ದೇವೆ ಎಂದರು.

ಈ ದೇಶದಲ್ಲಿ ವಾಜಪೇಯಿ ಅವರು ಪ್ರಧಾನಿ ಯಾಗುವವರೆಗೂ ಅಂತರ ರಾಜ್ಯ ರಸ್ತೆಗಳು ಸುಧಾರಣೆಯಾಗಿರಲಿಲ್ಲ. ಯಾವಾಗ ಯುದ್ಧ ಆರಂಭ ಆಗಬೇಕೆಂಬು ದನ್ನು ಅಮೆರಿಕಾ ತೀರ್ಮಾ ನಿಸುತ್ತಿತ್ತು. ಕಾಂಗ್ರೆಸ್ ಯಾರ್‍ಯಾರಿಗೋ ರಾಜೀ ಮಾಡಿಕೊಂಡು ರಾಜ ಕೀಯ ಮಾಡಿದೆ. ಆದರೆ ನಾವು ಈ ನೆಲಕ್ಕಾಗಿ, ಸಂಸ್ಕೃತಿಗಾಗಿ ಹಾಗೂ ಜನರಿಗಾಗಿ ರಾಜಕೀಯ ಮಾಡಿಕೊಂಡಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಪಠ್ಯಪುಸ್ತಕದ ಬಗ್ಗೆ ಮಾತನಾಡುತ್ತಿರುವವರು ವಿಷಯ ಮರೆತು ರಾಜಕೀಯ ಮಾಡು ತ್ತಿದ್ದಾರೆ. ಬರಗೂರು ರಾಮಚಂದ್ರಪ್ಪ ಪಠ್ಯ ಬದಲಾಯಿಸಿ ದರೆ ವಿರೋಧವಿಲ್ಲ. ಒಂದೇ ಪಂಥದ ಪಠ್ಯ ಸೇರಿಸಿದರೆ ತಪ್ಪಲ್ವಾ? ಈಗ ಮಾತ್ರ ನಿಮಗೆ ಪಂಥಗಳು ಕಾಣುತ್ತವೆ. ಬಿಜೆಪಿ ಸರ್ಕಾರ ಪಠ್ಯ ಪರಿಷ್ಕರಣೆ ಮಾಡುತ್ತಿದ್ದಂತೆಯೇ ನಿಮಗೆ ಚಾತುರ್ವರ್ಣ ನೆನಪಾಗುತ್ತಿದೆ ಎಂದು ಸಚಿವರು ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದರು.

ದೇವನೂರ ಮಹಾದೇವ ಅವರು ಹಿರಿಯ ಸಾಹಿತಿಗಳು, ಅವರು ಹೇಳಿರುವುದರಲ್ಲೂ ಸತ್ಯ ಇದೆ. ನಾನೇ ಭೇಟಿ ಮಾಡಿ ಗೊಂದಲ ಬಗೆಹರಿ ಸುತ್ತೇನೆ. ತಾತ್ವಿಕ ಭಿನ್ನತೆ ಇರಬಹುದು. ಆದರೆ ಒಳಿತಾಗುವುದನ್ನು ಪಠ್ಯದಲ್ಲಿ ಸೇರಿಸಿದ್ದೇವೆ. ಅದನ್ನು ದೇವನೂರು ಅವರಿಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತೇವೆ ಎಂದು ಅವರು ನುಡಿದರು.

ಪ್ಯಾನ್ ಇಂಡಿಯಾ ಗೇಮ್ಸ್‌ನಲ್ಲಿ 3 ಚಿನ್ನದ ಪದಕ ಪಡೆದ ಮಂಡ್ಯದ ಚಲುವೇಗೌಡ

ಮೈಸೂರು, ಮೇ 25– ಇತ್ತೀಚೆಗೆ ಬೆಂಗಳೂರಲ್ಲಿ ನಡೆದ 'ಪ್ಯಾನ್ ಇಂಡಿಯಾ ನ್ಯಾಷನಲ್ ಗೇಮ್ಸ್'ನಲ್ಲಿ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು ಚಿನಕುರಳಿ ಗ್ರಾಮದ ಲೇಟ್ ಬೆಟ್ಟೇಗೌಡ ಹಾಗೂ ಲೇಟ್ ಕೆಂಪಮ್ಮರವರ ಪುತ್ರ ಸಿ.ಬಿ. ಚಲುವೇಗೌಡರು 75+ವಯೋಮಿತಿಯ ಗುಂಡು ಎಸೆತ, ಚಕ್ರ ಎಸೆತ, ಹ್ಯಾಮರ್ ಎಸೆತದ ಸ್ಪರ್ಧೆಯಲ್ಲಿ ಭಾಗವಹಿಸಿ 3 ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಇವರು ಇತ್ತೀಚೆಗೆ ನಡೆದ 42ನೇ ಚೆನ್ನೈ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ 75+ ವಯೋಮಿತಿ ವಿಭಾಗದ ಹ್ಯಾಮರ್ ಎಸೆತದಲ್ಲಿ ಬೆಳ್ಳಿ ಹಾಗೂ ಗುಂಡು ಎಸೆತದಲ್ಲಿ ಕಂಚಿನ ಪದಕ ಪಡೆದು, ಒರಿಸ್ಸಾದಲ್ಲಿ ನಡೆಯುವ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.



ವಯಸ್ಸು ಭೌತಿಕ ದೇಹಕ್ಕೆ ಹೊರತು ಆತ್ಮಕ್ಕಲ್ಲ, ಯೋಗ ನನ್ನ ಜೀವನ, ಉಸಿರು

ಮೈಸೂರಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಯೋಗಿನಿ ಕಾಳೀಜಿ ಅಭಿಮತ



ಯೋಗಿನಿ ಕಾಳೀಜಿ ಅವರ ಸಂವಾದ ಸಂದರ್ಭದಲ್ಲಿ ಮೈಸೂರು ವೇದ ವ್ಯಾಸ ಪ್ರತಿಷ್ಠಾನದ ಸಂಸ್ಥಾಪಕ, ಯೋಗ ಗುರು ಡಾ.ಕೆ.ರಾಘವೇಂದ್ರ ಪೈ, ರಂಗರಾವ್ ಮತ್ತು ಸನ್ಸ್‌ನ ಆರ್.ಕೃಷ್ಣ ಅವರನ್ನು ಚಿತ್ರದಲ್ಲಿ ಕಾಣಬಹುದು.

ವಿಶ್ವದ 238ನೇ ಅತ್ಯಂತ ಪ್ರಭಾವಶಾಲಿ ವ್ಯಕ್ತಿ

67 ವರ್ಷ ವಯಸ್ಸಿನ ಯೋಗಿನಿ ಕಾಳೀಜಿ ವಿಶ್ವದ 238ನೇ ಅತ್ಯಂತ ಪ್ರಭಾವಶಾಲಿ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟಿದ್ದಾರೆ. ಅವರು ಯೋಗ ಮತ್ತು ಸಂಬಂಧಿತ ವಿಷಯಗಳ ಕುರಿತು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ವಿಶ್ವಾದ್ಯಂತ 45 ದೇಶಗಳಲ್ಲಿ 53 ತ್ರಿಯೋಗ ಕೇಂದ್ರಗಳನ್ನು ತೆರೆದು 260 ಶಿಕ್ಷಕರು ಯೋಗ, ವೇದ, ಮುದ್ರೆಗಳ ಬಗ್ಗೆ ಪ್ರಚಾರ ನೀಡುತ್ತಿದ್ದಾರೆ. ಹಿಂದೂ ಸನಾತನ ಧರ್ಮ ಇವರ ಮುಖ್ಯ ವಿಷಯವಾಗಿದ್ದು, ಈ ಬಗ್ಗೆ ಎಲ್ಲೆಡೆ ಪ್ರಚಾರ ಕೈಗೊಂಡಿದ್ದಾರೆ.

ಮೈಸೂರು, ಮೇ 25 (ಆರ್‌ಕೆಬಿ)– ಅಂತಾರಾಷ್ಟ್ರೀಯ ಖ್ಯಾತಿಯ ಯೋಗಿನಿ ಹಾಗೂ ತ್ರಿಯೋಗದ ಸಂಸ್ಥಾಪಕಿ, ಮೈಸೂ ರಿನ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಶಿಷ್ಯರಾದ ಅಮೆರಿಕದ ಯೋಗಿನಿ ಕಾಳೀಜಿ ಅವರು ಮೈಸೂರಿಗೆ ಭೇಟಿ ನೀಡಿದ್ದು, ಬುಧವಾರ ಅವರು ಮೈಸೂರಿನ ಕುವೆಂಪುನಗರದಲ್ಲಿರುವ ಎನ್.ರಂಗರಾವ್ ಅಂಡ್ ಸನ್ಸ್‌ನ ಆರ್.ಕೃಷ್ಣ ಅವರ ನಿವಾಸ ದಲ್ಲಿ ಹಲವು ಯೋಗ ಶಿಕ್ಷಕರು ಹಾಗೂ ಇತರರೊಂದಿಗೆ ಯೋಗ, ವೇದ, ಹಿಂದೂ ಸನಾತನ, ಯೋಗಮುದ್ರೆ, ಧ್ಯಾನ ಇನ್ನಿತರೆ ವಿಚಾರಗಳ ಕುರಿತು ಸಂವಾದ ನಡೆಸಿದರು.

ಯೋಗವು ನನ್ನ ಜೀವನ ಮತ್ತು ಉಸಿರು, 'ಆತ್ಮಕ್ಕೆ ಯಾವುದೇ ವಯಸ್ಸಿಲ್ಲ ಮತ್ತು ವಯಸ್ಸು ಭೌತಿಕ ದೇಹಕ್ಕೆ ಮಾತ್ರ ಎಂದು ಸಮರ್ಥಿಸಿ ಕೊಂಡರು. ತ್ರಿಯೋಗ ಎಂದರೇನು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇದು ಯೋಗ ಮತ್ತು ಪ್ರಾಣ ವಿದ್ಯೆ ಜೊತೆಗೆ ಯೋಗ ತತ್ವ ಶಾಸ್ತ್ರ, ಸಸ್ಯಾಹಾರಿ ಆಹಾರ ಮತ್ತು ಯೋಗ ಸಂಗೀತವನ್ನು ಒಳಗೊಂಡಿದೆ. ಈ ಅಭ್ಯಾಸ ಗಳು ದೇಹ, ಮನಸ್ಸು ಧ್ಯಾನ ಮತ್ತು ಜೀವನಕ್ಕೆ ಸೂಕ್ತವಾದ ಸಾಧನವಾಗುತ್ತದೆ ಎಂದರು.

ನೀವು ಹೇಗೆ ಯೋಗಿನಿಯಾದಿರಿ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಯಾರು ಎಂಬ ನಮ್ಮ ಮೂಲವನ್ನು ಅರ್ಥ ಮಾಡಿ ಕೊಳ್ಳುವ ಸ್ವಭಾವದಿಂದ ನಾನು ಜನಿಸಿ ದ್ದೇನೆ. 1980ರಲ್ಲಿ ನನ್ನಲ್ಲಿ ಸ್ವಯಂ ಯೋಗ ಮತ್ತು ಮುದ್ರೆಗಳೊಂದಿಗೆ ನನ್ನ ಯೋಗ ಜೀವನ ಆರಂಭವಾಯಿತು ಎಂದರು.

ಭಾರತವು ವಿಶ್ವ ಗುರುವಾಗಿರುವುದ ರಿಂದ ಯೋಗವು ಈಗ ಜಗತ್ತಿನಲ್ಲಿ ಮನೆ ಮಾತಾಗಿದೆ, ಅದು ನಿಜವಾಗಿಯೂ ಅರ್ಹ ವಾದ ಶೀರ್ಷಿಕೆಯಾಗಿದೆ. ಸಾವಿರಾರು ವರ್ಷಗಳಿಂದ ಭಾರತವು ಯೋಗ ತರಗತಿ ಗಳನ್ನು ನಡೆಸುತ್ತಿರುವಾಗ ಭಾರತಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ. ಎಂದರು.

ಯೋಗವು ಜಗತ್ತನ್ನು ಹೇಗೆ ಒಟ್ಟುಗೂಡಿ ಸುತ್ತದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯೋಗಿಣಿ ಕಾಳೀಜಿ, ಯೋಗವು ಅದರ ಸ್ವಭಾವದಿಂದ ಜಗತ್ತನ್ನು ಒಂದುಗೂಡಿಸು ತ್ತದೆ. ನಮಗೆ ಮಾರ್ಗದರ್ಶನ ನೀಡಲು ಅಹಿಂಸೆಯನ್ನು ನಮ್ಮ ಆಂತರಿಕ ಬೆಳಕಾಗಿ ಇರಿಸಿದಾಗ ಒಗ್ಗೂಡುವ ಭಾವನೆ ಇರು ತ್ತದೆ ಎಂದು ಅಭಿಪ್ರಾಯಪಟ್ಟರು.

ಸನಾತನ ಧರ್ಮವು ಅನಾದಿ ಕಾಲದ ಸತ್ಯವಾಗಿದ್ದು, ಅದು ಜನರನ್ನು ಅದರದೇ ಮಟ್ಟದಲ್ಲಿ ತಲುಪುತ್ತದೆ ಮತ್ತು ಉನ್ನತಿಗಾಗಿ ಶ್ರಮಿಸುವಂತೆ ಪ್ರೇರೇಪಿಸುತ್ತದೆ. ಇದು ನಮ್ಮ ನಿಜವಾದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಪ್ರೇರೇಪಿಸುತ್ತದೆ. ಅದು ದೈವಿಕ ಕಿರಣವಾಗಿರುವ 'ಆತ್ಮ', ಸನಾತನ ಧರ್ಮವು ಜ್ಞಾನದ ನದಿಗಳ ಸಾಕಾರ ವಾಗಿದೆ ಎಂದು ಹೇಳಿದರು.

ತ್ರಿಯೋಗ ಬಗ್ಗೆ ವಿವರಿಸಿದ ಅವರು, ಇದು ಸ್ವಯಂ ಸಿದ್ಧಿಯಿಂದ ಹುಟ್ಟಿದ್ದು, ಅಲ್ಲಿ ಬುದ್ಧಿವಂತಿಕೆ ಮತ್ತು ಪ್ರಾಣವು ಇತರರ ಪ್ರಯೋಜನಕ್ಕಾಗಿ ಯೋಗ ಸಾಧನದ ಮೂಲಕ ದೇಹ–ಮನಸ್ಸುಗಳಿಗೆ ಮಾರ್ಗ ದರ್ಶನ ನೀಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಶ್ರೀ ಗಣಪತಿ ಸ್ವಾಮೀಜಿ ಮತ್ತು ಅವರ ತಾಯಿ ಜಯಲಕ್ಷ್ಮಿ ಮಾತೆ ತಮ್ಮ ಗುರುಗಳಾಗಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಅವರು ಹೇಳಿದರು.ಇದು ತಮ್ಮ 28ನೇ ಭಾರತ ಭೇಟಿಯಾಗಿದ್ದು, 1980ರಲ್ಲಿ ಮೊದಲ ಭೇಟಿ ನೀಡಿದ್ದ ಬಗ್ಗೆ ಸ್ಮರಿಸಿದರು. ಈ ಸಂದರ್ಭದಲ್ಲಿ ಯೋಗಿನಿ ಕಾಳಿಜಿಯವರು ಸ್ವಯಂ ಕಲಿತ ಅನೇಕ ಹಸ್ತ ಮುದ್ರೆಗಳ ಪ್ರಾತ್ಯಕ್ಷಿಕೆ ನೀಡಿದರು.

ಈ ಸಂದರ್ಭದಲ್ಲಿ ಆರ್.ಕೃಷ್ಣ, ಪತ್ನಿ ಸುಮಾ ಕೃಷ್ಣ, ಮೈಸೂರು ವೇದವ್ಯಾಸ ಪ್ರತಿಷ್ಠಾನದ ಸಂಸ್ಥಾಪಕ ಯೋಗ ಗುರು ಡಾ.ಕೆ.ರಾಘವೇಂದ್ರ ಪೈ ಉಪಸ್ಥಿತರಿದ್ದರು.

ನಂಜನಗೂಡಲ್ಲಿ ಸಪ್ತಪದಿ ತುಳಿದ 60 ಜೋಡಿಗಳು

• ವಧುವಿಗೆ ಸೀರೆ-ರವಿಕೆ, ವರನಿಗೆ ಶರ್ಟ್, ಪಂಚೆ-ಶಲ್ಯ, 40 ಸಾವಿರ ಮೌಲ್ಯದ ಚಿನ್ನದ ತಾಳಿ- ಗುಂಡುಗಳ ಕೊಡುಗೆ • ನವದಂಪತಿಗಳಿಗೆ ಜಿಲ್ಲಾಧಿಕಾರಿಗಳಿಂದ ಶುಭ ಹಾರೈಕೆ



ಸರಳ ಸಾಮೂಹಿಕ ವಿವಾಹದಲ್ಲಿ 60 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ಸತಿಪತಿಗಳಾದ ಹಿರಿಯ ಜೋಡಿ



ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದ ಮಲ್ಲೇಶ್(49) ಹಾಗೂ ಗೌಡಹಳ್ಳಿ ಗ್ರಾಮದ ಗೌರಮ್ಮ(41) ಹಿರಿಯ ಜೋಡಿಗಳು ಸರಳ ವಿವಾಹದಲ್ಲಿ ಸತಿಪತಿಗಳಾದರು. ವರ ಮಲ್ಲೇಶ್ 'ಮೈಸೂರುಮಿತ್ರ'ನೊಂದಿಗೆ ಮಾತನಾಡಿ, ನನಗೆ ವಧು ಸಿಕ್ಕಿಲ್ಲದ ಕಾರಣ ಮದುವೆಯಾಗಿರಲಿಲ್ಲ. ನಮ್ಮ ಹೊನ್ನೂರು ಗ್ರಾಮದಲ್ಲಿ ಸುಮಾರು 20 ಮಂದಿ 45ರಿಂದ 49 ವಯಸ್ಸಿನವರು ವಧು ಸಿಕ್ಕದೆ ಮದುವೆಯಾಗಿಲ್ಲ. ಈಗ ನಮಗೆ ಕಾಲ ಕೂಡಿ ಬಂದಿದ್ದು, ವಧು ಸಿಕ್ಕಿ ಮದುವೆಯಾಗುತ್ತಿದ್ದೇನೆ ಎಂದು ತಮ್ಮ ಅನಿಸಿಕೆ ಹಂಚಿಕೊಂಡರು.

ಅಂಗವಿಕಲನ ಕೈಹಿಡಿದ ಮಹದೇವಿ: ಒಂದು ಕಣ್ಣಿಲ್ಲದ ವಿಶೇಷ ಚೇತನ ನಂಜನಗೂಡು ತಾಲೂಕಿನ ಇಮ್ಮಾವುಹುಂಡಿ ಗ್ರಾಮದ ಚಂದ್ರ(28) ಅವರನ್ನು ತಾಲೂಕಿನ ಹುಸ್ಕೂರು ಗ್ರಾಮದ ಮಹದೇವಿ(26) ಕೈಹಿಡಿದು ವಿವಾಹ ಜೀವನಕ್ಕೆ ಕಾಲಿಟ್ಟರು.

ನಂಜನಗೂಡು, ಮೇ 25(ಸುದರ್ಶನ್)- ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿರುವ ಕಲಾಮಂದಿರದಲ್ಲಿ ಏರ್ಪಡಿಸಲಾಗಿದ್ದ ಸಪ್ತಪದಿ ಸರಳ ಸಾಮೂಹಿಕ ವಿವಾಹದಲ್ಲಿ 60 ಜೋಡಿಗಳು ಸಪ್ತಪದಿ ತುಳಿದು ಸತಿಪತಿಗಳಾದರು.

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ತಲಕಾಡಿನ ವೈದ್ಯನಾಥೇಶ್ವರ ದೇವಾಲಯದ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಸರಳ ಸಾಮೂಹಿಕ ವಿವಾಹವನ್ನು ಏರ್ಪಡಿಸಿತ್ತು. ದೇವಾಲಯದ ವತಿಯಿಂದ ವಧುವಿಗೆ ಸೀರೆ, ರವಿಕೆ ಕೊಳ್ಳಲು 10 ಸಾವಿರ, ವರನಿಗೆ 5 ಸಾವಿರ ರೂಗಳ ಶರ್ಟ್, ಪಂಚೆ, ಶಲ್ಯ ಕೊಳ್ಳಲು ಮತ್ತು 40 ಸಾವಿರ ಮೌಲ್ಯದ ಚಿನ್ನದ ತಾಳಿ ಮತ್ತು 2 ಗುಂಡುಗಳನ್ನು ನೀಡಲಾಗಿತ್ತು.

ಬೆಳಗ್ಗೆ 10.55 ರಿಂದ 11.40 ಗಂಟೆಯೊಳಗೆ ಸಲ್ಲುವ ಶುಭ ಕಟಕ ಲಗ್ನದಲ್ಲಿ ಶ್ರೀಕಂಠೇಶ್ವರ ದೇವಾಲಯದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್, ಚಾಮುಂಡೇಶ್ವರಿ ದೇವಾಲಯದ ಆಗಮಿಕ ಅರ್ಚಕ ಡಾ.ಶಶಿಧರ ದೀಕ್ಷಿತರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಸಂಪ್ರದಾಯಬದ್ಧವಾಗಿ ವಿವಾಹ ಮಹೋತ್ಸವ ನೆರವೇರಿಸಲಾಯಿತು. ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಕೊಡಗು ಜಿಲ್ಲೆಯ ವಧುವರರು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ನಂತರ ಮೈಸೂರು ಜಿಲ್ಲಾಧಿಕಾರಿ ಬಗಾದಿ ಗೌತಮ್ ವಧು ವರರಿಗೆ ತಾಳಿಯನ್ನು ವಿತರಿಸಿ ಸರಳ ಸಾಮೂಹಿಕ ವಿವಾಹಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಮದುವೆಗಳು ಬಡವರಿಗೆ ಆರ್ಥಿಕವಾಗಿ ಹೊರೆಯಾಗಬಾರದು ಎಂಬ ಸದುದ್ದೇಶದಿಂದ ಸರ್ಕಾರ ಸರಳ ಸಾಮೂಹಿಕ ವಿವಾಹವನ್ನು ನಡೆಸುತ್ತಿದೆ. ಈ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಎಲ್ಲರೂ ಸದುಪಯೋಗ ಪಡೆದುಕೊಳ್ಳಬೇಕು. ಇಲ್ಲಿ ನೂತನವಾಗಿ ವೈವಾಹಿಕ ಜೀವನಕ್ಕೆ ಕಾಲಿಟ್ಟ ನವಜೋಡಿಗಳು ಹೊಂದಿಕೊಂಡು ಬಾಳುವೆ ಮಾಡಿ ಎಂದು ಶುಭ ಹಾರೈಸಿದರು. ದೇವಾಲಯದ ದಾಸೋಹ ಭವನ ದಲ್ಲಿ ವಧು-ವರರು ಮತ್ತು ಸಂಬಂಧಿಕರಿಗೆ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ಸರಳ ಸಾಮೂಹಿಕ ವಿವಾಹದ ಅಂಗವಾಗಿ ಹೋಳಿಗೆ, ಪಾಯಸ, ಬಾತ್, ಅನ್ನ ಸಾಂಬಾರ್, 2 ತರಹದ ಪಲ್ಯ, ಮಜ್ಜಿಗೆ, ತಿಳಿಸಾಂಬಾರ್ ಸೇರಿದಂತೆ ವಿಶೇಷವಾಗಿ ವಿವಿಧ ಬಗೆಯ ಖಾದ್ಯಗಳನ್ನು ಮಾಡಲಾಗಿತ್ತು. ತಾಲೂಕು ವಿವಾಹ ನೊಂದಣಾಧಿಕಾರಿ ಶಿವಶಂಕರ್‌ಮೂರ್ತಿ ಸ್ಥಳದಲ್ಲಿ ಹಾಜರಿದ್ದು ಸರಳ ವಿವಾಹದಲ್ಲಿ ಮದುವೆಯಾದ ಜೋಡಿಗಳಿಗೆ ಮದುವೆ ನೋಂದಾಯಿಸಿ ಪ್ರಮಾಣಪತ್ರವನ್ನು ವಿತರಿಸಿದರು.

ಇದೇ ಸಂದರ್ಭದಲ್ಲಿ ತಹಶೀಲ್ದಾರ್ ಎಂ.ಶಿವಮೂರ್ತಿ, ಶ್ರೀಕಂಠೇಶ್ವರ ದೇವಾಲಯದ ಇಓ ರವೀಂದ್ರ, ಎಇಓ ವೆಂಕಟೇಶ್‌ಪ್ರಸಾದ್, ಚಾಮುಂಡೇಶ್ವರಿ ದೇವಾಲಯದ ಇಓ ಯತಿರಾಜ್, ಆರ್.ಐ.ಪ್ರಕಾಶ್, ಹಾಗೂ ದೇವಾಲಯದ ಸಿಬ್ಬಂದಿ ಹಾಜರಿದ್ದರು.

ಹನಗೋಡಲ್ಲಿ ಬುಡಕಟ್ಟು ಜನರ ವಿಶಿಷ್ಟ ಕುಂಡೆ ಹಬ್ಬ ಆಚರಣೆ

ಹನಗೋಡು, ಮೇ 25(ಮಹೇಶ್)- ಹುಣಸೂರು ತಾಲೂಕಿನ ಹನಗೋಡು ಹೋಬಳಿ ಸುತ್ತ-ಮುತ್ತ ಬುಧವಾರ ಬುಡಕಟ್ಟು ಮತ್ತು ಗಿರಿಜನರು ಕುಂಡೆ ಹಬ್ಬವನ್ನು ವಿಶಿಷ್ಟವಾಗಿ ಆಚರಿಸಿದರು.

ದೇವರಿಗೆ ಹಿಗ್ಗಮುಗ್ಗಾ ಬೈದು, ಕಂಡ ಕಂಡವರನ್ನೂ ನಿಂದಿಸಿ ಅವರಿಂದ ಹಣ ಸಂಗ್ರಹಿಸಿ ಬಳಿಕ ದೇವರೇ ಕ್ಷಮಿಸಿ ಬಿಡಪ್ಪಾ ಎಂದು ಅಡ್ಡಬಿದ್ದು ಎಲ್ಲವನ್ನೂ ಮರೆತು ಬಿಡಿ ಎನ್ನುವುದೇ ಬುಡಕಟ್ಟು ಜನರ ವಿಶಿಷ್ಟವಾದ ಕುಂಡೆ ಹಬ್ಬವಾಗಿದೆ.



ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಹುಣಸೂರು ತಾಲೂಕು ಅಲ್ಲದೆ, ಕೊಡಗಿನಲ್ಲಿ ಬುಡಕಟ್ಟು ಜನರು ವಿಚಿತ್ರ ವೇಷಭೂಷಣಗಳೊಂದಿಗೆ ತಂಡ ತಂಡವಾಗಿ ಹಲವು ಭಾಗಗಳಿಗೆ ತೆರಳಿ ಕುಣಿಯುತ್ತಾ, ದೇವರನ್ನು ಬಯ್ಯುತ್ತಾ ಹಣ ಸಂಗ್ರಹಿಸುತ್ತಾರೆ. ಆದರೆ, ನಿಜವಾದ ಹಬ್ಬ ನಡೆಯುವುದು ಗುರುವಾರ. ಅಂದು ಬೇರೆಬೇರೆ ಕಡೆಗಳಿಗೆ ತೆರಳುವ ಎಲ್ಲಾ ತಂಡಗಳು ಗೋಣಿಕೊಪ್ಪಲು ಬಳಿಯ ದೇವರಪುರದಲ್ಲಿ ಸೇರುತ್ತಾರೆ. ನೂರಾರು ಮಂದಿ ಒಂದೆಡೆ ವಿಚಿತ್ರ ವೇಷ ಹಾಕಿಕೊಂಡು, ಮೈಗೆ ಬಣ್ಣ ಬಳಿದುಕೊಂಡು, ಟಿನ್ನು, ಡ್ರಮ್ ಸೇರಿದಂತೆ ಕೈಗೆ ಸಿಕ್ಕಿದ ವಸ್ತುಗಳಲ್ಲಿ ತಾಳ ಹಾಕುತ್ತಾ 'ಕುಂಡೆ ಕುಂಡೆ ಕುಹೂ ಕುಹೂ' ಎಂದು ಬಯ್ಯುತ್ತಾ ಸಾಗುತ್ತಾರೆ.

ಕೊಡಗು ಮತ್ತು ಮೈಸೂರು ಜಿಲ್ಲೆಯ ಹಲವು ಹಾಡಿಗಳು ಸೇರಿದಂತೆ ವಿವಿಧ ಕಡೆಗಳಲ್ಲಿ ಕೆಲಸ ಮಾಡುವ ಬುಡಕಟ್ಟು ಜನರು ಮೇ 26 ರಂದು ದೇವರಪುರದಲ್ಲಿ ಸೇರುತ್ತಾರೆ. ಬುಧವಾರ ಕೆಲವರು ಹನಗೋಡು ಪಂಚವಳ್ಳಿ ಹುಣಸೂರು ಸೇರಿದಂತೆ ಕೆಲವು ಕಡೆಗಳಿಗೆ ತೆರಳಿ ಕುಣಿಯುತ್ತಾ, ದೇವರನ್ನು, ಮನುಷ್ಯರನ್ನು ಬಯ್ಯುತ್ತಾ ಸಾಗಿದರು. ದಾರಿ ನಡುವೆ ಸಿಗುವವರಿಂದ ಹಣ ವಸೂಲಿ ಮಾಡಿದರು. ಇವರು ಬೈದರೆ ಯಾರೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಕೆಲವು ವರ್ಷಗಳಿಂದ ಕುಂಡೆ ಹಬ್ಬ ಹಾದಿ ತಪ್ಪುತ್ತಿದ್ದು, ಹೆಂಡ ಕುಡಿದು ಕಂಡ ಕಂಡವರಿಂದ ಹಣ ವಸೂಲಿ ಹಾಗೂ ಘರ್ಷಣೆ ನಡೆದ ಹಿನ್ನೆಲೆಯಲ್ಲಿ ಪೋಲಿಸರು ಕೆಲವೊಂದು ನಿಯಂತ್ರಣವನ್ನು ಹೇರಿದ್ದಾರೆ. ಅಲ್ಲದೆ ಹೆದ್ದಾರಿಯಲ್ಲಿ ವಾಹನಗಳನ್ನು ತಡೆದು ಬಲವಂತವಾಗಿ ಹಣ ವಸೂಲಿ ಮಾಡದಂತೆ ಎಚ್ಚರಿಕೆ ನೀಡಿದ್ದಾರೆ.

ನಾಳೆ ರಾಗಿ ಲಕ್ಷ್ಮಣಯ್ಯ ಪುಸ್ತಕ ಬಿಡುಗಡೆ

ಬನ್ನೂರು, ಮೇ 25- ಮಂಡ್ಯ ಜಿಲ್ಲೆಯ ಅಂಬೇಡ್ಕರ್ ಭವನದಲ್ಲಿ ಮೇ 27 ರಂದು ರಾಗಿ ಲಕ್ಷ್ಮಣಯ್ಯ ಪುಸ್ತಕವನ್ನು ಕರ್ನಾಟಕ ರಾಜ್ಯ ರೈತ ಸಂಘ ಮೂಲ ಸಂಘಟನೆಯ ರಾಜ್ಯಾಧ್ಯಕ್ಷೆ ಸುನಂದಾ ಜಯರಾಂ ಅವರು ಬಿಡುಗಡೆ ಮಾಡಲಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಹೋಬಳಿ ಅಧ್ಯಕ್ಷ ಬೀಡನಹಳ್ಳಿ ವೆಂಕಟೇಶ್ ತಿಳಿಸಿದರು.

ಅಂದು ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ವಹಿಸಲಿದ್ದು, ಕಾರ್ಯಕ್ರಮಕ್ಕೆ ವಿವಿಧ ರೈತ ಮುಖಂಡರು, ರೈತ ನಾಯಕರು, ಎಲ್ಲ ಹೋಬಳಿ, ಗ್ರಾಮ ಘಟಕದ ಅಧ್ಯಕ್ಷರು, ಜಿಲ್ಲಾ ಅಧ್ಯಕ್ಷರು ಸೇರಿದಂತೆ ಸಂಘದ ಪದಾಧಿಕಾರಿಗಳು ಕಾರ್ಯಕರ್ತರು ಭಾಗವಹಿಸುವಂತೆ ಕೋರಿದರು.

ಎಂ.ಪಿ.ವೆಂಕಟೇಶ ನಿಧನ

ಪಿರಿಯಾಪಟ್ಟಣ, ಮೇ 25-ತಾಲೂಕಿನ ಬೆಟ್ಟದಪುರ ಸಮೀಪದ ಮನುಗನಹಳ್ಳಿ ಗ್ರಾಮದ ಯಜಮಾನರಾದ ಎಂ.ಪಿ.ವೆಂಕಟೇಶ (70) ಅವರು ಇಂದು ಅನಾರೋಗ್ಯದಿಂದ ನಿಧನರಾದರು. ಇವರು ಹಲವಾರು ವರ್ಷಗಳಿಂದ ಆಧುನಿಕ ಕೃಷಿ ಪದ್ಧತಿಯಲ್ಲಿ ಪ್ರಗತಿಪರ ರೈತರಾಗಿದ್ದು, ಹಲವು ರೈತ ಪ್ರಶಸ್ತಿಗಳನ್ನು ಪಡೆದಿದ್ದಾರೆ.



ದಿವಂಗತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಮಾದೇವಮ್ಮ



ಹೆಚ್.ಡಿ.ಕೋಟೆ: ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಮಾದೇವಮ್ಮ (60) ಬುಧವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗ, ಗ್ರಾಮಸ್ಥರನ್ನು ಆಗಲಿದ್ದಾರೆ. ಅಂತ್ಯಕ್ರಿಯೆಯನ್ನು ಬುಧವಾರ ಸಂಜೆ ಬೀಚನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮೇ 29, ನರಸೀಪುರದಲ್ಲಿ ಬಸವ ಜಯಂತಿ ಆಚರಣೆ



ತಿ.ನರಸೀಪುರ, ಮೇ 25(ಎಸ್‌ಕೆ)- ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಯುವ ಘಟಕ ಹಾಗೂ ಬಸವ ಬಳಗದ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಗ್ರಾಮಾಂತರ ಬಸವ ಜಯಂತಿ ಹಾಗೂ ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಮತ್ತು ಡಾ.ಶಿವಕುಮಾರ ಮಹಾಸ್ವಾಮಿಗಳ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಮೇ 29 ರಂದು ಸಂಜೆ 4 ಗಂಟೆಗೆ ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದ ಪ್ರಚಾರ ಸಮಿತಿಯ ವಾಹನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ವಾಟಾಳು ಮಠದ ಸೂರ್ಯಸಿಂಹಾಸನ ಮಠಾಧ್ಯಕ್ಷ ಡಾ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿ, ರಾಜ್ಯ ಬಿಜೆಪಿ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕ್ಷೇತ್ರ ಶಾಸಕ ಎಂ.ಅಶ್ವಿನ್‌ಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಲೋಕಸಭಾ ಸದಸ್ಯ ವಿ.ಶ್ರೀನಿವಾಸ ಪ್ರಸಾದ್, ವರುಣಾ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯರಾದ ಮಂಜೇಗೌಡ, ಡಾ.ತಿಮ್ಮಯ್ಯ, ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ, ವಿವಿಧ ಮಠಾಧ್ಯಕ್ಷರು ಭಾಗವಹಿಸಲಿದ್ದಾರೆ ಎಂದರು.

ಪಟ್ಟಣದ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದಿಂದ ಪ್ರಮುಖ ರಸ್ತೆಯ ಮೂಲಕ ಅಂದು ಬೆಳಗ್ಗೆ 9 ಗಂಟೆಗೆ ಬಸವಣ್ಣನವರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಗುವುದು. ತಾಲೂಕಿನ ಜನತೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯಸ್ವಾಮಿ ಪ್ರಚಾರ ವಾಹನಕ್ಕೆ ಚಾಲನೆ ನೀಡಿದರು. ಇದೇ ವೇಳೆ ಮೆರವಣಿಗೆ ಸಮಿತಿ ಕೆಬ್ಬೆ ಹುಂಡಿ ಶಿವಕುಮಾರ್, ದಾಸೋಹ ಸಮಿತಿ ಅಧ್ಯಕ್ಷ ಸಿಬಿ ಹುಂಡಿ ಚಿನ್ನಸ್ವಾಮಿ, ವೇದಿಕೆ ಸಮಿತಿ ಅಧ್ಯಕ್ಷ ಎಂಎಲ್‌ಎ ಹುಂಡಿ ಪರಶಿವಮೂರ್ತಿ, ಸ್ವಾಗತ ಕಮಿಟಿ ಅಧ್ಯಕ್ಷ ಚೌಹಳ್ಳಿ ರಾಜೇಶ್ ಅವರನ್ನು ಇದೇ ವೇಳೆ ನೇಮಕ ಮಾಡಲಾಯಿತು.

ಯುವ ಘಟಕದ ಅಧ್ಯಕ್ಷ ಬೆನಕನಹಳ್ಳಿ ವಿಜಯ ಕುಮಾರ್, ಕಾರ್ಯದರ್ಶಿ ಕಿರಗಸೂರು ಮಹದೇವ ಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶಂಭು ದೇವನಪುರ ರಮೇಶ್, ಬಸವಣ್ಣ, ಮಲ್ಲಣ್ಣ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ವೀರೇಶ್, ಕುರುಬೂರು ಮಂಜು, ಎಂಎಲ್ ಹುಂಡಿಯ ಗೌರಿಶಂಕರ ಸ್ವಾಮೀಜಿ, ಸುನಿಲ್ ಕುಮಾರ್, ಕುರುಬೂರು ಶಿವು, ರಾಜೇಶ್. ಗುತ್ತಿಗೆದಾರ ನಾಗರಾಜು, ಮಣಿ ಮತ್ತಿತರಿದ್ದರು.

ಆರೋಗ್ಯ ರಕ್ಷಾ ಸಮಿತಿಗೆ ನೇಮಕ



ತಿ.ನರಸೀಪುರ, ಮೇ 25(ಎಸ್‌ಕೆ)- ತಾಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಆರೋಗ್ಯ ರಕ್ಷಾ ಸಮಿತಿ ಅಧಿಕಾರೇತರ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಿಸಿ ಬೈರಾಪುರ ಬಾಲರಾಜು ಅವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅದಿನ ಕಾರ್ಯದರ್ಶಿ ವಿ.ಪದ್ಮ ಅವರು ಆದೇಶ ನೀಡಿದ್ದಾರೆ

ಅತ್ತಿಗೋಡು ಗ್ರಾಮದಲ್ಲಿ ನೂತನ ಈಶ್ವರ ದೇವಾಲಯ ಉದ್ಘಾಟನೆ

ಇಂದು ಕಷ್ಟಪಟ್ಟರೆ ಮುಂದೆ ಸುಖವುಂಟು: ಶ್ರೀ ಸೋಮೇಶ್ವರ ರಾಜ ದೇಶಿಕೇಂದ್ರ ಸ್ವಾಮೀಜಿಗಳು

ದ್ರೋಹ ಬಗೆಯುವ ಹಿತೈಷಿಗಳನ್ನು ಎದುರಿಸಿ ನಿಮ್ಮ ಮುಂದೆ ಬರುತ್ತೇನೆ: ಬಿ.ವೈ. ವಿಜಯೇಂದ್ರ

ಬೆಟ್ಟದಪುರ, ಮೇ 25(ಶಿವದೇವ್)- ಕೆಲ ಹಿತೈಷಿಗಳು ಹಿಂದಿನಿಂದ ದ್ರೋಹ ಬಗೆಯುತ್ತಿದ್ದಾರೆ. ಅದನ್ನು ಎದುರಿಸಿ ನಿಮ್ಮ ಮುಂದೆ ಬರುವೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾರ್ಮಿಕವಾಗಿ ನುಡಿದಿದ್ದಾರೆ.

ಪಿರಿಯಾಪಟ್ಟಣ ಅತ್ತಿಗೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಈಶ್ವರ ದೇವಾಲಯವನ್ನು ಉದ್ಘಾಟಿಸಿದ ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮಗೆ ವಿಧಾನಪರಿಷತ್ ಟಿಕೆಟ್ ತಪ್ಪಿಸಿದವರಿಗೆ ಪರೋಕ್ಷವಾಗಿ ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ವೀರಶೈವ ಮಠಮಾನ್ಯಗಳು ಅನ್ನ ದಾಸೋಹ, ವಿದ್ಯ ದಾಸೋಹಗಳನ್ನು ನಡೆಸದಿದ್ದರೆ ರಾಜ್ಯದಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿ ಅಳಿವಿನ ಅಂಚಿಗೆ ಹೋಗುತಿತ್ತು. ವೀರಶೈವ ಸಮಾಜ ಎಲ್ಲಾ ಜನಾಂಗ ಶಾಂತಿ-ನೆಮ್ಮದಿಯಿಂದ ಬಾಳುವಂತೆ ಶಾಂತಿಯ ಸಂದೇಶವನ್ನು ನೀಡಿದೆ. ನಮ್ಮ ಮಠ-ಮಾನ್ಯಗಳು ಸರ್ವಜನಾಂಗದ ಶಾಂತಿಯ ತೋಟವಾಗಿದೆ ಎಂದು ತಿಳಿಸಿದರು. ತಮ್ಮ ತಂದೆ ಯಡಿಯೂರಪ್ಪನವರಂತೆ ನಾನೂ ಕೂಡ ಹೋರಾಟಗಳನ್ನು ಮಾಡಿ ಕಷ್ಟಗಳನ್ನು ಎದುರಿಸಿ ಜನರ ಮುಂದೆ ಬರುವೆ. ಮುಂದಿನ ದಿನಗಳಲ್ಲಿ ನಿಮ್ಮೆಲ್ಲರ ಬೆಂಬಲ ನಮ್ಮ ಮೇಲೆ ತೋರುವ ದಿನಗಳು ಬರುತ್ತವೆ. ಅಲ್ಲದೆ ಹಿತೈಷಿಗಳು ಹಿಂದಿನಿಂದ ದ್ರೋಹ ಬಗೆಯುತ್ತಿದ್ದಾರೆ. ಅವುಗಳನ್ನು ನಾನು ಎದರಿಸಿ ಮುಂದಿನ ದಿನಗಳಲ್ಲಿ ಮೇಲೆ ಬರುವ ದಿನಗಳು ಬರುತ್ತವೆ. ಆದ್ದರಿಂದ ನಾನು ಯಾವುದೇ ಹಿನ್ನಡೆಗೂ ಅಂಜುವ ಪ್ರಮೇಯವೇ ಇಲ್ಲ ಎಂದು ವಾಗ್ದಾಳಿ ನಡೆಸಿದರು.



ಬೆಟ್ಟದಪುರ, ಮೇ 25(ಶಿವದೇವ್)- ಮನುಷ್ಯ ಕಷ್ಟಗಳನ್ನು ಎದುರಿಸಿದಾಗ ಮಾತ್ರ ನೆಮ್ಮದಿ ಮತ್ತು ಸಂತೋಷವನ್ನು ಪಡೆಯಬಹುದು. ಆದ್ದರಿಂದ ಈಗ ಕಷ್ಟಪಟ್ಟರೆ ಮುಂದೆ ಜೀವನ ಸುಖಮಯವಾಗಿರುತ್ತದೆ ಎಂದು ಬಾಳೆ ಹೊನ್ನೂರು ಮಠದ ಜಗದ್ಗುರು ವೀರಸಿಂಹಾಸನಾಧೀಶ್ವರ ಶ್ರೀ ಸೋಮೇಶ್ವರ ರಾಜ ದೇಶಿಕೇಂದ್ರ ಸ್ವಾಮಿಗಳು ತಿಳಿಸಿದರು.

ಪಿರಿಯಾಪಟ್ಟಣ ತಾಲೂಕು ಅತ್ತಿಗೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಈಶ್ವರ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ಇಂದಿನ ಆಧುನಿಕ ಯುಗದಲ್ಲಿ ಸಂಸ್ಕಾರ ಮತ್ತು ಶಾಂತಿ ಮನುಷ್ಯನ ಜೀವನದಲ್ಲಿ ಅತ್ಯವಶ್ಯಕವಾಗಿದೆ ಎಂದರು. ಮನುಷ್ಯ ಕಷ್ಟವನ್ನು ಎದುರಿಸುವ ಶಕ್ತಿಯನ್ನು ಕೊಡು ಎಂದು ದೇವಾಲಯಗಳಿಗೆ ಹೋಗಿ ಬೇಡಿಕೊಳ್ಳುತ್ತಾನೋ ಅವನಿಗೆ ಭಗವಂತ ಶಕ್ತಿ ಕರುಣಿಸುತ್ತಾನೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಇಂದಿಗೂ ಮಠಗಳು ಮತ್ತು ದೇವಾಲಯಗಳಿಗೆ ಭೇಟಿ ನೀಡಿ ತಮ್ಮ ಕಷ್ಟಗಳು ಮತ್ತು ಸುಖಗಳನ್ನು ಮಠಗಳ ಮುಂದೆ ಪ್ರಸ್ತಾಪಿಸಿ ಸಲಹೆಗಳನ್ನು ಪಡೆದು ಅವುಗಳನ್ನು ಪರಿಹರಿಸಿಕೊಳ್ಳುತ್ತಾರೆ. ಇದರೊಂದಿಗೆ ವೀರಶೈವ ಮಠಗಳು ಹಾಗೂ ವೀರಶೈವ ಸಮಾಜ ಕೂಡ ಅವರಿಗೆ ಎಲ್ಲಾ ಸಮಯದಲ್ಲೂ ಬೆಂಬಲವಾಗಿ ನಿಂತಿದೆ ಎಂದು ತಿಳಿಸಿದರಲ್ಲದೆ, ಅತ್ತಿಗೊಡು ಗ್ರಾಮಸ್ಥರು ಈಶ್ವರ ದೇವಾಲಯವನ್ನು ನಿರ್ಮಿಸಿ ಊರಿಗೆ ಒಂದು ಶಾಂತಿಯ ವನವನ್ನು ನೀಡಿದ್ದಾರೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಬೆಟ್ಟದಪುರದ ಚೆನ್ನಬಸವ ದೇಶಿಕೇಂದ್ರ ಸ್ವಾಮಿಜಿ, ಗಾವಡಗೆರೆ ಮಠದ ನಟರಾಜ ಸ್ವಾಮಿಜಿ, ರಾವಂದೂರು ಮಠದ ಮೋಕ್ಷಪತಿ ಸ್ವಾಮಿಜಿ ಹಾಗೂ ಮೈಸೂರಿನ ಯೋಗಗುರುಗಳು ಮಾತನಾಡಿ, ಶಾಂತಿ ಮತ್ತು ನೆಮ್ಮದಿಗಾಗಿ ದೇವಾಲಯಗಳನ್ನು ನಿರ್ಮಿಸಿದ ಮಾತ್ರಕ್ಕೆ ಮನುಷ್ಯನಿಗೆ ಶಾಂತಿ ನೆಮ್ಮದಿಗಳು ಸಿಗುವುದಿಲ್ಲ. ನಿರ್ಮಲ ಮನಸ್ಸಿನಲ್ಲಿ ದೇವಾಲಯ ನಿರ್ಮಿಸಿ ಶಾಂತಿಯನ್ನು ಪಡೆದುಕೊಳ್ಳಬೇಕು. ಎಲ್ಲಾ ಜನಾಂಗದ ಎಲ್ಲಾ ಸಮಾಜದ ಜನರು ಶಾಂತಿ ಮತ್ತು ನೆಮ್ಮದಿಯನ್ನು ಪಡೆಯಲು ದೇವಾಲಯಗಳನ್ನು ನಿರ್ಮಿಸಲಾಗಿದೆ ಎಂದರು.

ಶಾಸಕ ಕೆ. ಮಹದೇವ್ ಮಾತನಾಡಿ, ಅತ್ತಿಗೋಡು ಗ್ರಾಮದಲ್ಲಿ ದೇವಾಲಯವನ್ನು ನಿರ್ಮಿಸಿ ಗ್ರಾಮದಲ್ಲಿ ಒಂದು ಶಾಂತಿಯ ತೋಟವನ್ನು ಸ್ಥಾಪಿಸಿದ್ದಾರೆ. ಊರಿನ ಜನರಿಗೆ ಸಂಸ್ಕೃತಿ ಮತ್ತು ಸಂಸ್ಕಾರಗಳ ಬಗ್ಗೆ ಹೆಚ್ಚಿನ ಒಲವು ಮೂಡಿ ಮುಂದಿನ ಪೀಳಿಗೆಗೆ ಭಾರತದ ಸಂಸ್ಕೃತಿ ಮತ್ತು ಕಲೆಗಳ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಸಿಗುವಂತಾಗಲಿ. ಅತ್ತಿಗೊಡು ಗ್ರಾಮಸ್ಥರು ನಿರ್ಮಿಸಿರುವ ಈಶ್ವರ ಸುಂದರ ಶಾಂತಿ ವನವಾಗಿದೆ ಎಂದು ತಿಳಿಸಿದರು.

ದೇವಾಲಯವನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಉದ್ಘಾಟಿಸಿದರು. ಸಮಾರಂಭದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷ ರುದ್ರೇಶ್, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮಾಜಿ ಶಾಸಕ ಹೆಚ್.ಸಿ. ಬಸವರಾಜು, ಒಳಚರಂಡಿ ಮಂಡಳಿ ನಿರ್ದೇಶಕ ಆರ್.ಟಿ. ಸತೀಶ್, ಜಿಪಂ ಮಾಜಿ ಸದಸ್ಯ ಕೆ.ಎಸ್. ಮಂಜುನಾಥ್, ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಚಂದ್ರಶೇಖರ್, ಮಾಜಿ ಅಧ್ಯಕ್ಷ ಮಂಜುನಾಥ್, ಬಿಜೆಪಿ ಅಧ್ಯಕ್ಷ ರಾಜೇಗೌಡ, ಕೌಲನಹಳ್ಳಿ ಸೋಮಶೇಖರ್, ಗ್ರಾಮದ ಮುಖಂಡರಾದ ಕಾಂತರಾಜು, ಎ.ಟಿ. ವಿರೂಪಾಕ್ಷ, ಕೆಂಡಗಣ್ಣ ಶೆಟ್ಟಿ, ಸ್ವದೇಶ್, ಮಹಾದೇವ್, ಕಿರಣ, ಸುರೇಶ್ ಉಪಸ್ಥಿತರಿದ್ದರು. ಬೆಟ್ಟದಪುರ, ಹರದೂರು, ಕಿತ್ತೂರು, ರಾವಂದೂರು, ಕೆ.ಆರ್. ನಗರ, ಕೇರಳಾಪುರ, ಕೊಣನೂರು ಸೇರಿದಂತೆ ವಿವಿಧ ಗ್ರಾಮದ ಮುಖಂಡರು ಹಾಗೂ ಅಪಾರ ಸಂಖ್ಯೆಯ ಮಹಿಳೆಯರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11.15ಕ್ಕೆ, ದಿ ಬ್ಯಾಡ್ ಗಾಯ್ಸ್ (3ಡಿ)(ಇಂ): ಮ.1.45ಕ್ಕೆ, ರಾ.9.55ಕ್ಕೆ, ಕೆಜಿಎಫ್ 2 (ಕ): ಸಂ.4ಕ್ಕೆ, ಧಾಕಾಡ್(ಹಿಂ): ರಾ.7.20ಕ್ಕೆ.
ಸ್ಕ್ರೀನ್ 2	ಗರುಡ(ಕ): ಬೆ.10.20ಕ್ಕೆ, ಪ್ರಾರಂಭ (ಕ): ಮ.1.10ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.15ಕ್ಕೆ, ಸಕುಟುಂಬ ಸಮೇತ (ಕ): ರಾ.7.30ಕ್ಕೆ, ಜೊ & ಜೊ(ಮ): ರಾ.9.50ಕ್ಕೆ.
ಸ್ಕ್ರೀನ್ 3	ಅಂಗರ್ (ಕ): ಬೆ.10.45ಕ್ಕೆ, ನೆಂಜುಕು ನೀದಿ (ತ): ಮ.1.30ಕ್ಕೆ, ಅವತಾರ ಪುರುಷ (ಕ): ಸಂ.4.15ಕ್ಕೆ, ಕೆಜಿಎಫ್ 2(ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಸಂ.4.35ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಬೂಲ್ ಬುಲಾಯ್ಯ (ಹಿಂ): ರಾ.7ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ದಿ ಬ್ಯಾಡ್ ಗಾಯ್ಸ್ (3ಡಿ)(ಹಿಂ): ಬೆ.11ಕ್ಕೆ, ರಾ.7.30ಕ್ಕೆ, ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಮ.1.15ಕ್ಕೆ, ಕೆಜಿಎಫ್ 2(ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಬೂಲ್ ಬುಲಾಯ್ಯ 2(ಹಿಂ): ಬೆ.9.45ಕ್ಕೆ, ಮ.12.45, ಸಂ.6.35ಕ್ಕೆ, ರಾ.9.40ಕ್ಕೆ, ಧಾಕಾಡ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 3	ಸಾರ ವಜ್ರ (ಕ): ಬೆ.10.40ಕ್ಕೆ, ಗರುಡ (ಕ): ಮ.1.25ಕ್ಕೆ, ಪ್ರಾರಂಭ (ಕ): ಸಂ.4.25ಕ್ಕೆ, ಅವತಾರ ಪುರುಷ (ಕ): ರಾ.7.15ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.10ಕ್ಕೆ, ಸಕುಟುಂಬ ಸಮೇತ (ಕ): ಮ.1.30ಕ್ಕೆ, ನೆಂಜಕು ನೀದಿ (ತ): ಮ.3.55ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.55ಕ್ಕೆ, ಜೊ & ಜೊ (ಮ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಕಟಿಂಗ್ ಶಾಪ್ (ಕ): ಬೆ.10.55ಕ್ಕೆ, ಪ್ರಾರಂಭ (ಕ): ಮ.1.25ಕ್ಕೆ, ಸಕುಟುಂಬ ಸಮೇತ (ಕ): ಸಂ.4.30ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.9ಕ್ಕೆ
ಸ್ಕ್ರೀನ್ 2	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಕಂಡ್ಹಿಡಿ ನೋಡನ (ಕ): ಮ.1.15ಕ್ಕೆ, ಕೆಜಿಎಫ್ 2 (ಕ): ಸಂ.4.30ಕ್ಕೆ, ರಾ.7.45ಕ್ಕೆ,
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಸಂ.6.45ಕ್ಕೆ,
ಸ್ಕ್ರೀನ್ 4	ಅಂಗರ್ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.10ಕ್ಕೆ, ಧಾಕಾಡ್ (ಹಿಂ): ಮ.3.50ಕ್ಕೆ, ನೆಂಜಕು ನೀದಿ (ತ): ಸಂ.6.20ಕ್ಕೆ, ಡಾನ್ (ತ): ರಾ.9ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್(ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್(ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಸರ್ಕಾರು ವಾರಿ ಪಾಠ (ತೆ)	3 ಪ್ರದರ್ಶನಗಳು
ಅಂಗಾರ್ (ಕ)	1 ಪ್ರದರ್ಶನ
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೆಜಿಎಫ್-2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಬೂಲ್ ಬೂಲಯ್ಯ-2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
21 ಅವರ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
21 ಅವರ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನೆಂಜುಕು ನೀದಿ (ತ)	4 ಪ್ರದರ್ಶನಗಳು
ಸಂಗಂ	
ಪ್ರಾರಂಭ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಕೈಲೈನ್	
ದಾಕಡ್ (ಹಿ)	4 ಪ್ರದರ್ಶನಗಳು

ಐಪಿಎಲ್ ಕ್ವಾಲಿಫೈಯರ್-2ಗೆ ಆರ್‌ಸಿಬಿ

ಟೂರ್ನಿಯಿಂದ ನಿರ್ಗಮಿಸಿದ ಲಖನೌ ಸೂಪರ್ ಜೈಂಟ್ಸ್

ಕೋಲ್ಕತ್ತಾ, ಮೇ 25- ಹೇಜಲ್‌ವುಡ್ ಅವರ ಮಾರಕ ಬೌಲಿಂಗ್ ರಜತ್ ಪಾಟಿದಾರ್ ಅವರ ಭರ್ಜರಿ ಶತಕದ ನೆರವಿನೊಂದಿಗೆ ಆರ್‌ಸಿಬಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ 14 ರನ್ನುಗಳಿಂದ ಜಯ ಗಳಿಸುವ ಮೂಲಕ ಐಪಿಎಲ್ ಕ್ವಾಲಿಫೈಯರ್-2 ಪಂದ್ಯಕ್ಕೆ ಅರ್ಹತೆ ಪಡೆದುಕೊಂಡಿದೆ.



ಇಂದಿಲ್ಲಿ ನಡೆದ ಐಪಿಎಲ್ ಪ್ಲೇ-ಆಫ್ ಪಂದ್ಯದಲ್ಲಿ ಆರ್‌ಸಿಬಿ ನೀಡಿದ 207 ರನ್ನುಗಳ ಮೊತ್ತವನ್ನು ಬೆನ್ನಟ್ಟಿದ ಲಖನೌ ಸೂಪರ್ ಜೈಂಟ್ಸ್ 6 ವಿಕೆಟ್ ನಷ್ಟಕ್ಕೆ 193 ರನ್ನುಗಳನ್ನು ಗಳಿಸಿ ಸೋಲುವ ಮೂಲಕ ಟೂರ್ನಿಯಿಂದ ಹೊರ ಬಿದ್ದಿತು. ಲಖನೌ ಸೂಪರ್ ಜೈಂಟ್ಸ್ ತಂಡದ ಪರ ನಾಯಕ ಕೆ.ಎಲ್. ರಾಹುಲ್ ನಡೆಸಿದ ಹೋರಾಟ ವಿಫಲವಾಯಿತು. ಅವರು 58 ಎಸೆತಗಳಲ್ಲಿ 79 ರನ್ (ಮೂರು ಬೌಂಡರಿ ಮತ್ತು ಐದು ಸಿಕ್ಸರ್) ಗಳಿಸಿ ಕೊನೇ ಗಳಿಗೆಯಲ್ಲಿ ಔಟಾಗಿದ್ದು ತಂಡದ ಸೋಲಿಗೆ ಕಾರಣವಾಯಿತು.

ಉಳಿದಂತೆ ದೀಪಕ್ ಹೂಡಾ ಕೂಡ ಅತ್ಯುತ್ತಮ ಬಿರುಸಿನ ಆಟ ಪ್ರದರ್ಶಿಸಿದರು. ಅವರು ಕೇವಲ 26 ಎಸೆತಗಳಲ್ಲಿ 4 ಸಿಕ್ಸರ್ ಮತ್ತು ಒಂದು ಬೌಂಡರಿ ನೆರವಿನೊಂದಿಗೆ 45 ರನ್ ಮಾಡಿದರು. ವೊಹ್ರಾ 19, ಸ್ಟೋಯಿನಿಸ್ 9, ಲೆವಿಸ್ 2, ಡಿ. ಚಮಿರಾ 11 ರನ್ ಮಾಡಿದರು. ಲಖನೌ ಸೂಪರ್ ಜೈಂಟ್ಸ್ ಆರಂಭ ನಿರಾಶದಾಯಕವಾಗಿತ್ತು. ತಂಡದ ಮೊತ್ತ 8 ರನ್ನುಗಳಾಗಿದ್ದಾಗ 6 ರನ್ ಮಾಡಿದ್ದ ಡಿ ಕಾಕ್ ಔಟಾದರು. ನಂತರ ಬಂದ ವೊಹ್ರಾ ಅವರು ವಿಕೆಟ್ ಚೆಲ್ಲಿ ಹೊರನಡೆದರು. ಆರ್‌ಸಿಬಿ ಪರ ಹೇಜಲ್‌ವುಡ್ ಮಾರಕ ಬೌಲಿಂಗ್ ಪ್ರದರ್ಶನ ನೀಡಿದರು. ಅವರು 4 ಓವರ್‌ಗಳಲ್ಲಿ 43 ರನ್ನುಗಳನ್ನ ನೀಡಿ ದುಬಾರಿಯೆನಿಸಿದರೂ ಮೂರು ಪ್ರಮುಖ ವಿಕೆಟ್‌ಗಳನ್ನು ಪಡೆದುಕೊಂಡರು. ಮೊಹಮ್ಮದ್ ಸಿರಾಜ್, ಹಸರಂಗ ಮತ್ತು ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ ರಜತ್ ಪಾಟಿದಾರ್ ಅವರ ಭರ್ಜರಿ ಸೆಂಚುರಿಯೊಂದಿಗೆ 4 ವಿಕೆಟ್ ನಷ್ಟಕ್ಕೆ 207 ರನ್ ಮಾಡಿತು.

ವಿರಾಟ್ ಕೊಹ್ಲಿ 23 ರನ್ ಮಾಡಿ ಔಟಾದರೆ, ಫಾಫ್ ಡು ಪ್ಲೆಸಿಸ್ ಖಾತೆಯನ್ನು ತೆರೆಯದೆ ನಿರ್ಗಮಿಸಿದರು. ನಂತರ ಬಂದ ರಜತ್ ಪಾಟಿದಾರ್ ಲಖನೌ ಸೂಪರ್ ಜೈಂಟ್ಸ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಪಾಟಿದಾರ್ ಕೇವಲ 54 ಎಸೆತಗಳಲ್ಲಿ 12 ಬೌಂಡರಿ ಮತ್ತು ಏಳು ಸಿಕ್ಸರ್‌ಗಳ ನೆರವಿನೊಂದಿಗೆ 112 ರನ್ ಮಾಡಿ ಅಜೇಯರಾಗಿ ಉಳಿದರು. ಎಂ. ಲೋಮ್ರೋರ್ 14 ರನ್ ಗಳಿಸಿದರು. ಡಿ. ಕಾರ್ತಿಕ್ 23 ಎಸೆತಗಳಲ್ಲಿ 5 ಬೌಂಡರಿ, ಒಂದು ಸಿಕ್ಸರ್ ನೆರವಿನೊಂದಿಗೆ 32 ರನ್ ಗಳಿಸಿದರು. ಲಖನೌ ಸೂಪರ್ ಜೈಂಟ್ಸ್ ತಂಡದ ಪರವಾಗಿ ಮೊಹ್ಸಿನ್ ಖಾನ್, ಕೃನಾಲ್ ಪಾಂಡ್ಯ, ಆವೇಶ್ ಖಾನ್, ರವಿ ಬಿಶ್ನೋಯ್ ತಲಾ ಒಂದು ವಿಕೆಟ್ ಹಂಚಿಕೊಂಡರು. ಆರ್‌ಸಿಬಿ ಗೆಲುವಿನೊಂದಿಗೆ ಕ್ವಾಲಿಫೈಯರ್ ಹಂತ ಪ್ರವೇಶಿಸಿದೆ.

ನನಗೆ ಎಂಎಲ್‌ಸಿ ಟಿಕೆಟ್ ತಪ್ಪಿದ್ದರಿಂದ ನನ್ನ ತಂದೆ ಬಿಎಸ್‌ವೈಗೆ ಹಿನ್ನಡೆ ಆಗಲ್ಲ



ಮೈಸೂರು, ಮೇ 25(ಆರ್‌ಕೆ)– ನನಗೆ ಎಂಎಲ್‌ಸಿ ಟಿಕೆಟ್ ಕೈತಪ್ಪಿದ್ದರಿಂದ ನಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ಅವರಿಗೆ ಹಿನ್ನಡೆಯಾಗಲ್ಲ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ದಕ್ಷಿಣ ಪದವೀಧರರ ಕ್ಷೇತ್ರದಿಂದ ಪರಿಷತ್ ಚುನಾವಣೆಯ ಪ್ರಚಾರ ಕೈಗೊಂಡಿರುವ ಅವರು, ಮೈಸೂರಿನ ಹೋಟೆಲ್‌ನಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿ, 40 ವರ್ಷಗಳಿಂದ ಪಕ್ಷ ಸಂಘಟನೆ ಮಾಡುತ್ತಿರುವ ಯಡಿಯೂರಪ್ಪ ಶಕ್ತಿ ಇಡೀ ರಾಜ್ಯಕ್ಕೆ ಗೊತ್ತಿದೆ. ನನಗೆ ಟಿಕೆಟ್ ಕೈತಪ್ಪಿದ ಮಾತ್ರಕ್ಕೆ ಅವರಿಗೆ ಹಿನ್ನಡೆಯಾಗದು ಎಂದರು.

ಚುನಾವಣಾ ಪ್ರಚಾರ ಸಭೆಯಲ್ಲಿ ಬಿಎಸ್‌ವೈ ಭಾವಚಿತ್ರ ಕೈಬಿಟ್ಟ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ಯಾರು ಕೈಬಿಟ್ಟಿದ್ದಾರೋ ಆ ಮಹಾನುಭಾವರನ್ನೇ ಕೇಳಬೇಕು ಎಂದ ಅವರು, ನನ್ನ ಮಗನನ್ನು ಎಂಎಲ್‌ಸಿ ಮಾಡಿ ಎಂದು ಅವರು ಯಾರ ಬಳಿಯೂ ವಕಾಲತ್ತು ವಹಿಸಿಲ್ಲ. ವಿಜಯೇಂದ್ರ ಏನಾಗಬೇಕೆಂಬುದನ್ನು ಮುಂದೆ ಪಕ್ಷ ತೀರ್ಮಾನಿಸುತ್ತದೆ ಎಂದರು. ಬಿಎಸ್‌ವೈ ಶಕ್ತಿ ಕುಂದಿಸಲು ಯಾರಿಂದಲೂ ಸಾಧ್ಯವಿಲ್ಲ. ಅವರಿಲ್ಲದೇ ಪಕ್ಷವಿಲ್ಲ. ಬಿಜೆಪಿಯಲ್ಲಿ ನನ್ನ ಹಾಗೆ ಕೆಲಸ ಮಾಡಿದ ಸಾವಿರಾರು ಕಾರ್ಯಕರ್ತರಿದ್ದಾರೆ. ಎಂಎಲ್‌ಸಿ ಚುನಾವಣೆಗೆ 20 ಮಂದಿ ಹೆಸರು ಶಿಫಾರಸು ಮಾಡಲಾಗಿತ್ತು ಆದರೆ ಆಯ್ಕೆಯಾಗಬೇಕಿರೋದು ಕೇವಲ ನಾಲ್ಕು ಮಂದಿ. ಅದನ್ನು ಹೈಕಮಾಂಡ್ ಮಾಡಿದೆ. ಯುವ ಕಾರ್ಯಕರ್ತರು ನನ್ನನ್ನು ಪ್ರೀತಿಮಾಡುತ್ತಾರೆ. ನನಗೆ ಟಿಕೆಟ್ ಸಿಗದಿದ್ದಕ್ಕೆ ಅವರಿಗೆ ಬೇಸರವಾಗಿರುವುದು ನಿಜ ಎಂದರು. ಬಿ.ಎಲ್.ಸಂತೋಷ್ ಟಿಕೆಟ್ ಕೈತಪ್ಪಿಸಿದರೆಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆ ರೀತಿಯ ಬೆಳವಣಿಗೆ ನಡೆದಿಲ್ಲ. ಅಭ್ಯರ್ಥಿ ಆಯ್ಕೆ ಮಾಡೋದು ಕೋರ್ ಕಮಿಟಿ ಮತ್ತು ಕೇಂದ್ರ ನಾಯಕರು. ಇದರಲ್ಲಿ ಯಾರೊಬ್ಬರ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂದು ತಿಳಿಸಿದರು.

ವಿಜಯೇಂದ್ರರಿಗೆ ಮಾತ್ರವಲ್ಲ, ಬಿಜೆಪಿಗೂ ಅಪ್ಪ ಯಡಿಯೂರಪ್ಪ!



ಮೈಸೂರು, ಮೇ 25 (ಪಿಎಂ)– ವಿಜಯೇಂದ್ರರಿಗೆ ಮಾತ್ರವಲ್ಲ, ಬಿಜೆಪಿಗೂ ಅಪ್ಪ ಯಡಿಯೂರಪ್ಪ! ಎಂದು ವಾಟಾಳ್ ನಾಗರಾಜ್ ಹೇಳಿದರು. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ವಿಜಯೇಂದ್ರರಿಗೆ ಬಿಜೆಪಿಯಿಂದ ಪರಿಷತ್ ಚುನಾವಣೆ ಟಿಕೆಟ್ ನೀಡದ ಬಗ್ಗೆ ಪ್ರತಿಕ್ರಿಯಿಸಿ, ಅವರಿಗೆ ಟಿಕೆಟ್ ಕೊಡಬೇಕಿತ್ತು. ರಾಜ್ಯದಲ್ಲಿ ಬಿಜೆಪಿ ಆಡಳಿತಕ್ಕೆ ಬರಲು ಯಡಿಯೂರಪ್ಪ ಕಾರಣ. ಹಾಗಾಗಿಯೇ ಬಿಜೆಪಿ ಅಪ್ಪ ಯಡಿಯೂರಪ್ಪ ಎಂದು ಹೇಳಿದ್ದು. ಯಡಿಯೂರಪ್ಪ, ರಾಮಚಂದ್ರೇಗೌಡ, ಕೈಲಾಸ್, ಈಶ್ವರಪ್ಪ ಇವರೆಲ್ಲರೂ ರಾಜ್ಯದಲ್ಲಿ ಬಿಜೆಪಿ ನೆಲೆಯೂರಲು ಕಾರಣ. ಸಂತೋಷ್ ಅಲ್ಲ. ಅವರು ಇತ್ತೀಚೆಗೆ ಬಂದವರು ಎಂದರು.

ಯಡಿಯೂರಪ್ಪ ಮನಸ್ಸು ಮಾಡಿದ್ದರೆ ಪರಿಷತ್‌ಗೆ 10 ಸೀಟು ಕೊಡಿಸುವ ಶಕ್ತಿ ಇತ್ತು. ಆದರೆ ಯಡಿಯೂರಪ್ಪ ಪುತ್ರನಿಗೆ ಟಿಕೆಟ್ ತಪ್ಪಿಸಿರುವುದು ನೋಡಿದರೆ ಯಡಿಯೂರಪ್ಪನವರನ್ನು ಮೂಲೆಗುಂಪು ಮಾಡಲು ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಅವರನ್ನು ಮೂಲೆಗುಂಪು ಮಾಡುವುದು ದೊಡ್ಡ ದ್ರೋಹ ಎಂದು ಹೇಳಿದರು.

ಮಂಡ್ಯದ ಬಳಿ ಕೇರಳ ಮೂಲದ ಹೆದ್ದಾರಿ ದರೋಡೆಕೋರರ ಬಂಧನ

ಮಂಡ್ಯ, ಮೇ 25– ಕೇರಳ ಮೂಲದ 7 ಹೆದ್ದಾರಿ ದರೋಡೆಕೋರರನ್ನು ಮಂಡ್ಯ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಹನಕೆರೆ ಗ್ರಾಮದ ಬಳಿ ಕೆಲವು ವ್ಯಕ್ತಿಗಳು ಸಂಶಯಾಸ್ಪದವಾಗಿ ವರ್ತಿಸುತ್ತಿದ್ದಾರೆ ಎಂಬ ಮಾಹಿತಿ ಪಡೆದ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಡಿ.22ರಂದು ರಾತ್ರಿ ಸದರಿ ಸ್ಥಳಕ್ಕೆ ತೆರಳಿದಾಗ ಅಲ್ಲಿದ್ದ ವ್ಯಕ್ತಿಗಳು ಪೊಲೀಸರನ್ನು ಕಂಡು ಪರಾರಿಯಾಗಲು ಪ್ರಯತ್ನಿಸಿದ ವೇಳೆ ಅವರನ್ನು ಬೆನ್ನತ್ತಿ ಪೊಲೀಸರು ಬಂಧಿಸಿದ್ದಾರೆ. ಕೇರಳದ ತ್ರಿಶೂರು ಜಿಲ್ಲೆಯ ಅಡ್ಪಾಟ್ ಗ್ರಾಮದ ಶಶಿ ಅಲಿಯಾಸ್ ಬೋಸ್ (49), ಕುರಿಚ್ಚರ್ ಗ್ರಾಮದ ಸಿಜೋ ಅಲಿಯಾಸ್ ಸಿಜೋ ಜಾಯ್ (32), ಅಂಬಲೂರು ಗ್ರಾಮದ ಪಿಎಂ. ಜತೀನ್ (29), ಪುದುಕ್ಕಾಡಿ ಗ್ರಾಮದ ಪಿ.ಎಂ. ಸುಬ್ಬೀಸ್ (30), ವಿ.ಎಸ್. ನಿಖಿಲ್ (34), ಕಣ್ಣೂರು ಜಿಲ್ಲೆ ಪಾಯಂ ಗ್ರಾಮದ ಅಜೀಬ್ (25), ಆಲಪ್ಪಿ ಜಿಲ್ಲೆಯ ಮನ್ನಂಚೇರಿ ಗ್ರಾಮದ ಅಬ್ದುಲ್ ಖಾದರ್ (25) ಬಂಧಿತರಾಗಿದ್ದು, ಇವರಿಂದ ಮೂರು ಕಬ್ಬಿಣದ ಪೈಪ್‌ಗಳು, ಕತ್ತಿ, ಹಗ್ಗ, ದೊಣ್ಣೆ, ಕಾರದಪುಡಿ ಪ್ಯಾಕೆಟ್‌ಗಳು ಹಾಗೂ ಮಾರುತಿ ರಿಡ್ಜ್ (ಕೆಎಲ್‌48 ಬಿ6041) ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಾಗುವ ಕೇರಳ ನೋಂದಣಿ ಕಾರುಗಳನ್ನು ಅಡ್ಡಗಟ್ಟಿ ಚಿನ್ನಾಭರಣ ಹಾಗೂ ನಗದನ್ನು ದೋಚುತ್ತಿದ್ದರು ಎಂದು ತಿಳಿದುಬಂದಿದೆ. ಆರೋಪಿಗಳು ಈಗಾಗಲೇ ಹಲವಾರು ಹೆದ್ದಾರಿ ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂಬ ಹಿನ್ನೆಲೆಯಲ್ಲಿ ಪೊಲೀಸರು ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ತಮ್ಮ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮದುವೆಯಾಗುವುದಾಗಿ ನಂಬಿಸಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಬೆತ್ತಲೆ ಫೋಟೋದೊಂದಿಗೆ ಬ್ಲಾಕ್‌ಮೇಲ್: ಪೊಲೀಸರಿಗೆ ದೂರು

ಮೈಸೂರು, ಮೇ 25– ಫೇಸ್‌ಬುಕ್‌ನಲ್ಲಿ ಪರಿಚಯವಾದ ಯುವಕನೋರ್ವ ವಿದ್ಯಾರ್ಥಿನಿ ಮೇಲೆ ನಿರಂತರವಾಗಿ ಅತ್ಯಾಚಾರ ನಡೆಸಿ, ಆಕೆಯ ಬೆತ್ತಲೆ ಫೋಟೋಗಳನ್ನು ಸಂಬಂಧಿಕರಿಗೆ ರವಾನಿಸಿರುವ ಬಗ್ಗೆ ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಹೆಚ್.ಡಿ.ಕೋಟೆ ತಾಲೂಕಿನ ಗ್ರಾಮವೊಂದರ ವಿದ್ಯಾರ್ಥಿನಿ ಕೋಲಾರದ ಕೆಜಿಎಫ್‌ನಲ್ಲಿರುವ ಕಾಲೇಜೊಂದರಲ್ಲಿ ಪ್ಯಾರಾ ಮೆಡಿಕಲ್ ವ್ಯಾಸಂಗ ಮಾಡುತ್ತಿದ್ದಾಗ 2021ರ ಮೇ 22ರಂದು ಫೇಸ್‌ಬುಕ್‌ನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲೂಕು ನಡವತ್ತಿ ಗ್ರಾಮದ ನಾಗರಾಜು (22) ಎಂಬಾತ ಪರಿಚಯವಾಗಿದ್ದಾನೆ. ಇವರ ಪರಿಚಯ ಪ್ರೇಮಕ್ಕೆ ತಿರುಗಿ ಆತ ವಿದ್ಯಾರ್ಥಿನಿಯನ್ನು ಕೆಜಿಎಫ್‌ನ ಬಸ್ ನಿಲ್ದಾಣಕ್ಕೆ ಕರೆಸಿಕೊಂಡು ನಂತರ ಅಂತರಗಂಗೆ ಬಳಿಯಿರುವ ಅರಣ್ಯಕ್ಕೆ ಕರೆದೊಯ್ದು ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರವೆಸಗಿದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ವೇಳೆ ಆತ ವಿದ್ಯಾರ್ಥಿನಿಯ ಬೆತ್ತಲೆ ಫೋಟೋಗಳನ್ನು ತೆಗೆದಿದ್ದು, ಅದನ್ನಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡುವ ಮೂಲಕ ಆಕೆಯನ್ನು ಹಲವು ಬಾರಿ ಅರಣ್ಯಕ್ಕೆ ಕರೆಸಿಕೊಂಡು ಅತ್ಯಾಚಾರ ಮಾಡಿದ್ದಲ್ಲದೆ, ಮದುವೆಯಾಗುವುದಾಗಿ ಪದೇ ಪದೆ ಹೇಳುತ್ತಿದ್ದ. ಅನಾರೋಗ್ಯ ಕಾರಣದಿಂದ ವಿದ್ಯಾರ್ಥಿನಿ ಗ್ರಾಮಕ್ಕೆ ಹಿಂದಿರುಗಿದಾಗ ಆಕೆಗೆ ಕರೆ ಮಾಡಿದ ನಾಗರಾಜು ಮದುವೆ ಮಾಡಿಕೊಳ್ಳುತ್ತೇನೆ ಬಾ ಎಂದು ಕರೆದಿದ್ದಾನೆ. ಆದರೆ ಆತ ಹೀಗೆ ಕರೆಸಿಕೊಂಡು ಅತ್ಯಾಚಾರವೆಸಗುತ್ತಿದ್ದರಿಂದ ವಿದ್ಯಾರ್ಥಿನಿ ಆತನ ಕರೆಗೆ ಸ್ಪಂದಿಸಿಲ್ಲ. ಕಳೆದ ಏಪ್ರಿಲ್ 29ರಂದು ವಿದ್ಯಾರ್ಥಿನಿಯ ಗ್ರಾಮಕ್ಕೆ ಬಂದಿದ್ದ ಆತ ತನ್ನ ಜೊತೆ ಬರುವಂತೆ ಕರೆದನಾದರೂ ಈತನ ಚಾಳಿ ಗೊತ್ತಿದ್ದರಿಂದ ಹೋಗಲು ನಿರಾಕರಿಸಿದ್ದಾಳೆ. ಈ ಸಂದರ್ಭದಲ್ಲಿ ಗ್ರಾಮದ ಕೆಲವರ ಮೊಬೈಲ್ ನಂಬರ್ ಅನ್ನು ಪಡೆದಿದ್ದ ಆತ ಕೆಲ ದಿನಗಳ ನಂತರ ವಿದ್ಯಾರ್ಥಿನಿಯ ತಾಯಿ ಎಂದು ಸಂಬಂಧಿಕರಿಗೆ ವಾಟ್ಸಾಪ್ ಮೂಲಕ ಆಕೆಯ ಬೆತ್ತಲೆ ಫೋಟೋಗಳನ್ನು ಕಳುಹಿಸಿದ್ದಾನೆ. ಕೊನೆಗೆ ಮದುವೆಯಾಗುವಂತೆ ಕೇಳಿದಾಗ ಜಾತಿ ಕಾರಣವನ್ನು ಮುಂದಿಟ್ಟು ಮದುವೆಗೆ ನಿರಾಕರಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾಳೆ. ಈ ಸಂಬಂಧ ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹದಗೆಡಿಸುತ್ತಿರುವ ಅಧಿಕಾರಿಗಳು

ಮಳೆಯಿಂದ ಉಂಟಾಗಿರುವ ಅಸ್ತವ್ಯಸ್ತತೆ, ಚರಂಡಿ ಹೂಳು, ತ್ಯಾಜ್ಯ ತೆಗೆಯಲು ಇನ್ನೂ ಮುಂದಾಗಿಲ್ಲ





ಮೈಸೂರು,ಮೇ 25(ಜಿಎ)– ಕಳೆದ ವಾರ ಸುರಿದ ಭಾರೀ ಮಳೆಯಿಂದ ಮೈಸೂರು ನಗರ ಅಸ್ತವ್ಯಸ್ತಗೊಂಡಿದ್ದು, ಪಾಲಿಕೆ ಅಧಿಕಾರಿಗಳು ರಾಜಕಾಲುವೆ, ಮಳೆ ನೀರು ಹರಿಯುವ ಚರಂಡಿಗಳಲ್ಲಿರುವ ಹೂಳು ಮತ್ತು ತ್ಯಾಜ್ಯವನ್ನು ತೆಗೆಯದೆ ನಿರ್ಲಕ್ಷ್ಯ ವಹಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿದಂತೆ ಅನೇಕ ಪ್ರಮುಖರು ಮುಂದಾಲೋಚನೆಯನ್ನಿಟ್ಟುಕೊಂಡು ನಗರವನ್ನು ಅಭಿವೃದ್ಧಿಪಡಿಸಿದ್ದಾರೆ. ಅದರಂತೆ ಹಲವಾರು ವರ್ಷಗಳಿಂದ ಯಾವುದೇ ಮಳೆ ಬಂದರು ಸಹ ನಗರದ ಜನರು ತತ್ತರಿಸಿರಲಿಲ್ಲ. ಆದರೆ ಈಗ ಒಂದು ಸಣ್ಣ ಮಳೆಯಾದರೂ ಮೈಸೂರು ನಗರದ ರಸ್ತೆಗಳು ಕಾಲುವೆಯಂತಾಗಿ ನೀರು ಹರಿದು ಹೋಗಲು ಸಾಧ್ಯವಾಗದೆ ಮನೆಗಳಿಗೆ ನೀರು ನುಗ್ಗಿ ಅಸ್ತವ್ಯಸ್ತವಾಗುತ್ತಿದೆ.

ಮಳೆ ಅನಾಹುತಗಳು: ಬೋಗಾದಿಯ ಕೆರೆ ಕೋಡಿ ಒಡೆದು ದೊಡ್ಡ ಅನಾಹುತ ಉಂಟಾಗಿತ್ತು. ಮಣಿಪಾಲ್ ಆಸ್ಪತ್ರೆ ವೃತ್ತದಿಂದ ದೇವೇಗೌಡ ವೃತ್ತದವರೆಗಿನ ರಿಂಗ್ ರಸ್ತೆಯಲ್ಲಿ ವಾಹನಗಳು ತೇಲಿದ್ದವು. ಇಸ್ಕಾನ್, ಮರಳವಾಡಿ ಸುತ್ತಲೂ ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿತ್ತು. ರಾಜಕಾಲುವೆ ಕಣ್ಮರೆಯಾಗಿ ಕುವೆಂಪುನಗರ, ಸರಸ್ವತಿಪುರಂ, ಟಿ.ಕೆ.ಬಡಾವಣೆಗಳಲ್ಲಿನ ಮನೆಗಳಿಗೂ



ನೀರು ನುಗ್ಗಿತ್ತು. ಬನ್ನಿಮಂಟಪದಲ್ಲಿರುವ ಕೆಸರೆ ಬಡಾವಣೆ, ತಿಲಕ್ ನಗರ, ಎನ್.ಆರ್.ಮೊಹಲ್ಲಾ, ಪುಲಕೇಶಿ ನಗರದಲ್ಲಿಯೂ ಮನೆಗಳಿಗೆ ನೀರು ಹರಿದಿತ್ತು. ಶಾಂತಿನಗರ, ಗೌಸಿಂಯಾನಗರ, ಜೆ.ಸಿ.ನಗರ, ದೇವನೂರು ಕೆರೆ ಸಮೀಪದ ಮನೆಗಳ ಅಲ್ಪ ಮಳೆ ಬಂದರೂ ಜಲಾವೃತಗೊಂಡು ಜನಜೀವನ ಅಸ್ತವ್ಯಸ್ತವಾಗಿತ್ತು. ಹೀಗಾಗಿ ಈ ಬಾರಿ ಅನಾಹುತಕ್ಕೂ ಮುನ್ನ ಎಚ್ಚರಿಕೆಯ ಕ್ರಮಗಳನ್ನು ಪಾಲಿಕೆ ತೆಗೆದುಕೊಳ್ಳಬೇಕಿದೆ.

ಚರಂಡಿಗಳೇ ಕಣ್ಮರೆ: ಮೈಸೂರಿನ ಬಹುತೇಕ ಸ್ಥಳಗಳಲ್ಲಿ ಮನೆಗಳ ಮುಂದೆ ಇರುವ ಮಳೆ ನೀರು ಹರಿಯುವ ಚರಂಡಿಗಳ ಮೇಲೆ ಸ್ಲಾಬ್‌ಗಳನ್ನು ಅಳವಡಿಸಿ ವಾಹನಗಳನ್ನು ನಿಲ್ಲಿಸಲು ಸುಸಜ್ಜಿತವಾದ ಸ್ಥಳವನ್ನು ಮಾಡಿಕೊಂಡು ಮಳೆ ನೀರು ಹರಿಯುವ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯದಂತ ಸ್ಥಿತಿ ಇದ್ದು, ಬಹುತೇಕ ಒಳಚರಂಡಿಗಳು ಕಣ್ಮರೆಯಾಗಿವೆ.

ತ್ಯಾಜ್ಯ, ಹೂಳು ತುಂಬಿರುವ ರಾಜಕಾಲುವೆ: ಮೈಸೂರು ಮಹಾರಾಜರ ಕಾಲದಲ್ಲೇ ಒಳಚರಂಡಿ ವ್ಯವಸ್ಥೆಗೆ ಹೆಚ್ಚು ಒತ್ತು ನೀಡಿದ್ದು, ಅದರಂತೆ ಹಲವೆಡೆ ರಾಜಕಾಲುವೆ ನಿರ್ಮಾಣ ಮಾಡಿದ್ದರು. ಆದರೆ ಈಗ ಅನೇಕ ರಾಜಕಾಲುವೆಗಳ ಮೇಲೆ ಅಕ್ರಮ ಕಟ್ಟಡಗಳು ನಿರ್ಮಾಣವಾಗಿವೆ. ಉಳಿದಿರುವ ರಾಜಕಾಲುವೆಗಳ ಸ್ಥಿತಿ ಕೇಳುವ ಹಾಗೇ ಇಲ್ಲವಾಗಿದೆ. ನಗರದ ಹೃದಯ ಭಾಗವಾದ ತ್ಯಾಗರಾಜ ರಸ್ತೆ ಚಿಕ್ಕ ಆಂಜನೇಯ ಸ್ವಾಮಿ ದೇವಾಲಯದ ಹಿಂಭಾಗವಿರುವ ರಾಜಕಾಲುವೆಯಲ್ಲಿ ಹೂಳು ತುಂಬಿ ಕೆಲ ಗಿಡಗಳು ಸಹ ಸಮೃದ್ಧಿಯಾಗಿ ಬೆಳೆದಿದೆ ಮತ್ತು ಎಂ.ಜಿ ರಸ್ತೆಯ ಬಳಿ ಇರುವ ಎರಡು ರಾಜಕಾಲುವೆಗಳಲ್ಲಿ ಸಂಪೂರ್ಣ ತ್ಯಾಜ್ಯದ ರಾಶಿಯೇ ತುಂಬಿದ್ದು, ಇದನ್ನು ಯಾರು ಗಮನಿಸಿಲ್ಲವೆ ಎಂಬ ಪ್ರಶ್ನೆ ಮೂಡುತ್ತಿದೆ. ಮಳೆಗಾಲ ಆರಂಭವಾಗಲು ಬೆರಳೆಣಿಕೆಯಷ್ಟು ದಿನಗಳಿದ್ದು, ಮಳೆಯಿಂದ ನಗರದಲ್ಲಿರುವ ಸಮಸ್ಯೆಗಳಿಗೆ ಎಚ್ಚೆತ್ತುಕೊಳ್ಳದಿದ್ದರೇ ಈ ಬಾರಿಯಾದ ಅನಾಹುತಗಳಿಗಿಂತ ಹೆಚ್ಚು ಸಮಸ್ಯೆಗಳು ಆಗಬಹುದು ಎಂದು ಸಾರ್ವಜನಿಕ ವಲಯದಲ್ಲಿ ಮಾತುಗಳು ಕೇಳಿಬರುತ್ತಿದೆ.

ಮೈಸೂರು ಉತ್ಸವ ಇನ್ನೂ 20 ದಿನಗಳ ವಿಸ್ತರಣೆ

ಮೈಸೂರು: ಸಾರ್ವಜನಿಕರ ಒತ್ತಾಯದ ಮೇರೆಗೆ ಮೈಸೂರು ಉತ್ಸವ–2022 ವಸ್ತು ಪ್ರದರ್ಶನವನ್ನು 20 ದಿನಗಳ ಕಾಲ ವಿಸ್ತರಿಸಲಾಗಿದೆ. ನಗರದ ದೊಡ್ಡಕೆರೆ ಮೈದಾನದ ಜೆಎಸ್‌ಎಸ್ ಗ್ರೌಂಡ್‌ನಲ್ಲಿ ನಡೆಯುತ್ತಿರುವ ಮೈಸೂರು ಉತ್ಸವ ಜೂನ್ 19ರಂದು ಮುಕ್ತಾಯಗೊಳ್ಳಲಿದೆ. ಆಯೋಜಕರು ಸ್ಪೇಸ್ ಟೂರ್ ಮೂಲಕ ಆಕರ್ಷಿಸಿದ್ದರು. ಇದೀಗ ರೊಬೊಟಿಕ್ ಪ್ರಾಣಿಗಳು ಸಹ ಒಂದೇ ಸೂರಿನಡಿ ಲಭ್ಯವಿದ್ದು, ಇದು ಜೊತೆಗೆ ಜೂನ್ 1ರಿಂದ 19ರವರೆಗೆ ಮಾನ್ಸೂನ್ ಫುಡ್ ಮೇಳ ಸಹ ನಡೆಯಲಿದೆ.

ಬಿಸಿನೆಸ್ ಪಾರ್ಟ್‌ನರ್ ಮಾಡಿಕೊಳ್ಳುವುದಾಗಿ ವಿಶ್ವಾಸ ಮೂಡಿಸಿ 2 ಲಕ್ಷ ವಂಚನೆ

ಮೈಸೂರು, ಮೇ 25– ಕಂಪನಿಯೊಂದರಲ್ಲಿ ಬಿಸಿನೆಸ್ ಪಾರ್ಟ್‌ನರ್ ಮಾಡಿಕೊಳ್ಳುವುದಾಗಿ ಹೇಳಿ, 2 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಕುವೆಂಪುನಗರ ನಿವಾಸಿ ಎನ್. ಮೋಹನ್ ಹಣ ಕಳೆದುಕೊಂಡವರಾಗಿದ್ದು, 2020ರಲ್ಲಿ ಫೇಸ್‌ಬುಕ್‌ನಲ್ಲಿ ಬಂದಿದ್ದ ಜಾಹೀರಾತನ್ನು ನೋಡಿ, ವೇ ಲಿಂಕ್ ಪಿಟ್ ಸ್ಟಾಪ್ ಸೆಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಗೆ 2 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದ್ದಾರೆ. ಕಂಪನಿಯು ಇವರನ್ನು ಮೈಸೂರು ಜಿಲ್ಲೆಗೆ ಬಿಸಿನೆಸ್ ಪಾರ್ಟ್‌ನರ್ ಮಾಡಿಕೊಂಡು ಕೇವಲ 4 ತಿಂಗಳು ತಲಾ 10 ಸಾವಿರ ರೂ.ಗಳಂತೆ ಸಂದಾಯ ಮಾಡಿದ್ದಾರೆ. ಆ ನಂತರ ಯಾವುದೇ ಹಣವನ್ನು ಕೊಡದೇ ಮೋಸ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ತಾವು ಹಣ ಹೂಡಿಕೆ ಮಾಡಿದ ಕಂಪನಿ ಜೊತೆ ಅಗ್ರಿಮೆಂಟ್ ಕಾಪಿಗೆ ಸಹಿ ಪಡೆಯಲು ಮೈಸೂರಿನ ಕುವೆಂಪು ನಗರದಲ್ಲಿರುವ ಮೈಲಾರಿ ಹೋಟೆಲ್‌ಗೆ ರೇಷ್ಮಾ ಚಿನ್ನಸ್ವಾಮಿ ಎಂಬುವರು ಬಂದಿದ್ದರು. ನಂತರ ದಾಖಲೆಗಳಿಗೆ ಕಂಪನಿಯ ಎಂಡಿ ರಂಜನ್ ಸತೀಶ್ ಎಂಬುವರು ಸಹಿ ಮಾಡಿ ತಮ್ಮ ವಿಳಾಸಕ್ಕೆ ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಿದ್ದರು. ತಾವು, ಅಗ್ರಿಮೆಂಟ್‌ಗೆ ಸಹಿ ಪಡೆಯಲು ಬಂದಿದ್ದ ರೇಷ್ಮಾ ಚಿನ್ನಸ್ವಾಮಿ ಹೊರತುಪಡಿಸಿ ಬೇರೆ ಯಾರನ್ನೂ ನೋಡಿಲ್ಲ. ವ್ಯವಹಾರಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಮಾತುಕತೆ ನಡೆಯುತ್ತಿತ್ತು. ತಾವು ಹೂಡಿಕೆ ಮಾಡಿದ ಹಣ ಬೆಂಗಳೂರಿನ ಇಂದಿರಾನಗರದಲ್ಲಿರುವ ಬ್ಯಾಂಕ್ ಖಾತೆಗೆ ಜಮೆ ಆಗಿದೆ ಎಂದು ದೂರಿನಲ್ಲಿ ತಿಳಿಸಿರುವ ಮೋಹನ್, ತಾವು ಮಾತ್ರವಲ್ಲದೇ ಬೇರೆ ರಾಜ್ಯದ ಹಲವು ಜನರು ಈ ಕಂಪನಿಯಿಂದ ಮೋಸ ಹೋಗಿದ್ದಾರೆ ಎಂದು ತಿಳಿಸಿದ್ದಾರೆ. ಈ ಸಂಬಂಧ ರಂಜನ್ ಸತೀಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಕುವೆಂಪುನಗರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಚೈನಾ ಯಂತ್ರೋಪಕರಣ ಸರಬರಾಜು ಭರವಸೆ ನೀಡಿ ಉದ್ಯಮಿಗೆ ವಂಚನೆ

ಮೈಸೂರು, ಮೇ 25– ಪ್ಯಾಕಿಂಗ್ ಇಂಡಸ್ಟ್ರೀಸ್‌ಗೆ ಆಧುನಿಕ ಯಂತ್ರೋಪಕರಣಗಳನ್ನು ಚೈನಾ ಕಂಪನಿಯಿಂದ ತರಿಸಿ ಕೊಡುವುದಾಗಿ ನಂಬಿಸಿ 2.55 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 3ನೇ ಹಂತದಲ್ಲಿ ಇರುವ ಕುಸುಮಾ ಪ್ಯಾಕಿಂಗ್ ಇಂಡಸ್ಟ್ರೀಸ್‌ಗೆ ಆಧುನಿಕ ಯಂತ್ರಗಳನ್ನು ತಮ್ಮ ತಂದೆ ಪುಟ್ಟರಂಗಸ್ವಾಮಿ ಮಾಲೀಕತ್ವದ ಮಲ್ಲಿ ಇಂಪೆಕ್ಸ್ ಕಂಪನಿಯಿಂದ ಕಡಿಮೆ ಬೆಲೆಗೆ ಚೈನಾದಿಂದ ತರಿಸಿಕೊಡುವುದಾಗಿ ಕಂಪನಿಯ ಮೇಲ್ವಿಚಾರಕ ಕಾರ್ತಿಕ್ ಸ್ನೇಹಿತ ಬೆಂಗಳೂರಿನ ಹೇಮಂತ್‌ಕುಮಾರ್ ಎಂಬಾತ ಕಾರ್ತಿಕ್ ಅವರನ್ನು ನಂಬಿಸಿ 2,55,44,452 ರೂ.ಗಳನ್ನು ಆತನ ಪತ್ನಿ ರಮ್ಯಾಶ್ರೀ ಅವರ ಎಕ್ಸೋಟೇರಿಯರ್ ಎಂಟರ್‌ಪ್ರೈಸಸ್ ಕಂಪನಿಯ ಎಸ್‌ವಿಸಿ ಬ್ಯಾಂಕ್ ಖಾತೆಗೆ 2019ರಲ್ಲಿ ವರ್ಗಾವಣೆ ಮಾಡಿಕೊಂಡಿದ್ದಾನೆ. ಆದರೆ, ಯಂತ್ರೋಪಕರಣಗಳನ್ನು ಸರಬರಾಜು ಮಾಡದೇ ಎಸ್‌ವಿಸಿ ಬ್ಯಾಂಕ್ ಖಾತೆಯಿಂದ ಚೈನಾ ಕಂಪನಿಗೆ ಹಣ ವರ್ಗಾವಣೆ ಆಗಿರುವಂತೆ ಹಾಗೂ ಭಾರತೀಯ ಕಸ್ಟಮ್ಸ್ ಇಲಾಖೆಯ ದಾಖಲಾತಿಗಳನ್ನು ನಕಲಿಯಾಗಿ ಸೃಷ್ಟಿಸಿ ಕುಸುಮಾ ಪ್ಯಾಕಿಂಗ್ ಇಂಡಸ್ಟ್ರೀಸ್‌ಗೆ ನೀಡಿ ವಂಚನೆ ಎಸಗಿದ್ದಾನೆ ಎಂದು ವಿಜಯನಗರ ಠಾಣೆಗೆ ದೂರು ನೀಡಿರುವ ಕುಸುಮಾ ಕಂಪನಿಯ ಮ್ಯಾನೇಜರ್ ಆರ್. ಚಂದ್ರು, ಈ ಬಗ್ಗೆ ಕೇಳಲು ಹೋದಾಗ ಅವಾಚ್ಯ ಶಬ್ದಗಳಿಂದ ಬೈದು, ಬೆದರಿಕೆ ಹಾಕಿದ್ದಾರೆ ಎಂದು ತಿಳಿಸಿದ್ದಾರೆ.

ಈ ಸಂಬಂಧ ಪೊಲೀಸರು ಹೇಮಂತ್‌ಕುಮಾರ್, ಆತನ ತಂದೆ ಮಲ್ಲಿ ಇಂಪೆಕ್ಸ್ ಕಂಪನಿಯ ಮಾಲೀಕ ಪುಟ್ಟರಂಗಸ್ವಾಮಿ, ಪತ್ನಿ ಎಕ್ಸೋಟೇರಿಯರ್ ಕಂಪನಿಯ ರಮ್ಯಶ್ರೀ ವಿರುದ್ಧ ಭಾರತೀಯ ದಂಡ ಸಂಹಿತೆ 506, 34, 504, 406, 420, 471, 468ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.